Swabhimani Sahakari
Pages : 33 / 20₹
Volume - 20
Issue - 07
July - 2023

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ನವದೆಹಲಿಯಲ್ಲಿ 17ನೇ ರಾಷ್ಟ್ರೀಯ ಸಹಕಾರ ಸಮ್ಮೇಳನ

## ದೇಶದ ಆರ್ಥಿಕಾಭಿವೃದ್ಧಿಗೆ ಸಹಕಾರ ಕ್ಷೇತ್ರ ಉತ್ತಮ ಕೊಡುಗೆ ನೀಡುತ್ತಿದೆ




ಕೇಂದ್ರ ಸರ್ಕಾರದಿಂದ, ಕಳೆದ 4 ವರ್ಷಗಳಲ್ಲಿ ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಡಿ ರೂ.2.5 ಲಕ್ಷ ಕೋಟಿಗಳನ್ನು ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ತುಂಬಲಾಗಿದೆ. ಪ್ರತೀ ವರ್ಷ ರಸಗೊಬ್ಬರ ಸಬ್ಸಿಡಿಗಾಗಿ ರೂ.10 ಲಕ್ಷ ಕೋಟಿ ಅನುದಾನ ನೀಡಲಾಗುತ್ತಿದೆ. ಹೀಗೆ ಪ್ರತಿ ವರ್ಷ ಯಾವುದಾದರೊಂದು ರೂಪದಲ್ಲಿ, ದೇಶದ ಪ್ರತಿ ರೈತರಿಗೆ ಸರಾಸರಿ ರೂ. 50,000ಗಳನ್ನು ನಮ್ಮ ಸರ್ಕಾರ ನೀಡುತ್ತಿದೆ.

- ಶ್ರೀ ನರೇಂದ್ರ ಮೋದಿ, ಪ್ರಧಾನ ಮಂತ್ರಿ



ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ
ನಾವು ಸಹಕಾರ ಕ್ಷೇತ್ರದಲ್ಲಿ ಹಲವು ಯೋಜನೆಗಳನ್ನು ಕೈಗೊಂಡಿದ್ದೇವೆ

- ಶ್ರೀ ಅಮಿತ್ ಶಾ, ಕೇಂದ್ರ ಗೃಹ ಹಾಗೂ ಸಹಕಾರ ಸಚಿವರು

ಜುಲೈ 20ರಿಂದ
ಸಂಸತ್ತಿನ ಮುಂಗಾರು ಅಧಿವೇಶನ

ಜುಲೈ 3 ರಿಂದ
ವಿಧಾನ ಮಂಡಳ ಅಧಿವೇಶನ,
7ರಂದು ಮುಖ್ಯಮಂತ್ರಿ
ಅವರಿಂದ ಬಜೆಟ್ ಮಂಡನೆ





ಸೌಹಾರ್ದ ಸಹಕಾರಿಗಳ
ಸಂಖ್ಯೆ : 5962

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1636



ಜಿ. ನಂಜನಗೌಡ

"ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನಮಸ್ಕಾರಗಳು. ಗುರು ಪೂರ್ಣಿಮೆ ಹಾಗೂ ಭೀಮನ ಅಮಾವಾಸ್ಯೆ ಮತ್ತು ಮೊಹರಂ ಹಬ್ಬಗಳ ಹಾರ್ದಿಕ ಶುಭಾಶಯಗಳು."

# ಸೌಹಾರ್ದ ಸಹಕಾರಿಗಳ ಗುಣಮಟ್ಟದ ಕಾರ್ಯನಿರ್ವಹಣೆಗಾಗಿ ಆಡಳಿತ ಪರಿಣಿತಿ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ನಮಸ್ಕಾರಗಳು. ಗುರು ಪೂರ್ಣಿಮೆ ಹಾಗೂ ಭೀಮನ ಅಮಾವಾಸ್ಯೆ ಮತ್ತು ಮೊಹರಂ ಹಬ್ಬಗಳ ಹಾರ್ದಿಕ ಶುಭಾಶಯಗಳು.

ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರುಗಳಿಗಾಗಿ ದಿನಾಂಕ 25, 26 ಹಾಗೂ 27 ಜೂನ್ 2023 ರಂದು ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿ ಹಾಗೂ ಪ್ರಯೋಜನಕಾರಿಯಾಗಿತ್ತು. ಮೈಸೂರಿನ ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಸ್ವಾಮೀಜಿಯವರ ಆಶೀರ್ವಾದ, ಹಿತವಚನ ಹಾಗೂ ಶುಭಹಾರೈಕೆಯೊಂದಿಗೆ ಪ್ರಾರಂಭವಾದ ತರಬೇತಿ ಕಾರ್ಯಕ್ರಮದಲ್ಲಿ ಕ್ಷೇತ್ರದ ಸಹಕಾರ ಅಂದರೆ ಕೊಡುವುದು ಹಾಗು ತೆಗೆದುಕೊಳ್ಳುವುದು ಎರಡು ಇರಬೇಕಾಗುತ್ತದೆ. ಅದರಂತೆ ಚಾಣಕ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಯಶವಂತ ಡೋಂಗ್ರೆ ಯವರು, ಶ್ರೀ ಸಿ. ಎನ್ ಪರಶಿವಮೂರ್ತಿಯವರು, ಹಾಗೂ ಡಾ. ಎ.ಆರ್. ಶ್ರೀನಾಥ ಇವರುಗಳು ಮಂಡಿಸಿದ ವಿಷಯಗಳು ಈ ಕ್ಷೇತ್ರದ ಬಗ್ಗೆ ನೀಡಿದ ಮಾಹಿತಿ ಹಾಗೂ ಜ್ಞಾನ ಸಹಕಾರಿ ಕ್ಷೇತ್ರದ ಗುಣಮಟ್ಟ ಅಭಿವೃದ್ಧಿಗೆ ಉತ್ತಮ ಸಲಹೆ ಎಂದು ಭಾವಿಸುತ್ತೇನೆ.

ಸಂಯುಕ್ತ ಸಹಕಾರಿ ಒಂದು ಸ್ವಯಂ ನಿಯಂತ್ರಣ ಸಂಸ್ಥೆಯಾಗಿ ಬಾಹ್ಯದ ಒತ್ತಡವಿಲ್ಲದೆ ಕಾರ್ಪೋರೇಟ್ ಸಂಸ್ಥೆಯಾಗಿ ಕಾರ್ಯನಿರ್ವಹಿಸಬೇಕಾದ ಅವಶ್ಯಕತೆಯ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಮಂಡಿಸಿದ ವಿಷಯದ ಬಗ್ಗೆ ಸಂಯುಕ್ತ ಸಹಕಾರಿಗಳು ನಡೆಸಿದ ಚರ್ಚೆ ನಿರ್ದೇಶಕರುಗಳು ಮಂಡಿಸಿದ ಹಲವಾರು ಸಲಹೆಗಳು ಸಂಯುಕ್ತ ಸಹಕಾರಿ ವಿಶನ್ 2030 ಸಿದ್ಧಪಡಿಸುವಲ್ಲಿ ಸಹಕಾರಿಯಾಗಿವೆ.

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬಂದಿದೆ. ಸಾಕಷ್ಟು ಪ್ರಗತಿ ಸಾಧಿಸಿದೆ. ಸಾಧಿಸಬೇಕಾದುದು ಸಾಕಷ್ಟಿದೆ. ಸಂಯುಕ್ತ ಸಹಕಾರಿಯ ನಿರ್ದೇಶಕರಿಗೆ ನೀಡಿದ ಆಡಳಿತ ಪರಿಣಿತಿ ತರಬೇತಿ ಮಾದರಿಯಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದ ಕಾರ್ಯನಿರ್ವಹಣೆಗೆ ಪ್ರಯತ್ನಿಸುವ ಪ್ರಕ್ರೀಯೆಗೆಲ್ಲರೂ ಕೈಜೊಡಿಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಸಹಕಾರ ಕ್ಷೇತ್ರದ ಪ್ರತಿಯೊಬ್ಬರಿಗೂ ಶಿಕ್ಷಣ ಹಾಗೂ ತರಬೇತಿ ನೀಡುವಲ್ಲಿ ಸಂಯುಕ್ತ ಸಹಕಾರಿಯು ಸಂಪೂರ್ಣ ಬದ್ಧತೆಯನ್ನು ಹೊಂದಿದೆ ಎಂಬುದನ್ನು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತಿಳಿಸಬಯಸುತ್ತೇನೆ. ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–18
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 19–22
ಲೇಖನಗಳು :
ಸ್ವಯಂ ನಿಯಂತ್ರಣ ಸಂಸ್ಥೆ ............ 23–25
ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಅನ್ವಯ ಸದಸ್ಯ ಸಹಕಾರಿಗಳ ನಿರ್ದೇಶಕರ ಅನರ್ಹತೆ ಹಾಗೂ ಸದಸ್ಯ ಸಹಕಾರಿಗಳ ಮಂಡಳಿಯನ್ನು ರದ್ದುಪಡಿಸುವುದು ಹಾಗೂ ವಿಶೇಷ ಅಧಿಕಾರಿಯನ್ನು ನೇಮಕ ಮಾಡುವುದು. ............................. 28–33

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನಾ ವರದಿ ನೂತನ ನಮೂನೆ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಕರ್ನಾಟಕ ಸರಕಾರ ಇವರು ದಿನಾಂಕ 02–06–2023ರಂದು ಹಾಲಿ ಇರುವ ಲೆಕ್ಕಪರಿಶೋಧನಾ ವರದಿಯ ನಮೂನೆಯಲ್ಲಿ ಬದಲಾವಣೆ ಮಾಡಿ ಆದೇಶ ಹೊರಡಿಸಿದ್ದಾರೆ. ನೂತನ ನಮೂನೆ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿರುತ್ತದೆ. ಪತ್ತಿನ ಚಟುವಟಿಕೆಗಳನ್ನೇ ಪ್ರಮುಖವಾಗಿ ಮಾಡುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಈ ಆದೇಶ ಅನ್ವಯಿಸುತ್ತದೆ. ಪತ್ತಿನ ಚಟುಟಿಕೆಗಳನ್ನು ನಡೆಸದಿರುವ ಸಂಸ್ಥೆಗಳಿಗೆ ಈ ಹಿಂದಿ ಮಾದರಿಯೇ ಅನ್ವಯಿಸುತ್ತದೆ.

ಹಿಂದೆ ಜಾರಿಯಲ್ಲಿದ್ದ ಲೆಕ್ಕಪರಿಶೋಧನಾ ವರದಿಯ ಅಂಶಗಳಿಗೆ ಇನ್ನೂ ಹೆಚ್ಚುವರಿ ವಿಷಯಗಳನ್ನು ಸೇರಿಸಿ ಪ್ರಾರಂಭಿಕ ಹಂತದಲ್ಲಿಯೆ ಮೋಸ ವಂಚನೆ ದೋಷಗಳ ನಿವಾರಣೆ ಸಾಧ್ಯವಾಗಬಹುದು ಎಂದು ಅಭಿಪ್ರಾಯ ಪಡಲಾಗಿದೆ. ಪ್ರಸ್ತುತ ಹೊಸ ಲೆಕ್ಕಪರಿಶೋಧನಾ ವರದಿಯ ನೂತನ ಮಾದರಿ ಬಹಳ ವಿಸ್ತೃತವಾಗಿದ್ದು ಸಹಕಾರಿ ಸಂಸ್ಥೆಯ ಸಮಗ್ರ ವ್ಯವಹಾರಗಳ ಮಾಹಿತಿ ಅಮೂಲ್ಯವಾಗಿರುತ್ತದೆ. ಯಾವ ಕೊರತೆಗಳು ಇಲ್ಲದೆ ಆಡಿಟ್ ವರದಿಯ ಆಧಾರದ ಮೇಲೆ ಸಂಸ್ಥೆಯ ಸಂಪೂರ್ಣ ಸ್ಥಿತಿಗತಿಗಳನ್ನು ಅಧ್ಯಯನ ಮಾಡಬಹುದು ಎಂದು ಅಭಿಪ್ರಾಯ ಪಡಲಾಗಿದೆ.

ಹೊಸ ನಮೂನೆಯಲ್ಲಿ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ನಿಯಮಗಳು 2004 ಮತ್ತು ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಉಲ್ಲೇಖ ಮಾಡಿ ಅಂಶಗಳನ್ನು ಸೇರಿಸಲಾಗಿದೆ. ಹೆಚ್ಚುವರಿಯಾಗಿ ಸೇರಿಸಿದ ಅಂಶಗಳು ಪ್ರಮುಖವಾಗಿ ಸಹಕಾರಿಯ ದೂರವಾಣಿ, ಮಿಂಚಂಚೆ (ಇ–ಮೇಲ್ ಐ.ಡಿ.) ಸೌಹಾರ್ದ ಸಹಕಾರಿ ನಿಯಮಗಳಾನುಸಾರವಾಗಿ ಸಿಬ್ಬಂದಿ ನೇಮಕಾತಿ ಆಗಿದೆಯೆ? ವಾರ್ಷಿಕ ಮಹಾಸಭೆ ವಿಷಯಗಳು ಕಲಂ 23(3)ರಂತೆ ಅವಶ್ಯಕ ವಿಷಯಗಳನ್ನು ಅಳವಡಿಸಲಾಗಿದೆಯೆ, ದಾಖಲಾತಿ ಪುಸ್ತಕಗಳಲ್ಲಿ ದಾಖಲಾತಿ ಸರಿಯಾಗಿ ಆಗುತ್ತಿದೆಯೆ, ಕಲಂ 34 ರನ್ವಯ ಮಾಹಿತಿ ಸಲ್ಲಿಸಲಾಗುತ್ತಿದೆಯೇ ಲೆಕ್ಕಪತ್ರಗಳು ಗಣಕೀಕೃತವಾಗಿದ್ದಲ್ಲಿ ತಂತ್ರಾಂಶದ ಸಂಪೂರ್ಣ ವಿವರಗಳು, ಸಂಯುಕ್ತ ಸಹಕಾರಿ ಹಾಗೂ ಆರ್.ಬಿ.ಐ ನಿರ್ದೇಶನಗಳ ಪಾಲನೆ, ಲೆಕ್ಕಪರಿಶೋಧಕರ ನೇಮಕಾತಿ ವಿವರಗಳು, ವಿವಿಧ ಸಾಲಗಳ ನೀಡಿಕೆ ಸಂಬಂಧಿಸಿದ ವಿವರಣೆಗಳು, ಗುಂತಾವಣೆ ನಿಯಮಗಳ ರಚನೆ ಹಾಗೂ ಪಾಲನೆ ಶಾಖಾವಾರು ನಗದು ಇತ್ಯಾದಿ ವ್ಯವಹಾರಗಳ ಮಿತಿಗಳು, ಬ್ಯಾಂಕಿಂಗ್ ನಿಯಂತ್ರಣಾ ಕಾಯ್ದೆ ಕಲಂ 22 ಅನ್ವಯ ಪಡೆದಿರುವ ಬ್ಯಾಂಕಿಂಗ ಲೈಸೆನ್ಸ, ದ್ರವ್ಯಾಸ್ತಿ ನಿರ್ವಹಣೆ ಹಾಗೆ ಇನ್ನೂ ಹಲವು ವಿಷಯಗಳನ್ನು ಈ ಆದೇಶ ಒಳಗೊಂಡಿದೆ, ಹೊಸ ನಮೂನೆಯ ವರದಿಯನ್ನು ಸಲ್ಲಿಸುವಾಗ ಲೆಕ್ಕಪರಿಶೋಧಕರು ಸಹಕಾರಿ ಸಂಸ್ಥೆಗಳು ಕಾಯ್ದೆ ಹಾಗೂ ನಿಯಮಗಳ ಉಲ್ಲಂಘನೆ ಮಾಡುವುದು, ಸುಸ್ಥಿರ ವ್ಯವಹಾರ ನಿಯಮಗಳ ಉಲ್ಲಂಘನೆ ಮಾಡುವುದು ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಉಲ್ಲಂಘನೆ ಮಾಡುವುದು ಗಮನಿಸಿ ವರದಿಯನ್ನು ಸಲ್ಲಿಸಬೇಕಾಗುತ್ತದೆ.

ರಾಜ್ಯದ ಎಲ್ಲ ಪತ್ತಿನ ಸಹಕಾರ ಸಂಘಗಳು ನೂತನ ಲೆಕ್ಕ ಪರಿಶೋಧನಾ ವರದಿಯ ಅಂಶಗಳನ್ನು ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಇವರು ಅಧ್ಯಯನ ಮಾಡಿ ಅದರಂತೆ ಲೆಕ್ಕ ಪರಿಶೋಧನೆಗೆ ಪುಸ್ತಕಗಳನ್ನು ಮಾಹಿತಿಗಳನ್ನು ನೀಡಿರುತ್ತಾರೆ.



## ಜ್ಞಾನ ಜ್ಯೋತಿ

– ಶ್ರೀಮತಿ ರಾಧ ಎಸ್.
ಗಂಗಾವತಿ (ತಾ) ಕೊಪ್ಪಳ (ಜಿ).

## "ಸಂತೋಷದ ಜೀವನ"

ಜೀವನ ಎನ್ನುವ ಈ ಮೂರಕ್ಷರದ ಪದ ನಮ್ಮ ಇಡೀ ಜನನದಿಂದ ಮರಣದ ಮಧ್ಯೆ ಬರುವಂತಹದ್ದು, ಇದು ನಾವು ಅಂದುಕೊಂಡಷ್ಟು ಸುಲಭವೂ ಅಲ್ಲ, ಕಠಿಣವೂ ಅಲ್ಲ, ನಾವು ಅನುಭವಿಸುವ ಅದ್ಭುತ ಮಧುರ ಕ್ಷಣಗಳು, ನಾವು ನಮಗಿಂತ ಮೇಲಿನವರನ್ನು ಹೋಲಿಸದೆ ನಮಗಿಂತ ಕೆಳಗಿರುವವರನ್ನು ನೋಡಿ ತೃಪ್ತಿ ಪಡಬೇಕು.

ಈ ಜೀವನದಲ್ಲಿ ನೀರಿಕ್ಷೆ ಇಟ್ಟುಕೊಂಡಷ್ಟು ಜೀವಿಸಿ, ಆದರೆ ಯಾರ ಮೇಲೂ ಅತಿಯಾದ ನೀರೀಕ್ಷೆ ಇಡಬಾರದು, ನಾವು ಯಾವಾಗಲೂ ಬೇರೆಯವರನ್ನು ಮೆಚ್ಚಿಸಲು ಜೀವಿಸಬಾರದು ನಮ್ಮ ಅಂತರಂಗವನ್ನು ನಂಬಿ ಜೀವಿಸಬೇಕು, ಈ ಜೀವನ ಒಂದು ಕ್ಷಣ ಸಂತೋಷವನ್ನು ಅನುಭವಿಸುತ್ತಿದ್ದರೆ ದುಃಖ ಎನ್ನುವುದು ಅದರ ಬೆನ್ನ ಹಿಂದೆಯೇ ಇರುತ್ತದೆ, ಆದರೆ ನಾವು ಸಂತೋಷಕ್ಕೆ ಹಿಗ್ಗದೇ ದುಃಖಕ್ಕೆ ಕುಗ್ಗದೇ, ಧೃತಿಗೆಡದೆ ಧೈರ್ಯವಾಗಿ ಎದುರಿಸಬೇಕು.

"ನೋವುಗಳ ನಡುವೆ ನೆಮ್ಮದಿ ಹುಡುಕುವುದೇ ಜೀವನ, ನಿರಾಶೆಯ ನಡುವೆ ಭರವಸೆಯೊಂದಿಗೆ ಸಾಗುವುದೇ ಜೀವನದ ಪಯಣ."

ಸ್ವಾಮಿ ವಿವೇಕಾನಂದರು ಜೀವನದ ಕುರಿತಾಗಿ "ಸುತ್ತಲಿನ ಪರಿಸ್ಥಿತಿಗಳು ನಿನ್ನನ್ನು ತುಳೀಬೇಕು ಅಂತ ಕಾತರದಿಂದ ಕಾಯುತ್ತಿದ್ದಾಗ ಅದನ್ನು ಹೆದರಿಸಿ ನಿಲ್ತಿವಲ್ಲ ಅದು ನಿಜವಾದ ಜೀವನ" ಎಂದು ಹೇಳಿದ್ದಾರೆ.

ಜೀವನ ಇಷ್ಟೇ ಅನ್ನುವುದಕ್ಕಿಂತ ಜೀವನ ಇಷ್ಟ ಅಂದುಕೊಂಡ್ರೆ ಈ ಜೀವನ ತುಂಬಾ ಇಷ್ಟವಾಗುತ್ತದೆ, ಅದೇ ರೀತಿ ಒಂದು ಕಡೆ "ಶಿವರಾಮ್ ಕಾರಂತರು ಹೀಗೆ ಹೇಳುತ್ತಾರೆ "ಯಾರಿಗೂ ಉಪದೇಶ ಮಾಡಬೇಡಿ ನೀವೇನು ಹೇಳಬೇಕೆಂದಿದ್ದಿರೋ ಹಾಗೆ ಬದುಕಿ ತೋರಿಸಿ" ಇಲ್ಲಿ ಹಣದಿಂದ ಸಿಗುವ ಸ್ಥಾನಮಾನಕ್ಕಿಂತ ಒಳ್ಳೆಯ ಗುಣದಿಂದ ಸಿಗುವ ಸ್ಥಾನಮಾನ ನೆಮ್ಮದಿ ನೀಡುತ್ತದೆ, ಇಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಗಟ್ಟಿಯಾಗಿರಬೇಕು, ಏಕೆಂದರೆ ಸತ್ಯ ಮನೆ ಬಾಗಿಲು ದಾಟುವಷ್ಟರಲ್ಲಿ ಸುಳ್ಳು ಊರ ಬಾಗಿಲು ದಾಟಿರುತ್ತದೆ. ಇಲ್ಲಿ ನಗಲು ಸಂತೋಷವಾಗಿರಲು ಯಾರಿಗೂ ಸುಂಕ ಕಟ್ಟಬೇಕಿಲ್ಲ. ನೋವುಗಳನ್ನು ಪಕ್ಕಕ್ಕಿಟ್ಟು ನಗುತ್ತಾ ಇರಬೇಕು ಇಲ್ಲಿ ನಂಬಿ ಅನುಭವಿಸುವುದಕ್ಕಿಂತ ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ.

ಈ ಜೀವನ ಬಂಗಾರದಂತೆ ಇರಬೇಕು ಅಂದರೆ ನಮ್ಮಲ್ಲಿರೊ ಸಿಟ್ಟನ್ನು ಗಂಟು ಕಟ್ಟಿ ಅಟ್ಟದ ಮೇಲೆ ಇಡಬೇಕು ಬಾಯಿ ಬಿಟ್ರೆ ಬಡಿದು ತಿನ್ನೊ ಈ ಸಮಾಜದ ಮಾತುಗಳಿಗೆ ಕಿವಿ ತೆರೆದಿರಬೇಕು, ಬಾಯಿ ಮುಚ್ಚಿರಬೇಕು, ಎಲ್ಲವನ್ನು ಬಲ್ಲವರು ಯಾರಿಲ್ಲ ಎಲ್ಲಾ ಬಲ್ಲನೆಂಬುವರು ಬಹಳ ದಿನ ಉಳಿದಿಲ್ಲ, ಯಾಕೆಂದರೆ ನಮ್ಮ ಬಗ್ಗೆ ನಮಗೆ ಇನ್ನೂ ಸರಿಯಾಗಿ ತಿಳಿದಿಲ್ಲ.

ಲೋಕಬಿಟ್ಟು ಕಣ್ಮುಚ್ಚಿ ಹೋದವರೊಮ್ಮೆ ಕಣ್ತೆರೆದು ನೋಡಿದಾಗ ಎಲ್ಲಾ ಶೂನ್ಯವಿರುವುದು ಹಾಗಾಗಿ ಪ್ರತೀ ಕ್ಷಣವನ್ನು ಖುಷಿಯಿಂದ ಅನುಭವಿಸಬೇಕು.

ಶ್ರೀ ವೀರೇಂದ್ರ ಹೆಗಡೆಯವರು ಹೇಳುತ್ತಾರೆ "ವ್ಯಕ್ತಿ ಶ್ರೇಷ್ಠವೆನಿಸುವುದು ಸಂಸ್ಕಾರದಿಂದಲೇ ಹೊರೆತು ಜನ್ಮ ಜಾತಿಯಿಂದಲ್ಲ" ಎಂದು ಯೋಗ್ಯವಾದ ಆಚಾರ–ವಿಚಾರ ಸಂಸ್ಕಾರ ಮಾನವನನ್ನು ದೈವತ್ವಕ್ಕೇರಿಸುತ್ತದೆ, ಹಾಗಾಗಿ ನಾವು ನಮ್ಮ ಜೀವನದಲ್ಲಿ ಒಳ್ಳೆಯ ಆಚಾರ–ವಿಚಾರ ಸಂಸ್ಕಾರ ರೂಢಿಸಿಕೊಳ್ಳಬೇಕು, ಏಕೆಂದರೆ ನಮ್ಮ ಈ ಗುಣಗಳೇ ನಮ್ಮ ಮಕ್ಕಳಿಗೆ ಬಳುವಳಿಯಾಗಿ ಬರುತ್ತದೆ.

ನಾವು ಯಾವಾಗಲೂ ಅಂತವರಿಂದ ತಿಳಿಯಬೇಕು, ಸಜ್ಜನರ ಜೊತೆ ಬೆರೆಯಬೇಕು, ಒಳ್ಳೆಯದನ್ನು ಕಲಿಯಬೇಕು ತೊರೆದವರನ್ನು ಮರೆಯಬೇಕು ಮರಳಿ ಬಂದವರನ್ನು ಕ್ಷಮಿಸಬೇಕು ಒಂದೊಳ್ಳೆ ರೀತಿಯಲ್ಲಿ ಬದುಕಬೇಕು.

ಬುದ್ದನ ಪ್ರಕಾರ ನಾನು ಎಂಬ ಅಹಂಕಾರ ನಮ್ಮನ್ನೇ ನಾಶಪಡಿಸಬಹುದು ನಾವು ಎಂಬ ಮಮಕಾರ ಕೊನೆಯವರೆಗೂ ನಮಗೆ ನೆರಳಾಗಿ ನಿಲ್ಲುವುದು ಈ ಜೀವನದಲ್ಲಿ ಯಾವುದಕ್ಕೂ ಚಿಂತೆ ಮಾಡಿ ಕೊರಗಬಾರದು ಒಳ್ಳೆಯದಾದರೆ ಅದ್ಭುತ ಎಂದು ಭಾವಿಸಬೇಕು, ಕೆಡುಕಾದರೆ ಅನುಭವ ಎಂದು ಪರಿಗಣೀಸಬೇಕು ಶಿವರಾಮಕಾರಂತರು ಹೇಳಿದಾಗೆ ಬದುಕಿನಲ್ಲಿ ಪರಮಾವಧಿಯ ತೃಪ್ತಿಯನ್ನು ಕೊಡಬಲ್ಲದು ಒಂದೇ ಒಂದು ತಾನು ಸರಿಯಾಗಿ ನಡೆದಿದ್ದೇನೆ ಎಂಬ "ಆತ್ಮವಿಶ್ವಾಸ" ಹಾಗಾಗಿ ಸ್ವಾರ್ಥವಿಲ್ಲದ ಬದುಕು ಸರ್ವ ಕಾಲಕ್ಕೂ ಶ್ರೇಷ್ಠ. ಇಲ್ಲಿ ನಿರೀಕ್ಷೆಗೆ ತಕ್ಕಂತೆ ಯಾವುದೂ ನಡೆಯದು ಕೆಲವೊಮ್ಮೆ ಅನಿರೀಕ್ಷಿತ ಅಚ್ಚರಿಗೂ ಸಿದ್ದವಾಗಿರಬೇಕು ಮತ್ತು ಅನುಭವಿಸಬೇಕು ಎಲ್ಲಾ ಬೆರಳುಗಳು ಒಂದೇ ಅಳತೆಯಲ್ಲಿರುವುದಿಲ್ಲ ಒಂದು ಉದ್ದ ಇನ್ನೊಂದು ಗಿಡ್ಡ ಆದರೆ ಅವನ್ನು ಮಡಚಿದಾಗ ಎಲ್ಲಾವುಗಳ ಉದ್ದ ಒಂದೇ, ಅಂದರೆ ನಾವು ಬಗ್ಗಿದಾಗ, ಬಾಗಿದಾಗ ಜೀವನ ಸರಳ ಮತ್ತು ಎಲ್ಲಾ ಸನ್ನಿವೇಶಗಳೂ ಸುಲಭ.

**ಕೊನೆಯದಾಗಿ ಸಂತೋಷದ ಜೀವನಕ್ಕೆ 5 ಸೂತ್ರಗಳಿವೆ**

1) ಮೊದಲು ನಾವು ನಮ್ಮನ್ನು ಪ್ರೀತಿಸಲು ಕಲಿಯಬೇಕು.
2) ಇತರರಿಗೆ ಹಿತವನ್ನು ಬಯಸುವ ಗೂಣವನ್ನು ಅಳವಡಿಸಿಕೊಳ್ಳಬೇಕು.
3) ನಮ್ಮಲ್ಲಿ ಕ್ಷಮಿಸುವ ಗುಣ ಇರಬೇಕು.
4) ಒಳ್ಳೆದನ್ನು ಮಾಡಲಿಕ್ಕೆ ಆಗಲ್ಲಿಲ್ಲದಿದ್ದರು ಯಾರಿಗೂ ಕೆಟ್ಟದ್ದನ್ನು ಬಯಸಬಾರದು.
5) ಸಕಾರಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 28,884 ಆಗಿರುತ್ತದೆ. ಇವುಗಳ ಪೈಕಿ 16,798 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 12,086

**ಜೂನ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 1046 ಇತ್ಯರ್ಥಗೊಂಡ ಪ್ರಕರಣಗಳು 1030

**ಅಮಲ್ಜಾರಿ ಪ್ರಕರಣಗಳು :** ಒಟ್ಟು 6,164 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,114 ಪ್ರಕರಣಗಳು ಇತ್ಯರ್ಥಗೊಂಡಿದ್ದು, 5,050 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1029 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 448 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜೂನ್ ತಿಂಗಳಿನಲ್ಲಿ 147 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## 1ನೇ ಜುಲೈ - ಅಂತರರಾಷ್ಟ್ರೀಯ ಸಹಕಾರ ದಿನ

## 2023 ಧ್ಯೇಯ – "ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರಿ ಸಂಸ್ಥೆಗಳು"

ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ವಿಶ್ವದ ಸಹಕಾರಿ ಸಂಸ್ಥೆಗಳು ಪ್ರತಿ ವರ್ಷ ಜುಲೈ ಮೊದಲನೇ ಶನಿವಾರದಂದು ಅಂತರರಾಷ್ಟ್ರೀಯ ಸಹಕಾರ ದಿನವಾಗಿ ಆಚರಿಸಲು ಕರೆ ನೀಡುತ್ತ ಬಂದಿದ್ದಾರೆ. ಈ ದಿನದಂದು ವಿಶ್ವದ ಸಹಕಾರಿಗಳಲ್ಲಿ ಅವರವರ ಸಂಸ್ಥೆಗಳಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿ ಮೂಡಿಸುವಂತಹ ಪ್ರಯತ್ನ ನಡೆದಿದೆ. ಐಸಿಎ ನವರು "ಸುಸ್ಥಿರ ಅಭಿವೃದ್ಧಿಗಾಗಿ ಸಹಕಾರಿ ಸಂಸ್ಥೆಗಳು" ಎಂಬುದನ್ನು ದೃಢೀಕರಿಸಲು ಈ ವರ್ಷ ಸಹಕಾರಿ ದಿನವನ್ನು ಆಚರಣೆ ಮಾಡುವುದರ ಮೂಲಕ ಸಹಕಾರ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಮೂಡಿಸುವುದರ ಮೂಲಕ ಮತ್ತು ಸಹಕಾರ ಸಂಸ್ಥೆಗಳನ್ನು ಬಲಪಡಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ಯಶಸ್ಸನ್ನು ಕೋರಿದ್ದಾರೆ.

# International Day of Cooperatives 2023

## Theme : 'Cooperatives for sustainable development'

On 1 July, the cooperative movement will celebrate the 2023 International Day of Cooperatives. United by the slogan Cooperatives for sustainable development, we will show how the cooperative way of working, inspired by the cooperative values and principles, has the accomplishment of the Sustainable Development Goals (SDGs) as part of its DNA.

In September 2023, the international community will mark the mid-point in the implementation of the 2030 Agenda for Sustainable Development and seek ways to accelerate progress in the SDGs. It is thus a real key moment to demonstrate the contribution of cooperatives in advancing the achievement of the SDGs.

Being one of the world's oldest and largest business networks, the cooperative movement was the first group of enterprises worldwide to endorse the SDGs and be recognised as a partner in achieving these goals.

As natural vehicles of collaborative partnership and prosperity for all, cooperatives contribute to economic, social, and environmental sustainability across regions and economic sectors. It is inherent among them to safeguard community relations, enhance local resources, advocate social responsibility, and adopt sustainable and long-term business practices.

"At the mid-point of the 2030 Agenda, efforts need to be deepened, and this can only be done with more cooperation. Enterprises, which are responsible for organising the production and distribution of goods and services, must focus on people and the planet. Cooperatives have a model for doing this, and have been demonstrating it for almost 200 years'', says the President of the International Cooperative Alliance (ICA), Ariel Guarco."

The ICA invites cooperators across the globe to celebrate the International Day of Cooperatives and show the world what can be achieved through the power of cooperation.

The 2023 #CoopsDay action pack including the logo, key messages and other digital resources will be available soon on the CoopsDay website. Join the #coops4sdgs campaign!

### About the International Day of Cooperatives

Celebrated worldwide for more than a century and officially proclaimed by the United Nations General Assembly on the centenary of the ICA in 1995, the International Day of Cooperatives is annually commemorated

on the first Saturday of July.

The aim of #CoopsDay is to increase awareness of cooperatives. The event underscores the contributions of the cooperative movement to resolving the major problems addressed by the United Nations and to strengthening and extending the partnerships between the international cooperative movement and other actors. Since 1995, the ICA and the United Nations, through the Committee for the Promotion and Advancement of Cooperatives (COPAC), have jointly set the theme for the celebration of #CoopsDay.

This year's theme is "Cooperatives: partners for accelerated sustainable development" and the celebration will mark the 29th International Day of Cooperatives recognized by the United Nations and the 101st International Cooperative Day.

Through #CoopsDay, local, national, and international policymakers, civil society organisations and the public in general can learn about the contribution of cooperatives to a just and sustainable future for all.

### About COPAC

The Committee for the Promotion and Advancement of Cooperatives (COPAC) is a multi-stakeholder partnership of global public and private institutions that champions and supports people-centred and self-sustaining cooperative enterprises as leaders in sustainable development.

It consists of the International Cooperative Alliance (ICA), the United Nations Department of Economic and Social Affairs (UNDESA), the International Labour Organization (ILO), the International Trade Center (ITC), the Food and Agriculture Organization of the United Nations (FAO), and the United Nations Research Institute for Social Development (UNRISD). Learn more about COPAC on its website.

### 2030 Agenda for Sustainable Development

The 2030 Agenda for Sustainable Development, adopted by all United Nations Member States in 2015, provides a shared blueprint for peace and prosperity for people and the planet, now and into the future. At its heart are the 17 Sustainable Development Goals (SDGs), which are an urgent call for action by all countries - developed and developing - in a global partnership. They recognize that ending poverty and other deprivations must go hand-in-hand with strategies that improve health and education, reduce inequality, and spur economic growth – all while tackling climate change and working to preserve our oceans and forests.

## ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ



**ಉಡುಪಿ** : ದಿನಾಂಕ 23.06.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಇದರ ವತಿಯಿಂದ ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಎಲ್ಲಾ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಣಿತಿ ತರಬೇತಿಯನ್ನು ಹೋಟೆಲ್ ಮದರ್ ಪ್ಯಾಲೇಸ್. ಬ್ರಹ್ಮಾವರ ಇಲ್ಲಿ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ ರವರು ವಹಿಸಿದ್ದರು ಕಾರ್ಯಕ್ರಮದ ಉದ್ಘಾಟನೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶೀ ಜಗನ್ನಾಥ ಶೆಟ್ಟಿ ರವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಉಡುಪಿ ಒಕ್ಕೂಟದ ನಿರ್ದೇಶಕರಾದ ಶ್ರೀ ಅಶೋಕ್ ಪ್ರಭು ಇವರು ಭಾಗವಹಿಸಿದ್ದರು. ಸಭೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತ್ಯಗಳು ಹಾಗೂ ನೂತನ ಸಹಕಾರ ನೀತಿ ಮತ್ತು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆಗಳನ್ನು ನಡೆಸುವ ವಿಧಾನಗಳ ಕುರಿತು ಮಾಹಿತಿ ನೀಡಲಾಯಿತು. ಒಟ್ಟು 21 ಸೌಹಾರ್ದ ಸಹಕಾರಿಗಳಿಂದ 89 ಪ್ರತಿನಿಧಿಗಳು ಭಾಗವಹಿಸಿದರು.

## ಅಭಿನಂದನೆ

## ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ. ಎನ್ ರಾಜಣ್ಣ ಇವರ ಭೇಟಿ



**ಬೆಂಗಳೂರು** : ದಿನಾಂಕ 20.06.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ., ಬೆಂಗಳೂರು. ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಕರ್ನಾಟಕ ಸರ್ಕಾರದ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ ಎನ್ ರಾಜಣ್ಣ ರವರನ್ನು ವಿಧಾನಸೌಧದಲ್ಲಿ ಭೇಟಿಯಾಗಿ ಶುಭ ಕೋರಿದರು ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ನಿರ್ದೇಶಕರಗಳಾದ ಶ್ರೀ ಸಿ ಪಿ ವಿಜಯ್, ಶ್ರೀ ಬಿ ಎಸ್ ಗುಂಡೂರಾವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು.

## ಶ್ರೀ ಮಂಜುನಾಥ ಪ್ರಸಾದ, ಐ.ಎ.ಎಸ್. ನೂತನ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ಭೇಟಿ



**ಬೆಂಗಳೂರು** : ಸಹಕಾರಿ ಇಲಾಖೆಯ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕರಾದ ಶ್ರೀ ಮಂಜುನಾಥ ಪ್ರಸಾದ್ ಇವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಸನ್ಮಾನಿಸಿದರು.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಸಣ್ಣ ನೀರಾವರಿ ಸಚಿವರಾದ ಶ್ರೀ ಹೆಚ್.ಕೆ ಪಾಟೀಲ ಇವರನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭೇಟಿ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಉಪಸ್ಥಿತರಿದ್ದರು.



ದಿನಾಂಕ 23.06.2023 ರಂದು ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರ ಕಛೇರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿ. ಪಿ. ವಿಜಯ್ ರವರು ನೀಡಿ ಸಹಕಾರ ಸಂಘಗಳ ಜಂಟಿ ನಿರ್ದೇಶಕರಾದ ಶ್ರೀ ರಂಗಸ್ವಾಮಿ ಇವರೊಂದಿಗೆ ಸೌಹಾರ್ದ ಸಹಕಾರಿ ಸಂಗಗಳ ಚುನಾವಣೆ ಕುರಿತಂತೆ ಚರ್ಚಿಸಿ ಸೌಹಾರ್ದ ಸಹಕಾರಿಗಳ ಚುನಾವಣಾ ಪ್ರಕ್ರಿಯೆಯನ್ನು ಸರಿಯಾದ ಸಮಯದಲ್ಲಿ ನಡೆಸುವಂತೆ ಕೋರಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು.

ದಿನಾಂಕ 06.06.2023 ರಂದು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಆರ್. ಇವರು ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರು ಹಾಗೂ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ಇವರನ್ನು ಭೇಟಿ ಮಾಡಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಹಾಗೂ ಯೋಜನೆಗಳ ಕುರಿತು ಚರ್ಚಿಸಿದರು. ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ.ವಿಜಯ್ ರವರು, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್ ಪಾಯ್ಸ್ ರವರು, ನಿರ್ದೇಶಕರಾದ ಶ್ರೀ ನಾಗೇಶ್ ಉಪಸ್ಥಿತರಿದ್ದರು.

# ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ





**ಮೈಸೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ದಿನಾಂಕ 25, 26 ಮತ್ತು 27 ಜೂನ್ 2023 3 ದಿನಗಳ ಕಾಲ ಮೈಸೂರಿನಲ್ಲಿ ಆಡಳಿತ ಪರಿಣಿತಿ ತರಬೇತಿಯನ್ನು ಏರ್ಪಡಿಸಲಾಗತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಮುಕ್ತಿದಾನಂದಸ್ವಾಮಿಗಳು, ರಾಮಕೃಷ್ಣ ಆಶ್ರಮ, ಮೈಸೂರು ಇವರು ನೆರವೇರಿಸಿದರು. ಪರೋಪಕಾರಿ ಜೀವನ, ತೆಗೆದು ಕೊಡುವ ಸಹಕಾರ ಮನೋಭಾವನೆ ಬೆಳೆಸಿಕೊಳ್ಳಬೇಕು. ಮನುಷ್ಯ ಶಕ್ತಿಯುತ ವಾಗಲು ಸೌಹಾರ್ದತೆ ಅಗತ್ಯ ಶಿಕ್ಷಣವೇ ಶಕ್ತಿ ಅದನ್ನು ಪಡೆಯಲು ಈ ರೀತಿಯ ಕಾರ್ಯಕ್ರಮಗಳು ಪೂರಕವಾಗುತ್ತವೆ ಎಂದು ಕಾರ್ಯಕ್ರಮಕ್ಕೆ ಶುಭಕೋರಿ ಆಶೀರ್ವದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕರಾಸೌಸಂಸನಿ., ಬೆಂಗಳೂರು ವಹಿಕೊಂಡು ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗಾಗಿ ನಮ್ಮೆಲ್ಲರ ಪಾಲ್ಗೊಳ್ಳುವಿಕೆ ಹಾಗೂ ಈ ಕಾಯ್ದೆಗೆ ಶ್ರಮವಹಿಸಿದ ಹಿರಿಯ ಸಹಕಾರಿಗಳ ಸಲಹೆ ಪಡೆದು ಈ ಚಳುವಳಿಯನ್ನು ಉತ್ತರೋತ್ತರ ಅಭಿವೃದ್ಧಿಪಡಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಿದರು.

ಮುಖ್ಯಅತಿಥಿಗಳಾಗಿ ಶ್ರೀ ಎ. ಆರ್. ಪ್ರಸನ್ನಕುಮಾರ್ ಮಾನ್ಯ ಉಪಾಧ್ಯಕ್ಷರು ಕರಾಸಸಂಸನಿ., ಬೆಂಗಳೂರು ಇವರು ಭಾಗವಹಿಸಿದ್ದರು ಹಾಗೂ ಡಾ. ಹೆಚ್. ವಿ. ರಾಜೀವ್ ಮಾನ್ಯ ಮಾಜಿ ಅಧ್ಯಕ್ಷರು, ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು, ಕರಾಸಂಸನಿ., ಬೆಂಗಳೂರು." ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹ ಸಹಕಾರಿಗಳಿಂದ ಸೇವೆ ಸಿಗಬೇಕು ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

### ಉಪನ್ಯಾಸಗಳು

ದಿನಾಂಕ 25, 26 ಮತ್ತು 27 ಜೂನ್ 2023 ರಂದು ಆಡಳಿತ ಮಂಡಳಿ ಸದಸ್ಯರುಗಳಿಗೆ ಹಮ್ಮಿಕೊಂಡಿದ್ದ ತರಬೇತಿಯಲ್ಲಿ ಉಪನ್ಯಾಸಕರಾಗಿ ಡಾ. ಯಶ್ವಂತ ಡೋಂಗ್ರೆ, ಮಾನ್ಯ ಕುಲಪತಿಗಳು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು ಇವರು ರಾಷ್ಟ್ರೀಯ ಸಹಕಾರಿ ನೀತಿಯ ಆಶಯ ಮತ್ತು ಪ್ರಗತಿ ಬಗ್ಗೆ ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಕಲಂ25 ಹಾಗೂ ಕಲಂ(38) ಗಳ ಅನುಷ್ಠಾನ ಶ್ರೀ ಸಿ.ಎನ್. ಪರಶಿವಮೂರ್ತಿ, ಮಾನ್ಯ ಅಪರ ನಿಬಂಧಕರು(ನಿ) ಉಪನ್ಯಾಸ ನೀಡಿದರು. ಡಾ.ಎ. ಆರ್. ಶ್ರೀನಾಥ, ಮಾನ್ಯ ನಿರ್ದೇಶಕರು(ನಿ), ರಾಷ್ಟ್ರೀಯ ಸಹಕಾರಿ ಯೂನಿಯನ್ ನವದೆಹಲಿ ಇವರು ದೇಶದ ಸಹಕಾರ ಚಳುವಳಿಯ ಪ್ರಗತಿ, ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯದ ಪ್ರಾರಂಭದ ನಂತರದ ಬೆಳವಣಿಗೆಗಳ ಉಪನ್ಯಾಸ ನೀಡಿದರು.

### ಸಂವಾದ ಕಾರ್ಯಕ್ರಮ– Panel discussion

ದಿನಾಂಕ 26.06.2023 ರಂದು ಸ್ವಯಂ ನಿಯತ್ರಣಾತ್ಮಕ ಸಂಸ್ಥೆ (self regulatory organization) – ಆಶಯ–ಪ್ರಸ್ತುತೆ ಮತ್ತು ಕಾರ್ಯಯೋಜನೆ ಕುರಿತು ಶ್ರೀ ಮನೋಹರ್ ಮಸ್ಕಿ, ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಬೆಂಗಳೂರು ಹಾಗೂ ಸಂಸ್ಥಾಪಕ ಅಧ್ಯಕ್ಷರು ಸುಕೋ ಬ್ಯಾಂಕ್ ಬಳ್ಳಾರಿ. ಇವರು ಉಪನ್ಯಾಸ ನೀಡಿದರು.

### ಸಂಯುಕ್ತ ಸಹಕಾರಿಯ ವಿಷನ್–2030 ಸಿದ್ಧತೆ ಕಾರ್ಯಕ್ರಮ

ಸಂಯುಕ್ತ ಸಹಕಾರಿಯ ವಿಷನ್–2030 ವಿಷಯ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ ಮಾನ್ಯ ಅಧ್ಯಕ್ಷರು, ಕರಾಸೌಸಂಸನಿ., ವಹಿಸಿಕೊಂಡಿದ್ದರು. ಮುಖ್ಯಅತಿಥಿಗಳಾಗಿ ಶ್ರೀ ವಿಶ್ವನಾಥ ಚ. ಹಿರೇಮಠ, ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಎಸ್. ಆರ್. ಸತೀಶ್‌ಚಂದ್ರ, ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಗುರುನಾಥ ಜ್ಯಾಂತಿಕರ್ ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಡಾ. ಹೆಚ್. ವಿ. ರಾಜೀವ್ ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಮಾನ್ಯ ಮಾಜಿ ಅಧ್ಯಕ್ಷರು, ಕರಾಸೌಸಂಸನಿ., ಶ್ರೀ ಎ. ಆರ್. ಪ್ರಸನ್ನಕುಮಾರ್ ಮಾನ್ಯ ಉಪಾಧ್ಯಕ್ಷರು, ಕರಾಸೌಸಂಸನಿ., ಶ್ರೀ ಜಗದೀಶ್ ಕವಟಗಿಮಠ ಮಾನ್ಯ ನಿರ್ದೇಶಕರು ಹಾಗೂ ಮಾಜಿ ಉಪಾಧ್ಯಕ್ಷರು, ಕರಾಸೌಸಂಸನಿ., ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ಮಾನ್ಯ ಸದಸ್ಯರು,

ಕರಾಸೌಸಂಸನಿ., ಬೆಂಗಳೂರು ಇವರು ಉಪಸ್ಥತರಿದ್ದರು. ಸದರಿ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವಿಷನ್–2030 ಈ ಕುರಿತು ಸಲಹೆ ಹಾಗೂ ಮಾರ್ಗದರ್ಶನ ಪಡೆಯಲಾಯಿತು. ಸಂಯುಕ್ತ ಸಹಕಾ–ರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ದೃಷ್ಟಿ 2030 ಯನ್ನು ಸಿದ್ದಮಾಡಲು ಈ ಕೆಳಕಂಡ ವಿಷಯಗಳು ಸೇರಿದಂತೆ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳು, ಉಪಾಧ್ಯಕ್ಷರು ಹಾಗೂ ಇನ್ನೂ ಕೆಲವು ಹಾಲಿ ನಿರ್ದೇಶಕರುನ್ನು ಸೇರಿ ಒಂದು ಸಮಿತಿ ರಚನೆ ಮಾಡಿ ದೃಷ್ಟಿ 2030 ಸಿಧ್ಧಪಡಿಸಲು ತಿರ್ಮಾನಿಸಲಾಯಿತು.

1. ಸೌಹಾರ್ದ ಸಹಕಾರಿಗಳ ಬಿಸಿನೆಸ್ ಆಧಾರದ ಮೇಲೆ ಒಳ್ಳೆ ನಿಯಂತ್ರಣ ವ್ಯವಸ್ಥೆ ಜಾರಿಗೆ ಕ್ರಮ.
2. ಡೇಟಾದಲ್ಲಿ ಇರುವ ಅಂಕಿ ಅಂಶ ಗಮನಿಸಿ ಸೌಹಾರ್ದ ಸಹಕಾರಿಗಳಿಗೆ ನಿಯಂತ್ರಣ ಮಾರ್ಗದರ್ಶನ ನೀಡಿ ಕ್ರಮೇಣ ಸರಿ ದಾರಿಗೆ ತರಬಹುದಾದ ಕ್ರಮಗಳನ್ನು ಸೂತ್ರಗಳನ್ನು ರಚಿಸುವುದು.
3. ಸಂಯುಕ್ತ ಸಹಕಾರಿ ಸಿಬ್ಬಂದಿಗಳು ಕೆಲಸ ಕಾರ್ಯಗಳ ಸಂಪೂರ್ಣ ಜ್ಞಾನ ಹೊಂದಿದವರಾಗಿರಬೇಕು.
4. ಒಕ್ಕೂಟ ವ್ಯವಸ್ಥೆ ಉತ್ತಮ ನಿಯಂತ್ರಣ. ಉತ್ತಮ ಮಾನಿಟ್ರಿಂಗ್ ಆಗಬೇಕಿದೆ
5. ಜಿಲ್ಲಾ ಸಂಯೋಜಕರ ಬಳಿ ಸಹಕಾರಿ ಕ್ಷೇತ್ರದ ಅವರ ವ್ಯಾಪ್ತಿಯ ಎಲ್ಲ ಮಾಹಿತಿ ತಕ್ಷಣ ಲಭ್ಯವಾಗಿರಬೇಕು.
6. ಸಂಯುಕ್ತ ಸಹಕಾರಿಯ ಸದಸ್ಯರ ಸಂಖ್ಯೆ ಈಗ ಇರುವ 6000 ಸೌಹಾರ್ದ ಸಹಕಾರಿಗಳಿಂದ 15000 ಸೌಹಾರ್ದ ಸಹಕಾರಿಗಳು ಆಗಬೇಕು
7. ಸಂಯುಕ್ತ ಸಹಕಾರಿ ಕಾರ್ಪೋರೇಟ್ ಮಾದರಿಯಲ್ಲಿ ಕಾರ್ಯನಿರ್ವಹಿಸಬೇಕು.
8. ಸೌಹಾರ್ದ ಸಹಕಾರಿಗಳಲ್ಲಿ ಹಾಗೂ ಸಂಯುಕ್ತ ಸಹಕಾರಿಯಿಂದ ಹಾಗೂ ಸೌಹಾರ್ದಗಳಿಂದ Startup ಕಾರ್ಯಗಳು ನಡೆಯಬೇಕು.
9. ಮಹಿಳಾ ಸಹಕಾರಿಗಳ ಸಂಖ್ಯೆ ಹೆಚ್ಚಾಗಬೇಕು
10. ರಾಜ್ಯದಲ್ಲಿ ಎರಡೂ ಸಹಕಾರಿ ಕಾಯ್ದೆಗಳು ಮುಂದುವರೆಯಬೇಕು.
11. ಸಹಕಾರಿ ಸಂಘಗಳ ಚುನಾವಣೆ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಪಾರದರ್ಶಕವಾಗಿರಬೇಕು.
12. ನಿಯಂತ್ರಣ ಕ್ರಮಗಳಿಗೆ ಅನುಪಾಲನೇ ಅನುಷ್ಠಾನ ಬೇಕು.
13. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ವೃತ್ತಿಪರತೆಯನ್ನು ಹಾಗೂ ಪಾರದರ್ಷಕತೆಯನ್ನು ಕಾಪಾಡುವುದು
14. ಸಿಬ್ಬಂದಿಯವರು ಉತ್ತಮ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುವರು.

### ಸಮಾರೋಪ ಕಾರ್ಯಕ್ರಮ

ಸಮಾರೋಪ ಕಾರ್ಯಕ್ರಮದಲ್ಲಿ ಸಮೂಹ ಚರ್ಚೆ ಹಾಗೂ ಅಭಿಪ್ರಾಯ ಸಂಗ್ರಹ ಮಾಡಲಾಯಿತು. ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕವನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾಡಿದರು. ಶ್ರೀ ಜಿ. ಎನ್. ಪಾಟೀಲ್ ಮಾನ್ಯ ನಿರ್ದೇಶಕರು ವಂದನಾರ್ಪಣೆ ಮಾಡಿದರು. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ನಿರ್ದೇಶಕರು ಕಾರ್ಯಕ್ರಮದಲ್ಲಿ ಅಳವಡಿಸಿದ ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು, ಕಾರ್ಯಕ್ರಮದ ನಿರ್ವಹಣೆ, ವ್ಯವಸ್ಥೆಗಳು ಅತ್ಯಂತ ಉತ್ತಮವಾಗಿದ್ದವು ಪ್ರತಿ 3 ತಿಂಗಳಿಗೊಮ್ಮೆ ಆಡಳಿತ ಮಂಡಳಿ ಸದಸ್ಯರಿಗೆ ಬೇರೆ ಬೇರೆ ವಿಷಯಗಳ ಬಗ್ಗೆ ತರಬೇತಿ ವ್ಯವಸ್ಥೆಯನ್ನು ಮಾಡುವುದು ಅವಶ್ಯಕ ಎಂದು ಅಭಿಪ್ರಾಯ ನೀಡಿದರು.

## ಶಾಖೆ ಉದ್ಘಾಟನೆ




**ಮೈಸೂರು** : ದಿನಾಂಕ 27.06.2023 ರಂದು ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಕೋ ಆಪರೇಟಿವ್ ಲಿ., ಇದರ ಮೈಸೂರು ನಗರದ ಶಾಖೆಯನ್ನು ಮಾನ್ಯ ಶಾಸಕರಾದ ಶ್ರೀಯುತ ಜಿ ಟಿ ದೇವೇಗೌಡ ರವರು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀಯುತ ಜಿ ನಂಜನಗೌಡ ಇವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು, ಶಿಕ್ಷಣ ಸಲಹಾ ಸಮಿತಿಯ ಮಾನ್ಯ ಸದಸ್ಯರಾದ ಶ್ರೀ ಎಚ್ ವಿ ರಾಜೀವ್, ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಬಿ. ಹೆಚ್ ಕೃಷ್ಣಾರೆಡ್ಡಿ, ಸಹಕಾರ ಸಂಘಗಳ ಅಪರ ನಿಬಂಧಕರಾದ (ನಿ) ಶ್ರೀ ಸಿಎನ್ ಪರಶಿವಮೂರ್ತಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮವು, RBIನ ತರಬೇತಿ ಮಾನದಂಡಗಳಿಗೆ ಸಮಾನಾಗಿದೆ : RBI ನ ಜನರಲ್ ಮ್ಯಾನೇಜರ್ ಮೀನಾಕ್ಷಿ ಫಡಾ.

## 7-ದಿನಗಳ ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಳಿಸುವುದರ ಜೊತೆಗೆ ಸಹಕಾರಿ ವಲಯಕ್ಕೆ ಬ್ಯಾಂಕಿಂಗ್ ವೃತ್ತಿಪರರನ್ನು ಸಶಕ್ತಗೊಳಿಸಿತು

**ದಿನಾಂಕ : ಜೂನ್ 23, 2023 ಸ್ಥಳ: ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು.**



**ಬೆಂಗಳೂರು :** ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಶಕ್ತೀಕರಣ ಮತ್ತು ಉತ್ಕೃಷ್ಟತೆಯೆಡೆಗಿನ ಪಯಣದ ಪರಾಕಾಷ್ಠೆಯನ್ನು ಸೂಚಿಸುವ ಅತ್ಯಂತ ಶ್ರೀಮಂತ ಮತ್ತು ಪರಿವರ್ತನೆಯ 7–ದಿನಗಳ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ಜೂನ್ 23, 2023 ರಂದು ನಡೆಯಿತು. ಈ ಕಾರ್ಯಕ್ರಮವು ವಿವಿಧ ಬ್ಯಾಂಕಿಂಗ್ ಸಂಸ್ಥೆಗಳ ಗಣ್ಯಾತಿ ಗಣ್ಯರು ಮತ್ತು ಉತ್ಸಾಹಿ ಶಿಬಿರಾರ್ಥಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು..

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿದ್ದ ಗೌರವಾನ್ವಿತ RBI ಜನರಲ್ ಮ್ಯಾನೇಜರ್ ಮೀನಾಕ್ಷಿ ಫಡಾ ಮೇಡಂ ಅವರು ತಮ್ಮ ಜ್ಞಾನ ಮತ್ತು ಅನುಭವದ ಸಂಪತ್ತನ್ನು ಎಲ್ಲರಿಗೂ ಹೇಳಿದರು ಮತ್ತು ಭಾಗವಹಿಸುವವರಿಗೆ ಸ್ಫೂರ್ತಿ ನೀಡಿದರು. ಅಧ್ಯಕ್ಷರಾದ ಜೆ.ನಂಜನಗೌಡ, ವಿಶ್ವನಾಥ ಹಿರೇಮಠ, ಮೋಹಿತ್ ಮಸ್ಕಿ, RICM ನ ನಿರ್ದೇಶಕರಾದ ಎ ರವಿಚಂದ್ರನ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಭಾರತೀಯ ರಿಸರ್ವ್ ಬ್ಯಾಂಕ್ (RBI) ನ ಪ್ರಧಾನ ವ್ಯವಸ್ಥಾಪಕರಾದ ಮೀನಾಕ್ಷಿ ಫಡಾ ಮಾತನಾಡಿ, ನಡೆಯುತ್ತಿರುವ ತರಬೇತಿ ಕಾರ್ಯಕ್ರಮವನ್ನು ಶ್ಲಾಘಿಸಿದರು, ಸಂಯುಕ್ತ ಸಹಕಾರಿ ಒದಗಿಸಿದ ತರಬೇತಿಯು ಉತ್ತಮ ಗುಣಮಟ್ಟದ ಮತ್ತು ಸಮಗ್ರ ಸ್ವರೂಪವನ್ನು ಎತ್ತಿ ತೋರಿಸುತ್ತದೆ ಎನ್ನುವದರ ಜೊತೆ KSSFCL ನ ತರಬೇತಿ, ಇದು RBI ಸೂಚಿಸಿದ ತರಬೇತಿಗೆ ಸಮನಾಗಿದೆ ಎಂದು ನುಡಿದರು. ಸಹಕಾರಿ ಕ್ಷೇತ್ರದ ಸವಾಲುಗಳು ಮತ್ತು ಜವಾಬ್ದಾರಿಗಳಿಗೆ ಬ್ಯಾಂಕಿಂಗ್ ವೃತ್ತಿಪರರನ್ನು ಸಿದ್ಧಪಡಿಸುವಲ್ಲಿ ತರಬೇತಿಯ ಪ್ರಾಮುಖ್ಯತೆ ಮತ್ತು ಪ್ರಸ್ತುತತೆಯನ್ನು ಒತ್ತಿಹೇಳಿದರು.

ಅಧ್ಯಕ್ಷ ನಂಜನಗೌಡ ಅವರು ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಗ್ಗೆ ಹರ್ಷ ವ್ಯಕ್ತಪಡಿಸಿದರು, ಶಿಬಿರಾರ್ಥಿಗಳ ವೃತ್ತಿಪರ ಜೀವನವನ್ನು ರೂಪಿಸುವಲ್ಲಿ ಇದರ ಮಹತ್ವವನ್ನು ಒತ್ತಿ ಹೇಳಿದರು. 7–ದಿನಗಳ ತರಬೇತಿಯಲ್ಲಿ ಅಳವಡಿಸಿಕೊಂಡ ಅಮೂಲ್ಯವಾದ ಪಾಠಗಳು ಮತ್ತು ತತ್ವಗಳನ್ನು ತಮ್ಮ ವೃತ್ತಿಜೀವನದಲ್ಲಿ ಸಂಯೋಜಿಸಲು ಅವರು ಒತ್ತಾಯಿಸಿದರು. ಸಹಕಾರ ಮತ್ತು ಸಂಘಟಿತ ಕೆಲಸದ ಮಹತ್ವವನ್ನು ಒತ್ತಿ ಹೇಳಿದ ಅವರು, ಯುವ ಶಿಬಿರಾರ್ಥಿಗಳು ಸಹಕಾರಿ ಚಳುವಳಿಯ ಬೆನ್ನೆಲುಬಾಗಿ ಸಮಾಜಕ್ಕೆ ಅಮೂಲ್ಯವಾದ ಕೊಡುಗೆ ನೀಡಬೇಕೆಂದು ಕರೆ ನೀಡಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಗೌರವಾನ್ವಿತ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ಪ್ರಾಸ್ತಾವಿಕ ಮಾತುಗಳನ್ನ ಆಡಿದರು. ತರುವಾಯ, ತರಬೇತಿ ಶಿಬಿರದ ಉಸ್ತುವಾರಿ ವಿಕ್ರಾಂತ ಪಾಟೀಲ ಅವರು ತರಬೇತಿ ಕಾರ್ಯಕ್ರಮದ ಪ್ರಮುಖ ಮುಖ್ಯಾಂಶಗಳು ಮತ್ತು ಸಾಧನೆಗಳನ್ನು ಒಳಗೊಂಡ ವಿವರವಾದ ವರದಿಯನ್ನು ಮಂಡಿಸಿದರು.

ಸಮಾರೋಪ ಸಮಾರಂಭದ ಅವಿಭಾಜ್ಯ ಅಂಗವಾಗಿ ಪ್ರಶಸ್ತಿಗಳ ವಿತರಣೆಯನ್ನು ಸಂಯುಕ್ತ ಸಹಕಾರಿಯ ತರಬೇತಿಯ ಮುಖ್ಯಸ್ಥರಾದ ವಿ. ಜೆ. ಕಾರಕೂನ್ ಅವರು ಈ 7 ದಿನಗಳ ಈವೆಂಟ್‌ನಲ್ಲಿ ಭಾಗವಹಿಸುವವರ ಅತ್ಯುತ್ತಮ ಸಾಧನೆಗಳನ್ನು ಗುರುತಿಸಿದರು ಮತ್ತು ಅರ್ಹ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ನೀಡಲಾಯಿತು.

ಸಮಾರೋಪ ಸಮಾರಂಭದ ಒಟ್ಟಾರೆ ಯಶಸ್ಸನ್ನು ಶಿಬಿರಾರ್ಥಿಗಳು ಸ್ವತಃ ಪ್ರದರ್ಶಿಸಿದ ಅನುಕರಣೀಯ ಸಾಂಸ್ಥಿಕ ಕೌಶಲ್ಯ ಮತ್ತು ದೃಷ್ಟಿಗೆ ಕಾರಣವೆಂದು ಹೇಳಬಹುದು. ಅವರು ತಮ್ಮ ಪ್ರತಿಭೆ ಮತ್ತು ಸಮರ್ಪಣಾ ಮನೋಭಾವವನ್ನು ಪ್ರದರ್ಶಿಸಿ ಕಾರ್ಯಕ್ರಮ ನಡೆಸಿಕೊಟ್ಟರು

### ಅಂತರರಾಷ್ಟ್ರೀಯ ಯೋಗ ದಿನಾಚರಣೆ



ದಿನಾಂಕ 21.06.2023 ರಂದು 7 ದಿನಗಳ ತರಬೇತಿ ಕಾರ್ಯಕ್ರಮದ ಶಿಬಿರಾರ್ಥಿಗಳೊಂದಿಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಆರ್‌ಐಸಿಎಂ ನ ಡೆಪ್ಯುಟಿ ಡೈರೆಕ್ಟರ್‌ರಾದ ಎ ರವಿಚಂದ್ರನ್, ಯೋಗ ಗುರು ಡಾ. ಹರೀಶ್ ಹಾಗೂ ತರಬೇತಿ ಅಧಿಕಾರಿಯಾದ ವಿ.ಜೆ ಕಾರಕೂನ್ ಇವರು ಉಪಸ್ಥಿತರಿದ್ದರು .

# ಪ್ರವೇಶ ತರಬೇತಿ ಕಾರ್ಯಕ್ರಮ



ನೂತನ ಸೌಹಾರ್ದ ಸಹಕಾರಿಗಳು ಗುಣ ಮಟ್ಟದ ಕಡೆಹೆಚ್ಚು ಗಮನ ಅರಿಸುವುದು ಕಡ್ಡಾಯ – ಶ್ರೀ ನಂಜನಗೌಡ

**ಬಳ್ಳಾರಿ :** ದಿನಾಂಕ 12 & 13 ಜೂನ್ 2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ 2020 ರಿಂದ 2023 ವರೆಗೆ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳಿಗೆ ವಿಶೇಷ ಪ್ರವೇಶ ತರಬೇತಿಯನ್ನು ಮೈರಾಡ ಶಿಡಾರ ಢಾಣಾಪುರ ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನಡೆಸಿಕೊಟ್ಟರು. ಮೊದಲನೇ ದಿನದ ಅವಧಿ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು ಶ್ರೀ ಸುನಿಲ ಪತ್ತಾರ ಸಹಾಯಕ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಆಡಳಿತ ಮಂಡಳಿಯವರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಶ್ರೀ ಲಿಯಾಕತ್ ಅಲಿ ನಿವೃತ್ತ ಸಹಾಯಕ ನಿಬಂಧಕರು ಸಹಕಾರ ಇಲಾಖೆ ಇವರು ಉಪನ್ಯಾಸ ನೀಡಿದರು.

ಮೂರನೇ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳ ಕುರಿತು ಶ್ರೀ ಸೂರ್ಯಕಾಂತ ರ್‍ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ಉಪನ್ಯಾಸ ನೀಡಿದರು. ಎರಡನೇ ದಿನದ ಅವಧಿಯಲ್ಲಿ ಶ್ರೀ ವಿಶ್ವನಾಥ ಹಿರೇಮಠ ಮಾನ್ಯ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಇವರು ಸಾಮಾನ್ಯ ಸಭೆ ಆಡಳಿತ ಮಂಡಳಿಯ ಸಭೆಯ ಸಿದ್ಧತೆಯ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಬಿ.ಜೆ ಕುಲಕರ್ಣಿಯವರು ಬಡ್ಡೀಯೇತರ ಆದಾಯದ ಮೂಲಗಳ ಬಗ್ಗೆ, ರವಿಕುಮಾರ ಮುಖ್ಯಕಾಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಉಪನ್ಯಾಸ ನೀಡಿದರು. ಈ ತರಬೇತಿ ಕಾರ್ಯಕ್ರಮದಲ್ಲಿ 26 ಸಹಕಾರಿಗಳಿಂದ 53 ಪ್ರತಿನಿಧಿಗಳು ಭಾಗವಹಿಸಿದ್ದರು.

# ತರಬೇತಿ ಕಾರ್ಯಕ್ರಮ

ದಿನಾಂಕ 19.06.2023 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ,. ಮೈಸೂರು ಪ್ರಾಂತ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ–ರಿಗಾಗಿ ಲೆಕ್ಕಪರಿಶೋಧನಾ ವರದಿ ನಮೂನೆ ಬದಲಾವಣೆಯಾಗಿರುವ ಸಂಬಂಧಿಸಿದಂತೆ ಜೂಮ್ ವೇಬಿನಾರ್ ಮೂಲಕ ಆನ್‌ಲೈನ್ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾರಾಯಣ ಹೆಗಡೆ, ಉಪ ಪ್ರಧಾನ ವ್ಯವಸ್ಥಾಪಕರು, ಸಂಯುಕ್ತ ಸಹಕಾರಿ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಶಿವಕುಮಾರ ಬಿರಾದರ ಇವರು ನೆರವೇರಿಸಿದರು. ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು. ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಸಿಂಧು ಸಿ.ಟಿ ಮತ್ತು ಅಕ್ಷತಾ ರಾಠೋಡ ರವರು ನಿರ್ವಹಿಸಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 280 ಸೌಹಾರ್ದ ಸಹಕಾರಿಗಳಿಂದ 315 ಪ್ರತಿನಿಧಿಗಳು ಹಾಜರಿದ್ದರು.

ದಿನಾಂಕ 22.06.2023 ರಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ,. ಮೈಸೂರು ಪ್ರಾಂತ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ–ರಿಗಾಗಿ ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಜೂಮ್ ವೇಬಿನಾರ್ ಮೂಲಕ ಆನ್‌ಲೈನ್ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ರವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಮೈಸೂರು ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ. ವಿ. ರವೀಂದ್ರನಾಥ, ಮಾನ್ಯ ಸನ್ನದು ಲೆಕ್ಕ ಪರಿಶೋಧಕರು ಸಾಗರ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ರವರು ನೆರವೇ–ರಿಸಿದರು. ತಾಂತ್ರಿಕ ನಿರ್ವಹಣೆಯನ್ನು ಶ್ರೀಮತಿ ಸಿಂಧು ಸಿ.ಟಿ ಮತ್ತು ಅಕ್ಷತಾ ರಾಠೋಡ ರವರು ನಿರ್ವಹಿಸಿದರು. ಮೈಸೂರು ಪ್ರಾಂತ್ಯದ ಎಲ್ಲ ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 220 ಸೌಹಾರ್ದ ಸಹಕಾರಿಗಳಿಂದ 254 ಪ್ರತಿನಿಧಿಗಳು ಹಾಜರಿದ್ದರು.

# ವಿಷಯಾಧಾರಿತ ತರಬೇತಿ ಕಾರ್ಯಕ್ರಮ



ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಅತ್ಯಗತ್ಯ – ಜ್ಯಾಂತೀಕರ.

**ಬೀದರ** : ದಿನಾಂಕ 02.06.2023 ರಂದು ಕಲಬುರಗಿ ಪ್ರಾಂತದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ನಿರ್ದೇಶಕರಿಗೆ ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಶಾರದ ರೂಟಶೆಟ್, ನೌಬಾದ ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ನೆರವೇರಿಸಿದರು. ಮುಖ್ಯಅತಿಥಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಪವನಕುಮಾರ, ಒಕ್ಕೂಟದ ನಿರ್ದೇಶಕರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆ ವಹಿಸಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಶ್ರೀ ಸೂರ್ಯಕಾಂತ ರ‍್ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ನಡಸಿಕೊಟ್ಟರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀ ಕೇದರನಾಥ ಶೆಟಗಾರ ಸನ್ನದು ಲೆಕ್ಕಪರಿಶೋಧಕರು, ಸಹಕಾರಿಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಆದಾಯ ತೆರಿಗೆ ಕಾನೂನು ಮತ್ತು ಜಿಎಸ್‌ಟಿ ಕುರಿತು ಮಾಹಿತಿ ನೀಡಿದರು. ಸಾಮನ್ಯ ಸಭೆಯ ಪೂರ್ವ ತಯಾರಿಯ ಕುರಿತು ಸೂರ್ಯಕಾಂತ ರಯಾಕಲೆಯವರು ಮಾಹಿತಿ ನೀಡಿದರು. ತರಬೇತಿ 68 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೊಪ್ಪಳ** : ದಿನಾಂಕ 13.06.2023 ರಂದು ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ ಮತ್ತು ಕನಕಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಕಾನಿಯರಿಗೆ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಲಲಿತ ಮಹಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಕುಮಾರಪ್ಪ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರೀ ಸೂರ್ಯಕಾಂತ ರ‍್ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ನುಡಿದು, ಸಾಮಾನ್ಯ ಸಭೆಯ ಸಿದ್ದತೆಯ ಬಗ್ಗೆ ಉಪನ್ಯಾಸ ನೀಡಿದರು.

ಸಂಪನ್ಮೂಲ ವ್ಯಕ್ತಿಯಾಗಿ ಸಹಾಯಕ ನಿಬಂಧಕರು (ನಿವೃತ್ತ) ಶ್ರೀ ಲಿಯಾಕತ ಅಲಿಯವರು ಚುನಾವಣೆಯ ಪೂರ್ವ ಸಿದ್ದತೆಯ ಉಪನ್ಯಾಸ ನೀಡಿದರು. ಶ್ರೀಮತಿ ಚಂದ್ರಕಲಾ ಪ್ರಕಾಶ ಉಪ ಪ್ರಾಂಶುಪಾಲರು ಶ್ರೀ ಕೃಷಣ ದೇವರಾಯ ಶಿಕ್ಷಣ ಸಂಸ್ಥೆ ಇವರು ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 90 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕಲಬುರಗಿ** : ದಿನಾಂಕ 16.06.2023 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮು.ಕಾ.ನಿ ಮತ್ತು ಸಿಬ್ಬಂದಿಯವರಿಗೆ ವಿಷಯಾಧಾರಿತ ತರಬೇತಿಯನ್ನು ಪ್ರಾಂತೀಯ ಕಛೇರಿ ಕಲಬುರಗಿ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಭಾಷಚಂದ್ರ ಬರ್ಮಾ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಸಂಜೀವ ಮಹಾಜನ, ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರು ಮತ್ತು ಶ್ರೀ ಎಸ್.ಎಸ್. ಪಾಟೀಲ ಮಾನ್ಯ ಅಧ್ಯಕ್ಷರು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ.,ಇವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ನಾಗಾಜ ಮಡಿವಾಳ, ಮುಖ್ಯ ಕಾರ್ಯನಿರ್ವಾಹಕರು, ಮಾನವಿ ಪಟ್ಟಣ ಸಹಕಾರಿ ಬ್ಯಾಂಕ ಮಾನವಿ, ಶ್ರೀ ಸೂರ್ಯಕಾಂತ ರ‍್ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು ಸಾಮಾನ್ಯ ಸಭೆಯ ಪೂರ್ವಸಿದ್ದತೆಯ ಕುರಿತು ಮಾಹಿತಿ ನೀಡಿದರು.



**ಕೊಪ್ಪಳ** : ದಿನಾಂಕ 17.06.2023 ರಂದು ಪ್ರತಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಒಂದೊಂದು ಹಡಗಿನ ನಾವಿಕರೆಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ಹೇಳಿದರು. ನಗರದ ಶ್ರೀ ವೀರಮಹೇಶ್ವರ ಕ್ಷೇಮಾಭಿವೃದ್ಧಿ ಸಂಘದ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಯಲಬುರ್ಗಾ, ಕುಕನೂರು ಹಾಗೂ ಕುಷ್ಟಗಿ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಒಂದು ದಿನದ ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತಾನಾಡುತ್ತಾ ಸಮುದ್ರದಲ್ಲಿ ಹಡಗು ಚಲಿಸುವುದು ಅಷ್ಟು ಸುಲಭದ ಕೆಲಸವಲ್ಲ, ಕ್ಷಣದಲ್ಲಿ ವಾತಾವರಣ ಬದಲಾವಣೆಯಾಗುವುದರಿಂದ ನಾವಿಕನಾದವನು ಎದುರಿಸಿ ಗುರಿ ಮುಟ್ಟುತ್ತಾನೆ. ಅದರಂತೆ ನಾವೆಲ್ಲ ಹಣ-ಕಾಸಿನ ಚಟುವಟಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದಂತೆ ಇಲ್ಲಿ ಸಾಕಷ್ಟು ತೊಂದರೆಗಳು ಕ್ಷಣ ಕ್ಷಣಕ್ಕೂ ಅನುಭವಿಸಬೇಕಾಗುತ್ತದೆ. ಆದ್ದರಿಂದ ಅವುಗಳನ್ನು ಎದುರಿಸಿ ನಾವಿಕನಂತೆ ನಾವೆಲ್ಲ ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ಮುಖ್ಯಕಾರ್ಯನಿರ್ವಾಹಕರುಗಳಿಗೆ ಕರೆ ನೀಡಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಇಲಾಖೆಯ ಸಹಾಯಕ ನಿಬಂಧಕರಾದ ಶ್ರೀ ಶರಣಬಸಪ್ಪರವರು ಉದ್ಘಾಟಿಸಿದರು. ಈ ಕಾರ್ಯಕ್ರಮದ ವೇದಿಕೆಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶಂಕರಗೌಡ ಹಿರೇಗೌಡ, ನಿರ್ದೇಶಕರುಗಳಾದ ಚನ್ನಬಸಪ್ಪ ಕಡ್ಡಿಮುಡಿ, ಗುರುರಾಜ್ ಬಿಸಳ್ಳಿ, ಪ್ರಾಣೇಶ ದೇಸಾಯಿ ಮತ್ತು ಉಪನ್ಯಾಸಕರಾದ ಶ್ರೀ ಲಿಯಾಕತ ಅಲಿಯವರು ಉಪಸ್ಥಿತರಿದ್ದರು. ಮೊದಲಿಗೆ ಸ್ವಾಗತವನ್ನು ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜ-ಕರಾದ ಓಂಕಾರ ಧರಣಿಯವರು ನೆರವೇರಿಸಿದರು. ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರ್‍ಯಾಕಲೆಯವರು ನಿರ್ವಹಿಸಿದರು. ಚುನಾವಣೆ ಪೂರ್ವಸಿದ್ದತೆಯ ಕುರಿತು ಸಹಕಾರ ಸಂಘಗಳ ನಿಬಂಧಕರಾದ (ನಿವೃತ್ತ) ಲಿಯಾಕತ್ ಅಲಿಯವರು ಉಪನ್ಯಾಸ ನೀಡಿದರು. ಸಾಮಾನ್ಯ ಸಭೆಯ ಕುರಿತು ಸೂರ್ಯಕಾಂತ ರ್‍ಯಾಕಲೆ ಪ್ರಾಂತೀಯ ವ್ಯವಸ್ಥಾಪಕರು, ಮಾನಸಿಕ ಒತ್ತಡ ನಿರ್ವಹಣೆಯ ಕುರಿತು ಡಾ॥ ಕೇದಾರೇಶ್ವರ ಉಪನ್ಯಾಸ ನೀಡಿದರು. ತರಬೇತಿಯಲ್ಲಿ ನಾಲ್ಕು ತಾಲೂಕಿನ 100 ಸೌಹಾರ್ದ ಸಹಕಾರಿಗಳು ತರಬೇತಿಯ ಲಾಭ ಪಡೆದುಕೊಂಡರು.




**ಚಿಕ್ಕಮಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ್ಯದ ವತಿಯಿಂದ ದಿನಾಂಕ: 07.06.2023 ರಂದು ಚಿಕ್ಕಮಗಳೂರು, ತರೀಕೆರೆ, ಕಡೂರು ಹಾಗೂ ಮೂಡಿಗೆರೆ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ವಾಸವಿ ವಿವಿದ್ದೋದೇಶ ಸೌಹಾರ್ದ ಸಹಕಾರಿ ನಿಯಮಿತ ಇಲ್ಲಿ ಹಮ್ಮಿಕೊಳ್ಳಲಾಯಿತು.

ತರಬೇತಿಯ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಶ್ರೀ ಚೇತನ್ ಬಾವಿಕಟ್ಟೆ, ಸಹಾಯಕ ನಿಬಂಧಕರು, ಚಿಕ್ಕಮಗಳೂರು ಇವರು ನೆರವೇ-ರಿಸಿದರು ಕಾರ್ಯಕ್ರಮದ ಪ್ರಾಸ್ತವಿಕ ಹಾಗೂ ಸ್ವಾಗತವನ್ನ ಶ್ರೀ ಶಿವಕುಮಾರ್ ಬಿರಾದಾರ್ ಪ್ರಾಂತಿಯ ವ್ಯವಸ್ಥಾಪಕರು ಕ.ರಾ.ಸೌ.ಸಂ.ಸ. ನಿ ಮೈಸೂರು ಪ್ರಾಂತ ಇವರು ನೆರವೇರಿಸಿದರು

ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಚಿಕ್ಕಮಗಳೂರು ಜಿಲ್ಲಾ ಸಂಯೋಜಕರಾದ ಶ್ರೀ ಶಿವಕುಮಾರ್ ಎ ರವರು ನೆರವೇರಿಸಿದರು.

ಮೊದಲನೆಯ ಅವಧಿಯ ವಿಷಯ ಸಹಕಾರಿಯಲ್ಲಿ ನಾಯಕತ್ವ ಹಾಗೂ ಆಂತರಿಕ ಸಂಬಂಧಗಳು ವಿಷಯ ಕುರಿತು ಶ್ರೀಮತಿ ಚೈತನ್ಯ, ತರಬೇತಿದಾರರು, ಧರ್ಮಸ್ಥಳ ತರಬೇತಿ ಕೇಂದ್ರ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯ ವಿಷಯ ಕಛೇರಿ ಆಡಳಿತ ಹಾಗೂ ಕಡತಗಳ ನಿರ್ವಹಣೆ ಕುರಿತು ಶಿವಕುಮಾರ್ ಬಿರಾದಾರ್ ಪ್ರಾಂತಿಯ ವ್ಯವಸ್ಥಾಪಕರು ಇವರು ನೆರವೇರಿಸಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 10 ಸೌಹಾರ್ದ ಸಹಕಾರಿಗಳಿಂದ 10 ಪ್ರತಿನಿಧಿಗಳು ಹಾಜರಿದ್ದರು.



**ಚಿಕ್ಕಮಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತ್ಯದ ವತಿಯಿಂದ ದಿನಾಂಕ: 08.06.2023 ರಂದು ಶೃಂಗೇರಿ, ಕೊಪ್ಪ, ಹಾಗೂ ಎನ್. ಆರ್.ಪುರ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ರೋಟರಿ ಕ್ಲಬ್ ಸಭಾ ಭವನ ಬಾಳೆಹೊನ್ನೂರು ಇಲ್ಲಿ ಹಮ್ಮಿಕೊಳ್ಳಲಾಯಿತು.

ತರಬೇತಿಯ ಅಧ್ಯಕ್ಷತೆ ಮತ್ತು ಉದ್ಘಾಟನೆಯನ್ನು ಶ್ರೀ ವೆಂಕಟೇಶ್, ಅಧ್ಯಕ್ಷರು, ಬಾಳೆಹೊನ್ನೂರು ಸೌಹಾರ್ದ ಸಹಕಾರಿ ನಿ., ಇವರು ನೆರವೇ–ರಿಸಿದರು ಕಾರ್ಯಕ್ರಮದ ಪ್ರಾಸ್ತವಿಕ ಹಾಗೂ ಸ್ವಾಗತವನ್ನು ಶ್ರೀ ಶಿವಕುಮಾರ್ ಬಿರಾದಾರ್ ಪ್ರಾಂತಿಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ ಮೈಸೂರು ಪ್ರಾಂತ ಇವರು ನೆರವೇರಿಸಿದರು

ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಚಿಕ್ಕಮಗಳೂರು ಜಿಲ್ಲಾ ಸಂಯೋಜಕರಾದ ಶ್ರೀ ಶಿವಕುಮಾರ್ ಎ ರವರು ನೆರವೇರಿಸಿದರು. ಮೊದಲನೆಯ ಅವಧಿಯ ವಿಷಯ ಸಹಕಾರಿಯಲ್ಲಿ ನಾಯಕತ್ವ ಹಾಗೂ ಆಂತರಿಕ ಸಂಬಂಧಗಳು– ವಿಷಯ ಕುರಿತು ಶ್ರೀಮತಿ ಚೈತನ್ಯ, ತರಬೇತಿದಾರರು, ಧರ್ಮಸ್ಥಳ ತರಬೇತಿ ಕೇಂದ್ರ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯ ವಿಷಯ ಕಚೇರಿ ಆಡಳಿತ ಹಾಗೂ ಕಡತಗಳ ನಿರ್ವಹಣೆ ಕುರಿತು ಶ್ರೀ ಶಿವಕುಮಾರ್ ಬಿರಾದಾರ್ ಪ್ರಾಂತಿಯ ವ್ಯವಸ್ಥಾಪಕರು ಇವರು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 18 ಸೌಹಾರ್ದ ಸಹಕಾರಿಗಳಿಂದ 18 ಪ್ರತಿನಿಧಿಗಳು ಹಾಜರಿದ್ದರು.



**ಹಾವೇರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 02 ಜೂನ್ 2023 ರಂದು ಹಾವೇರಿ ಜಿಲ್ಲೆಯ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಶಿವಾ ರೆಸಿಡೆನ್ಸಿ ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪರವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತವನ್ನು ಷರೀಫ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸಂತೋಷರವರು ನೆರವೇರಿಸಿದರು, ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಕಲ್ಮೇಶ್ ಎಸ್ ಎಂ, ಜಿಲ್ಲಾ ಸಂಯೋಜ–ಕರುರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಅಕ್ಕಿಯಾಲೂರಿನ ಕಲ್ಪತರು ಸೌಹಾರ್ದ ಮುಖ್ಯ ಕಾರ್ಯ ನಿರ್ವಾಹಕರಾದ ಬಸವರಾಜ್ ಲಕ್ಕೊಳ್ಳಿ, ಇವರು ನೆರವೇ–ರಿಸಿದರು.

ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ಮತ್ತು ಆದಾಯ ತೆರಿಗೆ ಮತ್ತು ಜಿ.ಎಸ್.ಟಿ. ವಿಷಯದ ಕುರಿತು ಶ್ರೀ ಬಿ ವಿ ರವೀಂದ್ರನಾಥ ಇವರು ಉಪನ್ಯಾಸ ನೀಡಿದರು. ಹಾಗೂ ಬಡ್ಡಿ ದರ ನಿಗಧಿಪಡಿಸುವ ಕುರಿತ ಸುತ್ತೋಲೆ ಮಾಹಿತಿಯನ್ನು ಶ್ರೀ ಕಲ್ಮೇಶ ಎಸ್ ಎಂ ಇವರು ನೀಡಿದರು. ಒಟ್ಟು 154 ಸೌಹಾರ್ದ ಸಹಕಾರಿಗಳಿಂದ 133 ಜನ ಭಾಗವಹಿಸಿದ್ದರು.



**ಹಾವೇರಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿ ವತಿಯಿಂದ ದಿನಾಂಕ 01 ಜೂನ್ 2023 ರಂದು ಗದಗ ಮತ್ತು ಧಾರವಾಡ ಜಿಲ್ಲೆಗಳ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಮಂತ್ರ ರೆಸಿಡೆನ್ಸಿ ಹಾವೇರಿ ಇಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ನಾಗರಾಜ ದೇಶಪಾಂಡೆ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಂಗಳೂರು ಇವರು ನೆರವೇರಿಸಿದರು ಹಾಗೂ ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಲ್ಲಿಕಾರ್ಜುನ ಹೊರಕೇರಿ ಮಾನ್ಯ ನಿರ್ದೇಶಕರು ಸಂಯುಕ್ತ ಸಹಕಾರಿ ಬೆಂಗಳೂರು ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಶ್ರೀ ಹಿತೇಶಕುಮಾರ, ಸನ್ನದು ಲೆಕ್ಕಪರಿಶೋಧಕರು ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ, ಪ್ರಾಸ್ತಾವಿಕ ಹಾಗೂ ವಂದನಾರ್ಪಣೆಯನ್ನು ಜಿಲ್ಲಾ ಸಂಯೋಕರಾದ ಶ್ರೀ ಕಲ್ಮೇಶ ಎಸ್ ಎಮ್ ನೆರವೇರಿಸಿದರು.

ಮೊದಲನೆಯ ಅವಧಿಯ ವಿಷಯ ಅಂತಿಮ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ, ಆರ್ಥಿಕ ಸಬಲತೆಯ ಮಾನದಂಡಗಳು ವಿಷಯದ ಕು–ರಿತು ಶ್ರೀ ಬಿ ವಿ ರವೀಂದ್ರನಾಥ, ಸನ್ನದು ಲೆಕ್ಕಪರಿಶೋಧಕರು ಸಾಗರರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಶ್ರೀ ಹಿತೇಶಕುಮಾರ ಸನ್ನದು ಲೆಕ್ಕಪರಿಶೋಧಕರು ಇವರು ಆದಾಯ ತೆರಿಗೆ ಮತ್ತು ಜಿ.ಎಸ್.ಟಿ. ವಿಷಯದ ಕುರಿತು ಉಪನ್ಯಾಸ ನೀಡಿದರು. ಹಾಗೂ ಬಡ್ಡಿ ದರ ನಿಗಧಿಪಡಿಸುವ ಕುರಿತಾದ ಸುತ್ತೋಲೆ ಮಾಹಿತಿಯನ್ನು ಶ್ರೀ ಕಲ್ಮೇಶ ಎಸ್ ಎಂ ಇವರು ನೀಡಿದರು.

ಒಟ್ಟು 147 ಸೌಹಾರ್ದ ಸಹಕಾರಿಗಳಿಂದ 114 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಉತ್ತರ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಚೇರಿ ವತಿಯಿಂದ ದಿನಾಂಕ: 03 ಜೂನ್ 2023 ರಂದು ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಹಳಿಯಾಳ, ಮುಂಡಗೋಡ, ದಾಂಡೇಲಿ ಮತ್ತು ಜೊಯಿಡಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಟಿ.ಎಸ್.ಎಸ್ ವಿನಾಯಕ ಸಭಾ ಭವನ, ಶಿರಸಿ ಇಲ್ಲಿ ಹಮ್ಮಿಕೊಳ್ಳಲಾಯಿತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮೋಹನದಾಸ ಜೆ ನಾಯಕ, ಮಾನ್ಯ ನಿರ್ದೇಶಕರು, ಕ ರಾ ಸೌ ಸಂ ಸ ನಿ, ಬೆಂಗಳೂರು ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಂಜುನಾಥ ಶೆಟ್ಟಿ ಸನ್ನದು ಲೆಕ್ಕಪರಿಶೋಧಕರು. ಶಿರಸಿ ಇವರು ಆಗಮಿಸಿದ್ದರು.

ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯ ಮಾನ್ಯರ ಸ್ವಾಗತವನ್ನು ಶ್ರೀ ಗಂಗಾರಾಮ ಕೊಳಾಪ್ಪೆ ವ್ಯವಸ್ಥಾಪಕ ಕ.ರಾ.ಸೌ.ಸಂ.ಸ. ನಿ ಬೆಳಗಾವಿ ಪ್ರಾಂತ ಇವರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಶ್ರೀ ಬಸವರಾಜ ಹೊಂಗಲ ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಪ್ರಾಂತ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಉತ್ತರಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ ಜೆ ರವರು ನೆರವೇರಿಸಿದರು.

ಮೊದಲನೆಯ ಅವಧಿಯ ವಿಷಯ ಆದಾಯ ತೆರಿಗೆ ಮತ್ತು ಜಿ. ಎಸ್.ಟಿ. ವಿಷಯದ ಕುರಿತು ಶ್ರೀ ಮಂಜುನಾಥ ಶೆಟ್ಟಿ ಸನ್ನದು ಲೆಕ್ಕಪರಿಶೋಧಕರು ಶಿರಸಿ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ಅಮಲ್ಜಾರಿ ಪ್ರಕ್ರಿಯೆ ಕುರಿತು ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಮಾಹಿತಿ ನೀಡಿದರು. ತರಬೇತಿಯಲ್ಲಿ ಒಟ್ಟು 34 ಸೌಹಾರ್ದ ಸಹಕಾರಿಗಳಿಂದ 48 ಜನ ಭಾಗವಹಿಸಿದ್ದರು.

**ಉತ್ತರ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತ್ಯದ ವತಿಯಿಂದ ದಿನಾಂಕ: 10 ಜೂನ್ 2023 ರಂದು ಉತ್ತರಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಮತ್ತು ಜೋಯಿಡಾ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ಮಹಾಲಕ್ಷ್ಮಿ ಕಂಫರ್ಟ್, ಎನ್ ಹೆಚ್ 66, ಕುಮಟಾ ಇಲ್ಲಿ ಹಮ್ಮಿಕೊಳ್ಳಲಾಯಿತು.

ಮೊದಲನೆಯ ಅವಧಿಯಲ್ಲಿ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ವಿಷಯದ ಕುರಿತು ಶ್ರೀ ಸ್ವಾನಂದ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಬೆಂಗಳೂರುರವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ಅಮಲ್ಜಾರಿ ಪ್ರಕ್ರಿಯೆ ಕುರಿತು – ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಉತ್ತರಕನ್ನಡ ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷ್ ಕುಮಾರ್ ಎಂ ಜೆ ರವರು ನೆರವೇರಿಸಿದರು. ಒಟ್ಟು 70 ಸೌಹಾರ್ದ ಸಹಕಾರಿಗಳಿಂದ 99 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 06.06.2023 ರಂದು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಆರ್. ಇವರು ತುಮಕೂರು ನೂತನ ಜಿಲ್ಲಾ ಸಂಪರ್ಕ ಕಚೇರಿಯ ಪರಿಶೀಲನೆಗಾಗಿ ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ, ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್ ಪಾಯ್ಸ್ ನಿರ್ದೇಶಕರಾದ ಶ್ರೀ ನಾಗೇಶ್ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ ಹಾಗೂ ಭೇಟಿ

**ರಾಯಚೂರು** : ದಿನಾಂಕ 14.06.2023 ರಂದು ರಾಯಚೂರು ಜಿಲ್ಲೆಯ ಲಿಂಗಸೂಗುರು ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ರಡ್ಡೆರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಕಛೇರಿಯ ಆವರಣದಲ್ಲಿ ಲೆಕ್ಕಪರಿಶೋಧನಾ ಪೂರ್ವಸಿದ್ದತೆ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಬಗ್ಗೆ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಲಿಂಗಸೂಗುರು ತಾಲೂಕಿನ 18 ಸೌಹಾರ್ದ ಸಹಕಾರಿಗಳಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 17.06.2023 ರಂದು ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ.,ಮಸ್ಕಿ ಸಹಕಾರಿಯ ಸಭಾಂಗಣದಲ್ಲಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಅಯೋಜಿಸಲಾಗಿತ್ತು. ತರಬೇತಿಯಲ್ಲಿ ಲೆಕ್ಕಪರಿಶೋಧನಾ ಪೂರ್ವತಯಾರಿಯ ಸಿದ್ದತೆ, ಚುನಾವಣೆ ಇಲಾಖೆಗಳ ಬಗ್ಗೆ, ಕಾಮನ್ ಸಾಫ್ಟವೆರ್ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಬಗ್ಗೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು ಮಾಹಿತಿ ನೀಡಿದರು. ತರಬೇತಿಯ ಕೊನೆಯಲ್ಲಿ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ.,ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶರವರು ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಿದರು. ಈ ತರಬೇತಿಯಲ್ಲಿ ಮಸ್ಕಿ ತಾಲೂಕಿನ 20 ಸಹಕಾರಿಗಳಿಂದ 22 ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 03.06.2023 ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಲೆಕ್ಕಪರಿಶೋಧನೆ, ವರ್ಷಾಂತ್ಯದ ಮಾಹಿತಿ, ಚುನಾವಣೆ, ಕಾಮನ್ ಸಾಫ್ಟ್‌ವೇರ್, ಬಡ್ಡಿದರ ನಿಗದಿಪಡಿಸಿದ ಸುತ್ತೋಲೆ, 2000 ನೋಟಿನ ಹಿಂಪಡೆತ ವಿಷಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಈಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಮಾಹಿತಿ ನೀಡಿದರು. 08 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ 05.06.2023ರಂದು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಲೆಕ್ಕಪರಿಶೋಧನೆ, ವರ್ಷಾಂತ್ಯದ ಮಾಹಿತಿ, ಚುನಾವಣೆ, ಕಾಮನ್ ಸಾಫ್ಟ್‌ವೇರ್, ಬಡ್ಡಿದರ ನಿಗದಿಪಡಿಸಿದ ಸುತ್ತೋಲೆ, 2000 ನೋಟಿನ ಹಿಂಪಡೆತ ವಿಷಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಮಾಹಿತಿ ನೀಡಿದರು. 06 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ 06.06.2023 ರಂದು ತೀರ್ಥಹಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಲೆಕ್ಕಪರಿಶೋಧನೆ, ವರ್ಷಾಂತ್ಯದ ಮಾಹಿತಿ, ಚುನಾವಣೆ, ಕಾಮನ್ ಸಾಫ್ಟ್‌ವೇರ್, ಬಡ್ಡಿದರ ನಿಗದಿಪಡಿಸಿದ ಸುತ್ತೋಲೆ, 2000 ನೋಟಿನ ಹಿಂಪಡೆತ ವಿಷಯಗಳ ಕು–ರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಇವರು ಅಧ್ಯಕ್ಷತೆ ವಹಿಸಿ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ.ಹೆಚ್. ಇವರು ಭಾಗವಹಿಸಿದ್ದರು. 16 ಜನ ಮುಖ್ಯಕಾರ್ಯನಿರ್ವಾಹಕರು ಮತ್ತು 02 ಇತರೆ ಸಿಬ್ಬಂದಿಗಳು ಭಾಗವಹಿಸಿದ್ದರು.

ದಿನಾಂಕ 08.06.2023 ರಂದು ಹೊಸನಗರದಲ್ಲಿ ಹೊಸನಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕ್ಲಸ್ಟರ್ ಮಟ್ಟದ ಕಾರ್ಯಾಗಾರದಲ್ಲಿ 06 ಜನ ಮುಖ್ಯಕಾರ್ಯನಿರ್ವಾಹಕರು ಮತ್ತು 1 ಇತರೆ ಸಿಬ್ಬಂದಿ ಭಾಗವಹಿಸಿದ್ದರು.

ದಿನಾಂಕ.09.06.2023 ರಂದು ಸಾಗರದಲ್ಲಿ ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಕ್ಲಸ್ಟರ್ ಮಟ್ಟದ ಕಾರ್ಯಾಗಾರ. 17 ಜನ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ 12 & 13.06.2023 ರಂದು ಬೆಂಗಳೂರು ನಗರ (1&4ನೇ ವಲಯ) ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು.

ದಿನಾಂಕ 15.06.2023 ರಂದು ಶಿವಮೊಗ್ಗ ನಗರದ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು.

ದಿನಾಂಕ 16.06.2023 ಶಿವಮೊಗ್ಗ ಗ್ರಾಮಾಂತರ ಸೌಹಾರ್ದ ಸಹಕಾ–ರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು.

ದಿನಾಂಕ 16.06.2023 ರಂದು ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ–ಆಪರೇಟಿವ್ ಲಿ, ದಾವಣಗೆರೆ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ನಿರ್ದೇಶಕರುಗಳ ಜವಾಬ್ದಾರಿ ಮತ್ತು ಕರ್ತವ್ಯದ ಬಗ್ಗೆ ಮಾಹಿತಿಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ನೀಡಿದರು.

ಹಿರಿಯೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 16–6–2023 ರಂದು ಮಧ್ಯಾಹ್ನ 12.00 ರಿಂದ 2.00 ರವರೆಗೆ ಶ್ರೀ ಕನ್ನಿಕಾ ಸೌಹಾರ್ದ ಸಹಕಾರಿ ನಿ., ಹಿರಿಯೂರು ಇಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ: 17–06–2023 ರಂದು ವಲ್ಮೀಕಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ತುಮಕೂರು ಜಿಲ್ಲಾ ಸಂಯೋಜ–ಕರಾದ ಶ್ರೀ ಉಮೇಶ್ ಎ.ಎಸ್ ರವರು ಸಾಮಾನ್ಯ ಭೇಟಿ ನೀಡಿ ಸಹಕಾ–ರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಪ್ರಗತಿ ಪರಿಶೀಲನೆ

ನಡೆಸಿದರು. ಹಾಗೂ ಸಹಕಾರಿಯಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ಸಲಹೆ ಹಾಗೂ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ರಾಮಾಂಜನೇಯ ರವರು, ನಿರ್ದೇಶಕರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

ದಿನಾಂಕ:19–06–2023 ರಂದು ಶ್ರೀ ವೀರಶೈವ ಸೌಹಾರ್ದ ಸಹಕಾರಿ ಸಂಘ ನಿ., ಕುಣಿಗಲ್ ಸಹಕಾರಿ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ, ಚುನಾವಣೆ, ಉಪವಿಧಿ ತಿದ್ದುಪಡಿ, ಆಡಳಿತ ಮಂಡಳಿ ಸಭೆ & ಸಾಮಾನ್ಯ ಸಭೆ, ಈಸಿ ಪೇ ಪಾವತಿ ಹಾಗೂ ಇತರೆ ಶಾಸನಾತ್ಮಕ ವಿಷಯಗಳ ಬಗ್ಗೆ ಕ್ಲಸ್ಟರ್ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಕುಣಿಗಲ್ ತಾಲ್ಲೂಕಿನ 7 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿ ಸೇರಿ ಒಟ್ಟು 8 ಜನರು ಭಾಗವಹಿಸಿದ್ದರು.

ದಿನಾಂಕ: 20–06–2023 ರಂದು ಜಿ.ಎಸ್.ಪಿ (ಗುರು ಸಿದ್ಧರಾಮೇಶ್ವರ ಪ್ರಸನ್ನ) ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಗುಬ್ಬಿ, ಸಹಕಾರಿಯ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ, ಚುನಾವಣಾ ಪ್ರಕ್ರಿಯೆ, ಆಡಳಿತ ಮಂಡಳಿ ಸಭೆ & ಸಾಮಾನ್ಯ ಸಭೆ, ಉಪವಿಧಿ ತಿದ್ದುಪಡಿ, ಈಸಿ ಪೇ ಪಾವತಿ ಹಾಗೂ ಇತರೆ ಶಾಸನಾತ್ಮಕ ವಿಷಯಗಳ ಬಗ್ಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಗುಬ್ಬಿ ತಾಲ್ಲೂಕಿನ 7 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ:20–06–2023 ರಂದು ಕಲ್ಪತರು ಪರಿವರ್ತನ ಸೌಹಾರ್ದ ಸಹಕಾರಿ ಸಂಘ ನಿ., ಕೊರಟಗೆರೆ, ಸಹಕಾರಿಯ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ, ಚುನಾವಣಾ ಪ್ರಕ್ರಿಯೆ, ಆಡಳಿತ ಮಂಡಳಿ ಸಭೆ & ಸಾಮಾನ್ಯ ಸಭೆ, ಉಪವಿಧಿ ತಿದ್ದುಪಡಿ, ಈಸಿ ಪೇ ಪಾವತಿ ಹಾಗೂ ಇತರೆ ಶಾಸನಾತ್ಮಕ ವಿಷಯಗಳ ಬಗ್ಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯಲ್ಲಿ ಕೊರಟಗೆರೆ ತಾಲ್ಲೂಕಿನ 8 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿ ಸೇರಿ ಒಟ್ಟು 15 ಜನ ಭಾಗವಹಿಸಿದ್ದರು.

ದಿನಾಂಕ:21–06–2023 ರಂದು ಮಧು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಮಧುಗಿರಿ, ಸಹಕಾರಿಯ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ, ಚುನಾವಣಾ ಪ್ರಕ್ರಿಯೆ, ಉಪವಿಧಿ ತಿದ್ದುಪಡಿ, ಆಡಳಿತ ಮಂಡಳಿ ಸಭೆ & ಸಾಮಾನ್ಯ ಸಭೆ, ಈಸಿ ಪೇ ಪಾವತಿ ಹಾಗೂ ಇತರೆ ಶಾಸನಾತ್ಮಕ ವಿಷಯಗಳ ಬಗ್ಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಮಧುಗಿರಿ ತಾಲ್ಲೂಕಿನ 7 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿ ಸೇರಿ ಒಟ್ಟು 10 ಜನ ಭಾಗವಹಿಸಿದ್ದರು.

ದಿನಾಂಕ 21–06–2023 ರಂದು ದಿ ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಪಾವಗಡ ಶಾಖೆ, ಸಹಕಾರಿಯ ಶಾಖಾ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ, ಚುನಾವಣಾ ಪ್ರಕ್ರಿಯೆ, ಉಪವಿಧಿ ತಿದ್ದುಪಡಿ, ಆಡಳಿತ ಮಂಡಳಿ ಸಭೆ & ಸಾಮಾನ್ಯ ಸಭೆ, ಈಸಿ ಪೇ ಪಾವತಿ ಹಾಗೂ ಇತರೆ ಶಾಸನಾತ್ಮಕ ವಿಷಯಗಳ ಬಗ್ಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿಯಲ್ಲಿ ಪಾವಗಡ ತಾಲ್ಲೂಕಿನ 17 ಸೌಹಾರ್ದ ಸಹಕಾರಿಗಳಿಂದ ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೆ ಸಿಬ್ಬಂದಿ ಸೇರಿ ಒಟ್ಟು 23 ಜನ ಭಾಗವಹಿಸಿದ್ದರು.

ದಿನಾಂಕ 06.06.2023 ರಂದು ವಲ್ಮೀಕಿ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಸಹಕಾರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಆರ್. ಇವರು ಭೇಟ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯಲ್ಲಿ ಉಂಡಾಗಿರುವ ಸಮಸ್ಯೆಗಳಿಗೆ ಕಾನೂನು ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ರಾಮಾಂಜನೇಯ ರವರು, ನಿರ್ದೇಶಕರು,ಮುಖ್ಯಕಾರ್ಯನಿರ್ವಾಹಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 07.06.2023 ರಂದು ಸಮರ್ಥ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್. ಇವರು ಭಾಗವಹಿಸಿದ್ದರು. ಸಭೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಸಹಕಾರಿಯ ಸುಸ್ಥಿದಾರ ಸದಸ್ಯರಿಗೆ ಸಂಬಂಧಿಸಿದಂತೆ ಸೌಹಾರ್ದ ನ್ಯಾಯಾಲಯದಲ್ಲಿ ದಾವೆ ಹೂಡುವ ಕುರಿತು ಕಾನೂನು ಸಲಹೆ ಹಾಗೂ ಅಗತ್ಯ ಮಾರ್ಗದರ್ಶನ ನೀಡಿದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ನಿಂಗಪ್ಪ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ದಿನಾಂಕ 14.06.2023 ರಂದು ವೆಜಿಟೆಬಲ್ ಪ್ಲಾಂಟ್ ಸೌಹಾರ್ದ ಪತ್ತಿನ ಸಹಕಾರಿ ನಿ, ದಾವಣಗೆರೆ ಸಹಕಾರಿಗೆ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಆರ್. ಇವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಉಪಸ್ಥಿತರಿದ್ದರು.

ಬಾಗಲಕೋಟೆ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 03 ಜೂನ್ 2023 ರಂದು

ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ ಇಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್. ಪಾಟೀಲ್ ಇವರು ಉಪಸ್ಥತರಿದ್ದು ಸಹಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ಮಾಹಿತಿ ನೀಡಿದರು.

ಮುಧೋಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 05 ಜೂನ್ 2023ರಂದು ಮುಧೋಳ ತಾಲೂಕು ಕಬ್ಬು ಬೆಳೆಗಾರರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ವಿಷಯಗಳ ಕುರಿತು ಮಾಹಿತಿ ನೀಡಿದರು.

ರಬಕವಿ ಬನಹಟ್ಟಿ ಮತ್ತು ತೆರದಾಳ ತಾಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 06 ಜೂನ್ 2023ರಂದು ರಾಜಸಾಗರ ಐಟಿಐ ಕಾಲೇಜ್ ತೆರದಾಳದಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ವಿಷಯಗಳ ಕುರಿತು ಮಾಹಿತಿ ನೀಡಿದರು.

ಬಾದಾಮಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ದಿನಾಂಕ 07 ಜೂನ್ 2023 ರಂದು ಗುರು ಸದಾಶಿವ ಸೌಹಾರ್ದ ಸಹಕಾರಿ ಸಂಘ ನಿಯಮಿತ ಬಾದಾಮಿಯಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ವಿಷಯಗಳ ಕುರಿತು ಮಾಹಿತಿ ನೀಡಿದರು.

ಜಮಖಂಡಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ದಿನಾಂಕ 08–06–2023 ರಂದು ಬೆಳಿಗ್ಗೆ 10.30 ಕ್ಕೆ ಪುಷ್ಪ ತಾಯಿ ಕಾಲೇಜು, ಶ್ರೀ ಪ್ರಭುಲಿಂಗೆಸ್ವರ ಸಕ್ಕರೆ ಕಾರ್ಖಾನೆ ಆವರಣ, ಸಿದ್ದಾಪುರದಲ್ಲಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು. ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ಇವರು ವಿಷಯಗಳ ಕುರಿತು ಮಾಹಿತಿ ನೀಡಿದರು.

## ಪರಿಸರ ದಿನಾಚರಣೆ ಆಚರಣೆ

**ರಾಯಚೂರು** : ದಿನಾಂಕ 20.06.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಸಹಯೋಗದೊಂದಿಗೆ ಲಿಂಗದಹಳ್ಳಿ ಬಳಿ ಇರುವ ಶ್ರೀ ಪರಮಾನಂದ ದೇವಸ್ಥಾನದ ಮುಂಭಾಗದ ಆವರಣದಲ್ಲಿ "ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ" ಎಂಬ ಪರಿಸರ ಜಾಗೃತಿ ಮತ್ತು ಸಸಿ ನೆಡುವ ಕಾರ್ಯಕ್ರಮವನ್ನು ಹಾಗೂ ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮತ್ತು ವೇದಿಕೆಯ ಉಪಸ್ಥಿತರಿದ್ದ ಗಣ್ಯರು ನೆರವೇರಿಸಿದರು. ನಂತರ ಪರಿಸರ ಜಾಗೃತಿ ಹಾಗೂ ಸಸಿ ನೆಡುವ ಕಾರ್ಯಕ್ರಮ ನೆರವೇರಿಯಿತು. ಮುಖ್ಯಅತಿಥಿಗಳಾಗಿ ಶ್ರೀಮತಿ ರೇವತಿ ಶಂಕರಗೌಡ ಹೊರಟ್ಟಿ, ಮಾನ್ಯ ಅಧ್ಯಕ್ಷರು ಜಾಲಹಳ್ಳಿ ಗ್ರಾಮ ಪಂಚಾಯತಿ, ಶ್ರೀ ಗಿರಿಯಪ್ಪ, ಉಪ ವಲಯ ಅರಣ್ಯಾಧಿಕಾರಿಗಳು, ಜಾಲಹಳ್ಳಿ ಶ್ರೀ ಬಸವರಾಜ ಅರಣ್ಯ ಇಲಾಖೆಯ ಅಧಿಕಾರಿಗಳು, ಶ್ರೀ ಶಿವಲಿಂಗಪ್ಪ ಗಂಟಿ, ನಿರ್ದೇಶಕರು ಸಮೂಹ ಎನ್.ಜಿ.ಓ ದೇವದುರ್ಗ , ಶ್ರೀ ಸತ್ಯನಾರಾಯಣ ಹಿರಿಯ ಲೆಕ್ಕಪರಿಶೋಧಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಸಿಂಧನೂರು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ. ಶ್ರೀ ಮಹಾಂತಯ್ಯ ಸ್ವಾಮಿ ಮಾನ್ಯ ಅಧ್ಯಕ್ಷರು ಶ್ರೀ ಪರಮಾನಂದ ಜನ ಕಲ್ಯಾಣ ಟ್ರಸ್ಟ್ ದೇವದುರ್ಗ, ಶ್ರೀ ವೆಂಕಟರಾಯನ ಬೆನಕನ, ಮಾನ್ಯ ಅಧ್ಯಕ್ಷರುಗಳು ಹೊರನಾಡು ಅನ್ನಪೂರ್ಣೆಶ್ವರಿ ಸೌಹಾರ್ದ ಸಹಕಾರಿ ಸಂಘ ನಿ.,ದೇವದುರ್ಗ ಇವರುಗಳು ಉಪಸ್ಥಿತರಿದ್ದರು. ನಂತರ ಲೆಕ್ಕಪರಿಶೋಧನಾ ಪೂರ್ವಸಿದ್ಧತೆ, ಆಡಳಿತ ಮಂಡಳಿ ಸಭೆ, ವಾರ್ಷಿಕ ಸಾಮಾನ್ಯ ಸಭೆ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಬಗ್ಗೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರು ಸಹಕಾರಿಗಳಿಗೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ ದೇವದುರ್ಗ ತಾಲೂಕಿನ 120 ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

ಸಹ್ಯಾದ್ರಿ ರೈತ ಮಿತ್ರ ಸೌಹಾರ್ದ ಸಹಕಾರಿ ನಿ ಆಯನೂರು ಇದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಪದಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದೊಂದಿಗೆ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮವು ಪದವಿಪೂರ್ವ ಕಾಲೇಜು ಆವರಣ ಪಿಯು ಕಾಲೇಜ್ ಮತ್ತು ಪ್ರೌಢಶಾಲಾ ಆವರಣ ಆಯನೂರು ಸಮುದಾಯ ಆಸ್ಪತ್ರೆ ಆವರಣ ಮತ್ತು ಗ್ರಾಮ ಪಂಚಾಯಿತಿ ಮತ್ತು ಸುತ್ತಮುತ್ತಲ ಶಾಲೆಗಳಲ್ಲಿ ನೆರವೇರಿಸಲಾಯಿತು.

## ಸರಸ್ವತಿ ಸೌಹಾರ್ದ ಸಹಕಾರಿಯ ಶಾಖೆ ಉದ್ಘಾಟನೆ



**ಮಡಂತ್ಯಾರು :** ಸಹಕಾರಿ ಸಂಘಗಳು ಜನರು ಜೀವನದ ಕಡೆ ನೋಡುವ ದೃಷ್ಟಿಕೋನವನ್ನು ಬದಲಾಯಿಸಿದೆ. ಜನರಿಗೆ ಉತ್ತಮ ಸೇವೆಯನ್ನು ನೀಡಿ ಜನತೆಯ ವಿಶ್ವಾಸವನ್ನು ಗಳಿಸಲಿ. ಶ್ರೀ ಸರಸ್ವತಿ ಸಹಕಾರಿ ಸಂಘ ತಮ್ಮದೇ ಆದಂತಹ ಸಂಸ್ಥೆಯನ್ನು ಸ್ಥಾಪಿಸಿ, ಯುವ ಜನತೆಗೆ ಉದ್ಯೋಗ ಸೃಷ್ಟಿಸುವ ಅವಕಾಶವನ್ನು ಕಲ್ಪಿಸಿದೆ ಎಂದು ವಿಧಾನ ಪರಿಷತ್ ಸದಸ್ಯ ಶ್ರೀ ಪ್ರತಾಪ್‌ಸಿಂಹ ನಾಯಕ್ ಹೇಳಿದರು. ಅವರು ಜೂ.2 ರಂದು ಮಡಂತ್ಯಾರಿನಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ (ನಿ.) ಯ 18ನೇ ಶಾಖೆಯ ಉದ್ಘಾಟನೆಯನ್ನು ದೀಪ ಪ್ರಜ್ವಲಿಸಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮಾಲಾಡಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಬೇಬಿ ಸುಸ್ನಾನ, ಮಡಂತ್ಯಾರು ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಶಶಿಪ್ರಭಾ, ನಾವೂರು ಗ್ರಾಮ ಪಂಚಾಯತ್ ಅಧ್ಯಕ್ಷ ಗಣೇಶ ಗೌಡ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ನಿರ್ದೇಶಕ ಶ್ರೀಮತಿ ಭಾರತಿ ಜಿ. ಭಟ್, ಕರ್ನಾಟಕ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸಂಯೋಜಕ ವಿಜಯ್, ಎ.ಎನ್. ಕಾಂಪ್ಲೆಕ್ಸ್ ಮಾಲಕ ಶ್ರೀಮತಿ ವಸಂತಿ ಜೆ.ಶೆಟ್ಟಿ, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶ್ಚಂದ್ರರವರು ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು ಶಾಖಾ ವ್ಯವಸ್ಥಾಪಕರಾದ ಶ್ರೀ ಪುರಷೋತ್ತಮ ನಾಯಕ್ ವಂದಿಸಿದರು ಸಿಬ್ಬಂದಿ ಶ್ರೀಮತಿ ಸುಷ್ಮಾ ಪ್ರಾರ್ಥಿಸಿದರು. ಪ್ರಧಾನ ಕಚೇರಿಯ ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ಟಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು, ನಿರ್ದೇಶಕರುಗಳಾದ ಶ್ರೀ ದೇವಿಪ್ರಸಾದ್ ಕೆ, ಶ್ರೀ ಕೆ ಹರೀಶ್ ಬೋರ್ಕರ್, ಶ್ರೀ ಹೇಮಂತ್ ಕುಮಾರ್ ಕೆ ಆರ್, ಶ್ರೀ ಪ್ರಕಾಶ್ಚಂದ್ರ ಪಿ, ಶ್ರೀ ರಮೇಶ್ಚಂದ್ರ ಎಂ, ಶ್ರೀ ರಾಜಗೋಪಾಲ ಬಿ, ಶ್ರೀಮತಿ ದೇವಕಿ ಕೆ, ಶ್ರೀಮತಿ ಸರಸ್ವತಿ ಎನ್, ಶ್ರೀ ಬಿ ವಸಂತ ಶಂಕರ್, ಶ್ರೀ ರವೀಶ್ ಪಿ, ಮಾಜಿ ಉಪಾಧ್ಯಕ್ಷರಾದ ಶ್ರೀ ಅನಂತಕೃಷ್ಣ ನಾಯಕ್, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಭವಾನಿ ಪ್ರಭು ಹಾಗೂ ಸಹಕಾರಿಯ ಸಿಬ್ಬಂದಿಗಳು ಹಾಗೂ ಸದಸ್ಯರುಗಳು ಭಾಗವಹಿಸಿದರು.

## ಅಭಿನಂದನಾ ಪತ್ರ

**ರಾಯಚೂರು :** ಶಿವಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಾನವಿ, ರಾಯಚೂರು ಇವರು ದಿನಾಂಕ 29.12.2022 ರಂದು ಸರ್ಕಾರಿ ಉರ್ದು ಪ್ರೌಢ ಶಾಲೆ, ಮಾನವಿ ಶಾಲೆಯನ್ನು ದತ್ತು ಪಡೆದುಕೊಂಡು ಶಾಲೆಯ ಭೌತಿಕ/ಶೈಕ್ಷಣಿಕ ಅಭಿವೃದ್ಧಿಗೆ ಸಹಕರಿಸಿ ತಮ್ಮ ಸಹಕಾರಿಯಿಂದ ಆರ್ಥಿಕ ಸೌಲಭ್ಯ ಒದಗಿಸಿಕೊಟ್ಟು ಶಾಲೆಗೆ ಸುಣ್ಣ-ಬಣ್ಣ, ಆವರಣದ ದುರಸ್ತಿಕಾರ್ಯ ಕೈಗೊಂಡು ಶಾಲೆಯ ಅಂದ ಹೆಚ್ಚಿಸಿ, ಭಾತಿಕ ಪರಿಸರ ಉತ್ತಮಪಡಿಸಿ ಹಾಗೂ 10ನೇ ತರಗತಿ (2022-23) ವಿದ್ಯಾರ್ಥಿಗಳಿಗೆ ಅಭ್ಯಾಸಮಾಡಲು ನೋಟ್ಸ್‌ಗಳನ್ನು ಝುರಾಕ್ಸ್‌ಮಾಡಿ ಎಲ್ಲಾ ವಿದ್ಯಾರ್ಥಿಗಳಿಗೆ ವಿತರಿಸಿ ಉತ್ತಮ ಪರಿತಾಂಶ (100%) ಪಡೆಯಲು ಸಹಕರಿಸಿರುತ್ತಾರೆ. ಸದರಿ ಸಹಕಾರಿಯ ಅಧ್ಯಕ್ಷರು ಹಾಗೂ ಎಲ್ಲಾ ಆಡಳಿತ ಮಂಡಳಿಯವ-ರಿಗೂ, ಸಹಕಾರಿಯ ಸಿಬ್ಬಂದಿಯರಿಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಅಭಿನಂದನೆ ಪತ್ರವನ್ನು ನೀಡಿರುತ್ತಾರೆ.

## ಭೇಟಿ



**ಹಾಸನ :** ಶ್ರೀ ಸಮೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹಾಸನ ಇದರ ಕಛೇರಿಗೆ ಶ್ರೀ ಅಶೋಕ ಹಾರನಹಳ್ಳಿ ರವರು, ಮಾಜಿ ಅಡ್ವೋಕೇಟ್ ಜನರಲ್ ಕರ್ನಾಟಕ ಮತ್ತು ಅಧ್ಯಕ್ಷರು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ, ಹಾಸನ ಹಾಗೂ ಅಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ, ಬೆಂಗಳೂರು ಇವರು ಭೇಟಿ ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಡಿ ಪಾರ್ಶ್ವನಾಥ್ ರವರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಶ್ರೀ ಅಶೋಕ ಹಾರನಹಳ್ಳಿ ಇವರನ್ನು ಸನ್ಮಾನಿಸಿದರು.

## ಗ್ರಾಮೀಣ ಪ್ರದೇಶದಲ್ಲಿ ಶ್ರೀಮಾತಾದ 2 ದಶಕಗಳ ಸಾಧನೆ ಶ್ಲಾಘನೀಯ

### – ಜಿ ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



**ಶಿರಸಿ :** ಶ್ರೀ ಮಾತಾ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ. ಹಿರೇಸರ, ಉಮ್ಮಚಗಿ, ಯಲ್ಲಾಪುರ ಉತ್ತರ ಕನ್ನಡ ಸಹಕಾರಿಯ ದ್ವಿ–ದಶಮಾನ ವರ್ಷಾಚರಣೆಯ ಶುಭಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಶ್ರೀ ಶಿವರಾಮ ಹೆಬ್ಬಾರ, ಸ್ಥಳೀಯ ಶಾಸಕರು ಹಾಗೂ ಮಾಜಿ ಮಂತ್ರಿಗಳು ಮತ್ತು ಸ್ವರ್ಣದಲ್ಲಿ ಮಹಾಸಂಸ್ಥಾನದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾ ಸ್ವಾಮಿಗಳ ಜೊತೆ ವೇದಿಕೆಯಲ್ಲಿ ಉದ್ಘಾಟನೆಯನ್ನು ಪೂರೈಸಿದ ನಂತರ ತಮ್ಮ ಅತಿಥಿ ಭಾಷಣದಲ್ಲಿ ಮಾತನಾಡುತ್ತಾ ಕರ್ನಾಟಕ ರಾಜ್ಯ ಸೌಹಾರ್ದ ಸಮಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರು, ಶ್ರೀ ಮಾತಾ ಸಹಕಾರಿ ಸಂಘದ 20 ವರ್ಷದ ಉತ್ತಮ ಸಾಧನೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಿ ಎಲ್ಲ ಕಠಿಣ ಸವಾಲುಗಳನ್ನು ಎದುರಿಸಿ 20 ವರ್ಷಗಳ ಪ್ರಾಢಾವಸ್ಥೆಗೆ ತಲುಪಿ ಅಮೂಲ್ಯ ಸೇವೆ ಸಲ್ಲಿಸಿ ಯಶಸ್ವಿಯಾಗಿ ಮುನ್ನಡೆಸುತ್ತಿರುವುದಕ್ಕೆ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಿ. ಎನ್ ಹೆಗಡೆ ಮತ್ತು ಇತರರಿಗೆ ಅಭಿನಂದನೆ ಸಲ್ಲಿಸಿದರು. ಅಂತೆಯೇ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಸ್ತುಬದ್ಧವಾಗಿ ಸೌಹಾರ್ದ ಸಹಕಾರಿ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದು ತಿಳಿಸಿದರು.

ಕೆಲವು ಸಹಕಾರಿ ಸಂಘಗಳು ರಾಜ್ಯದ ಇತರ ಭಾಗದಲ್ಲಿ ನಿಯಮ ಬಾಹಿರವಾಗಿ ಮಾಡುತ್ತಿರುವ ಕೆಲಸಗಳಿಂದ ಸಹಕಾರಿ ಸಂಘಗಳ ಉದ್ದೇಶ ಮತ್ತು ಘನತೆಗೆ ಧಕ್ಕೆ ಉಂಟಾಗುತ್ತಿದೆ ಎಂದು ವಿಷಾಧ ವ್ಯಕ್ತಪಡಿಸಿದರು. ಆದ್ದರಿಂದ ಎಲ್ಲಾ ಸಹಕಾರಿಗಳಿಗೂ ಅನ್ವಯವಾಗುವಂತೆ ಏಕರೂಪ ತಂತ್ರಜ್ಞಾನ ವ್ಯವಸ್ಥೆಯನ್ನು ಅಳವಡಿಸುವ ಕುರಿತು ಚಿಂತನೆ ನಡೆದಿದೆ ಎಂದು ತಿಳಿಸಿದರು.

## ಶ್ರೀ ದತ್ತಸಿರಿ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಸಹಕಾರ ಸಂಘಗಳು ಸದಸ್ಯರ ಆಸ್ತಿಯಾಗಿ ಬೆಳೆಯಬೇಕು – ಶಾಸಕರಾದ ಅಲ್ಲಮ ಪ್ರಭು ಪಾಟೀಲ್.**

ಸಹಕಾರ ಸಂಘಗಳು ಸದಸ್ಯರ ಆಸ್ತಿಯಾಗಿ ಬೆಳೆಯಬೇಕು ಸಾಲ ಪಡೆದ ಪ್ರತಿಯೊಬ್ಬ ಸದಸ್ಯನು ಸಕಾಲದಲ್ಲಿ ಸಾಲ ಮತ್ತು ಬಡ್ಡಿ ಸಮೇತ ಮರುಪಾವತಿ ಮಾಡಿ ಸಹಕಾರ ಸಂಘಗಳ ಬೆಳವಣಿಗೆ ಎಲ್ಲಾ ಸದಸ್ಯರು ಕೈಜೊಡಿಸಬೇಕು ಎಂದರು. ಹೀಗೆ ಈ ಹಾದಿಯಲ್ಲಿ ನಡೆದಾಗ ಮಾತ್ರ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವೆಂದು ಕಲಬುರಗಿ ದಕ್ಷಿಣ ಶಾಸಕ ಅಲಮಪ್ರಭು ಪಾಟೀಲ್ ತಿಳಿಸಿದರು ಕಲಬುರಗಿ ನಗರದ ಹಳೆ ಜೇವರ್ಗಿ ರಸ್ತೆಯಲ್ಲಿನ ದರ್ಶನ ಪ್ಲಾಜಾ ಹತ್ತಿರದ ಶ್ರೀ ದತ್ತಸಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕಲಬುರಗಿ ಇದರ ಉದ್ಘಾಟನಾ ಸಮಾರಂಬದ ಕಾರ್ಯಕ್ರಮವನ್ನು ಉದ್ಘಾಟೀಸಿ ಮಾತನಾಡಿದರು.

ಸಹಕಾರಿಯ ಕಛೇರಿ ಉದ್ಘಾಟಿಸಿ ಮಾತನಾಡಿದ ಆಳಂದ ಶಾಸಕರಾದ ಬಿ.ಆರ್ ಪಾಟೀಲ್ ಅವರು ಸಹಕಾರಿ ಸಂಘದಲ್ಲಿ ಪ್ರಾಮಾಣಿಕತೆ ಮುಖ್ಯವಾಗಿದೆ ಆಡಳಿತ ಮಂಡಳಿ ನಿರ್ದೇಶಕರು ಸದಸ್ಯರು ಸಿಬ್ಬಂದಿಗಳು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಸೌಹಾರ್ದ ಸಹಕಾರಿ ಬೆಳವಣಿಗೆ ಹೊಂದಲು ಸಾಧ್ಯವೆಂದು ತಿಳಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ಶ್ರೀ ಷ.ಬ್ರ ಡಾ. ರಾಜಶೇಖರ ಶಿವಾಚಾರ್ಯರು, ಶ್ರೀ ಷ.ಬ್ರ ವೀರಮಹಾಂತ ಶಿವಾಚಾರ್ಯರು, ಶ್ರೀ ಷ.ಬ್ರಅಭಿನವ ಗುರುಬಸವ ಶಿವಾಚಾರ್ಯರು ,ಶ್ರೀ ಮ.ನಿ.ಪ್ರ ಶಿವಬಸವ ಮಹಾಸ್ವಾಮಿಗಳು, ಪೂಜ್ಯ ಶ್ರೀ ಗುರುರಾಜೇಂದ್ರ ಶಿವಯೋಗಿಗಳು, ಶ್ರೀ ಚೇತನ ಹೂಗಾರ, ವಹಿಸಿ ಕೊಂಡಿದ್ದರು. ದಿನದರ್ಶಿಕೆಯನ್ನು ಶಾಸಕರಾದ ಡಾ. ಅಜಯಸಿಂಗ್ ಬಿಡುಗಡೆ ಮಾಡಿದರು. ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಶೈಲಜಾ ತಪಲಿ, ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರಾಕಲೇ, ಜಿಲ್ಲಾ ಸಂಯೋಜಕ ವೀರಶಟ್ಟಿ, ಹೂಗಾರ ಮಹಾಸಭಾದ ರಾಜ್ಯಾಧ್ಯಕ್ಷ ಬಸವರಾಜ ಹೂಗಾರ, ಆಡಳಿತ ಮಂಡಳಿಯ ನಿರ್ದೇಶಕರು ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ವಿದ್ಯಾ ದಯಾನಂದ ಹಾಸು ಅಧ್ಯಕ್ಷರು ಗ್ರಾಮ ಪಂಚಾಯತ್ ಹಿರೊಳಿ ವಹಿಸಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗುರುನಾಥ ಹೂಗಾರ ಖಣದಾಳ ಹಾಗೂ ಪತ್ರಕರ್ತ ಅರುಣಕುಮಾರ ಹೂಗಾರ ಇವರಿಗೆ ಗೌರವ ಸನ್ಮಾನ ಮಾಡಲಾಯಿತ್ತು.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿಯ 11 ಹೊಸ ಶಾಖೆಗಳ ಉದ್ಘಾಟನೆ



**ಬೆಲ್ಲದ ಬಾಗೇವಾಡಿ :** ದಿನಾಂಕ 08.06.2023 ರಿಂದ 14.06.2023 ರವರೆಗೆ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ನಿ., ಇದರ 17ನೇ ಮೂಡಲಗಿ ಶಾಖೆಯ ಉದ್ಘಾಟನೆಯನ್ನು ಶ್ರೀ ಶ್ರೀಪಾದಬೋಧ ಸ್ವಾಮಿಗಳು, ಸಿದ್ದಸಂಸ್ಥಾನಮಠ, ಮೂಡಲಗಿ ಇವರು ನೇರವೇರಿಸಿದರು. 18ನೇ ಚಿಕ್ಕೋಡಿ ಶಾಖೆಯ ಉದ್ಘಾಟನೆಯನ್ನು ಶ್ರೀ ಸಂಪಾದನಾ ಚಿರಮೂರ್ತಿ ಮಠ, ಚಿಕ್ಕೋಡಿ ಇವರು ನೇರವೇರಿಸಿದರು. 19ನೇ ನಿಪ್ಪಾಣಿ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ನಿ.ಪ್ರ ಶಿವಾನಂದ ಮಹಾಸ್ವಾಮಿಗಳು ಗಿರಿಮಠ ಆಡಿ ಇವರು ನೇರವೇರಿಸಿದರು. 20ನೇ ಯರಗಟ್ಟಿ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ನಿ.ಪ್ರ ಕುಮಾರೇಶ್ವರ ವಿರಕ್ತ ಮಠ, ಕಟಕೋಳ ಇವರು ನೇರವೇರಿಸಿದರು. 21ನೇ ಕಿತ್ತೂರ ಶಾಖೆಯ ಉದ್ಘಾಟನೆಯನ್ನು ಶ್ರೀ ಮಡಿವಾಳ ರಾಜಯೋಗಿಂದ್ರ ಸ್ವಾಮಿಗಳು, ರಾಜಗುರು ಸಂಸ್ಥಾನ ಕಲ್ಮಠ, ಚ. ಕಿತ್ತೂರು, ಇವರು ನೇರವೇರಿಸಿದರು. 22ನೇ ಸವದತ್ತಿ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ಘ.ಚ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಮೂಲಿಮಠ, ಸವದತ್ತಿ ಇವರು ನೇರವೇರಿಸಿದರು. 23ನೇ ಮೂರಗೋಡ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ನಿ.ಪ್ರ. ಸ್ವ. ನೀಲಕಂಠ ಮಹಾಸ್ವಾಮಿಗಳು, ಶ್ರೀ ಮಹಾಂತ ದುರದುಂಡೇಶ್ವರ ಮಠ, ಮುರಗೋಡ ಇವರು ನೇರವೇರಿಸಿದರು. 24ನೇ ಯಾದವಾಡ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ಘ.ಚ. ಶ್ರೀ ಶಿವಲಿಂಗ ಮುರುಘರಾಜೇಂದ್ರ ಶಿವಚಾರ್ಯರು ಶಿವಯೋಗೇಶ್ವರ ಮಠ, ಬಾಗೋಜಿಕೊಪ್ಪ ಇವರು ನೇರವೇರಿಸಿದರು. 25ನೇ ರಾಮದುರ್ಗ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ಗ.ಘ ಚನ್ನಮಲ್ಲಶಿವಚಾರ್ಯ ಮಹಾಸ್ವಾಮಿಗಳು ಗಚ್ಚಿನ ಹಿರೇಮಠ, ಕಿಲ್ಲಾ ತೋರಗಲ್ಲ ಇವರು ನೇರವೇರಿಸಿದರು. 26ನೇ ಅಂಕಲಗಿ ಶಾಖೆಯ ಉದ್ಘಾಟನೆಯನ್ನು ಶ್ರೀ ಮ.ನಿ.ಪ್ರ ಅಮರಸಿದ್ದೇಶ್ವರ ಮಹಾಸ್ವಾಮಿಗಳು, ಶ್ರೀ ಅಡವಿಸಿದ್ದೇಶ್ವರ ಮಠ, ಕುಂದರಗಿ ಇವರು ನೇರವೇರಿಸಿದರು. 27ನೇ ಇಂಚಲ ಶಾಖೆಯ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರಿ ಡಾ. ಶಿವಾನಂದ ಭಾರತಿ ಮಹಾಸ್ವಾಮಿಗಳು ಸಾಧು ಸಂಸ್ಥಾನ ಮಠ, ಸುಕ್ಷೇತ್ರ, ಇಂಚಲ ಇವರು ನೇರವೇರಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಸಂಘ ಸಂಸ್ಥೆಯ ಪದಾಧಿಕಾ–ರಿಗಳು ಮತ್ತು ಗ್ರಾಮದ ಗುರು ಹಿರಿಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪನಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ದಿನಾಂಕ 11.06.2023 ರಂದು ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ದಾವಣಗೆರೆ ಇದರ 2022–23ನೇ ಸಾಲಿನ ಸರ್ವಸದಸ್ಯರ ಮಹಾ ಸಭೆಯನ್ನು ಜಿ.ಎಂ. ಹಾಲಮ್ಮ ಆಡಿಟೋರಿಯಮ್, ಐಟಿ ಕಾಲೇಜು ಆವರಣ, ದಾವಣಗೆರೆ ಇಲ್ಲಿ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಎಂ. ಪ್ರಸನ್ನಕುಮಾರ್ ಇವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಜಿ.ಎಂ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಭುದೇವ್ ಎಂ.ಆರ್ ಇವರು ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜ–ಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು.

ದಿನಾಂಕ 01.06.2023 ರಂದು ಜಿಎಂ ಸೌಹಾರ್ದ ಸಹಕಾರಿ ಸಂಘ ನಿ, ದಾವಣಗೆರೆ ಸಹಕಾರಿಯ ನೂತನ ಶಾಖೆಯನ್ನು ಜಿಎಂಐಟಿ ಕಾಲೇಜಿನ ಆವರಣದಲ್ಲಿ ಆರಂಭಿಸಲಾಯಿತು. ಶಾಖೆಯ ಉದ್ಘಾಟನೆಯನ್ನು ಮಾಜಿ ಕೇಂದ್ರ ಸಚಿವರು ಹಾಗೂ ಪ್ರಸ್ತುತ ಲೋಕಸಭಾ ಸದಸ್ಯರಾಗಿರುವ ಸನ್ಮಾನ್ಯ ಡಾ. ಜಿ.ಎಂ ಸಿದ್ದೇಶ್ವರ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಜಿ.ಎಂ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಎಂ. ಪ್ರಸನ್ನಕುಮಾರ್ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಜಿಎಂ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರು ಆಗಿರುವ ಶ್ರೀ ಎಂ.ಆರ್. ಪ್ರಭುದೇವ್ ರವರು ಉಪಸ್ಥಿತರಿದ್ದರು. ಈಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಭಾಗವಹಿಸಿದ್ದರು.

## ಸಮನ್ವಯ ಸಮಿತಿ ಸಭೆ



**ಕೋಲಾರ** : ದಿನಾಂಕ 31.05.2023ರಂದು ಕೋಲಾರ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನ ಇಲಾಖೆ ವತಿಯಿಂದ ಕೋಲಾರ ಜಿಲ್ಲೆಯ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನ ಉಪನಿರ್ದೇಶಕರಾದ ಶ್ರೀಮತಿ ಆರ್. ಮಂಗಳ ಗೌರಿ ರವರು ವಹಿಸಿದ್ದರು. ಸಭೆಯಲ್ಲಿ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ನಾಗರಾಜು ರವರು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಲೆಕ್ಕಪ–ರಿಶೋಧನ ಇಲಾಖೆಯ ಎಲ್ಲಾ ತಾಲ್ಲೂಕಿನ ಲೆಕ್ಕಪರಿಶೋಧನ ಸಹಾಯಕ ನಿರ್ದೇಶಕರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ವರದಿಗಳನ್ನು ಸಲ್ಲಿಸಿದರು.

## ಭೇಟಿ



ದಿನಾಂಕ: 17–06–2023 ರಂದು ವಾಲ್ಮೀಕಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ತುಮಕೂರು ಜಿಲ್ಲಾ ಸಂಯೋಜ–ಕರಾದ ಶ್ರೀ ಉಮೇಶ್ ಎ.ಎಸ್ ರವರು ಸಾಮಾನ್ಯ ಭೇಟಿ ನೀಡಿ ಸಹಕಾ–ರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಪ್ರಗತಿ ಪರಿಶೀಲನೆ ನಡೆಸಿದರು. ಹಾಗೂ ಸಹಕಾರಿಯಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ಸಲಹೆ ಹಾಗೂ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಜಿ. ರಾಮಾಂಜನೇಯ ರವರು, ನಿರ್ದೇಶಕರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.




ದಿನಾಂಕ: 03–07–2023 ರಂದು ಶ್ರೀ ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮಾಲೂರು ಸಹಕಾರಿಯ ಪರಿವೀಕ್ಷಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಜರುಗಿಸಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಹಾಗೂ ಸಹಕಾರಿಯಲ್ಲಿ ಜರುಗಿಸಬಹುದಾದ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ**



ಶ್ರೀಮತಿ ಮಹಾದೇವಿ ಕೆ. ಬಿದರಕುಂದಿ
ಅಧ್ಯಕ್ಷರು



ಶ್ರೀಮತಿ ಮೀನಾಕ್ಷಿ ಎನ್ ಹಿರೇಮಠ
ಉಪಾಧ್ಯಕ್ಷರು

**ಉತ್ತರ ಕನ್ನಡ** : ದಿನಾಂಕ 01.06.2023 ರಂದು ಶ್ರೀ ಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಿರೇಸರ ಸಹಕಾರಿಯ 20ನೇ ಶ್ರೀಮಾತಾ ದ್ವಿದಶಮಾನೋತ್ಸವ ಸಮಾರಂಭದಲ್ಲಿ ಶ್ರೀ ಶಿವರಾಮ ಹೆಬ್ಬಾರ್, ಮಾನ್ಯ ಶಾಸಕರು, ಯಲ್ಲಾಪುರ ಮುಂಡಗೋಡ ಕ್ಷೇತ್ರ ಮಾಜಿ ಸಚಿವರು ಹಾಗೂ ಅಧ್ಯಕ್ಷರು ದಿ. ಕೆ.ಡಿ.ಸಿ.ಸಿ ಬ್ಯಾಂಕ್ ಶಿರಸಿ, ಶ್ರೀ ವಿ.ಎಸ್ ಪಾಟೀಲ, ಮಾಜಿ ಶಾಸಕರು, ಮುಂಡಗೋಡ ಪೋಷಕ ಸದಸ್ಯರು, ಶ್ರೀ ಮೋಹನದಾಸ ನಾಯ್ಕ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. 20ನೇ ಶ್ರೀಮಾತಾ ದ್ವಿದಶಮಾನೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಹಾಯಧನ ವಿತರಣೆ ಮಾಡಲಾಯಿತು.

# ಸ್ವಯಂ ನಿಯಂತ್ರಣಾ ಸಂಸ್ಥೆ (Self Regulatory Organization)

– ಶ್ರೀ ಮನೋಹರ ಮಸ್ಕಿ, ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

**ಸ್ವಯಂ ನಿಯಂತ್ರಣ ಸಂಸ್ಥೆ ಎಂದರೇನು ?**

ಸ್ವಯಂ ನಿಯಂತ್ರಣವು ಕಾನೂನು ಮೀರಿ ಅಥವಾ ಕಾನೂನಿನ ಅಸ್ತಿತ್ವ ಇಲ್ಲದಿದ್ದಾಗಲೂ ನೈತಿಕ ಮತ್ತು ಸುರಕ್ಷತಾ ಮಾನದಂಡಗಳಿಗೆ ತನ್ನದೇ ಆದ ಅನುಸರಣೆಯನ್ನು ಹಾಗೂ ಮೇಲ್ವಿಚಾರಣೆ ಮಾಡಲು ಸಂಸ್ಥೆಯೊಂದನ್ನು ಜಾರಿಗೆ ತರುವ ಪ್ರಕ್ರಿಯೆಯಾಗಿದೆ,

SRO ಎಂದರೆ "ಸ್ವಯಂ ನಿಯಂತ್ರಣ ಸಂಸ್ಥೆ". SRO ಸಂಸ್ಥೆಯನ್ನು ನಿಯಂತ್ರಿಸುವ ತತ್ವಗಳು ಮತ್ತು ನಿಯಮಗಳನ್ನು ಅದರ ಸದಸ್ಯರಿಂದ ರೂಪಿಸಲಾಗಿರುತ್ತದೆ ಮತ್ತು ಅನುಮೋದಿಸಲಾಗಿರುತ್ತದೆ. ಸದಸ್ಯರು ಅವುಗಳನ್ನು ಅನುಸರಿಸಲು ಒಪ್ಪಿಕೊಳ್ಳುತ್ತಾರೆ ಅಥವಾ ಸಂಸ್ಥೆಯಿಂದ ದಂಡ ಅಥವಾ ಹೊರಹಾಕುವಿಕೆಯಂತಹ ದಂಡವನ್ನು ಎದುರಿಸುತ್ತಾರೆ. ಇನ್ನೂ, SRO ಗಳು ಭಾಗಶಃ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರಲೂಬಹುದು .

**ಸಂಕ್ಷಿಪ್ತವಾಗಿ SRO ಎಂದರೇನು ?**

a. ಸ್ವಯಂ-ನಿಯಂತ್ರಕ ಸಂಸ್ಥೆ (SRO) ಎಂಬುದು ಸ್ವಯಂ-ಆಡಳಿತ ಸಂಸ್ಥೆಯಾಗಿದ್ದು, ಅದು ಒಂದು ಉದ್ಯಮ ಅಥವಾ ವಲಯವನ್ನು ನಿಯಂತ್ರಿಸುವುದಕ್ಕಾಗಿ ಆಯಾ ವಲಯದವರಿಂದಲೇ ರಚಿಸಲ್ಪಟ್ಟ ಸಂಸ್ಥೆ

b. ಸದಸ್ಯರಿಂದ ತನ್ನ ಸದಸ್ಯರಿಗೆ ನಿಯಮಗಳು ಮತ್ತು ನಿಬಂಧನೆಗಳನ್ನು ರಚಿಸುವ ಮತ್ತು ಜಾರಿಗೊಳಿಸುವ ಅಧಿಕಾರವನ್ನು ಹೊಂದಿದೆ

c. ಅದರ ಸದಸ್ಯರ ನಡುವಿನ ವಿವಾದಗಳನ್ನು ಪರಿಹರಿಸಲು ಇದು ವಿವಾದ ಪರಿಹಾರ ಕಾರ್ಯ ವಿಧಾನವನ್ನು ಹೊಂದಿದೆ.

**ಭಾರತದಲ್ಲಿ SRO ಗಳ ಇತಿಹಾಸ**

- ಭಾರತದಲ್ಲಿ ಮೊದಲ SRO ಅಂದರೆ ಅದು ಅಸೋಸಿಯೇಷನ್ ಆಫ್ ಮ್ಯೂ ಚುಯಲ್ ಫಂಡ್ಸ್ ಇನ್ ಇಂಡಿಯಾ (AMFI), ಇದನ್ನು 1995 ರಲ್ಲಿ ಸ್ಥಾಪಿಸಲಾಯಿತು.
- AMFI, ಭಾರತದಲ್ಲಿ SEBI ನೋಂದಾಯಿತ ಮ್ಯೂಚುಯಲ್ ಫಂಡ್‌ಗಳ ಎಲ್ಲಾ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳ ಅಸೋಸಿಯೇಷನ್ ಆಗಿದೆ ಆಗಸ್ಟ್ 22, 1995 ರಂದು ಲಾಭೋದ್ದೇಶವಿಲ್ಲದ ಸಂಸ್ಥೆಯಾಗಿ ಆರಂಭಾವಾಗಿ ಇಂದಿಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ
- ಅಲ್ಲಿಂದೀಚೆಗೆ, ಸೆಕ್ಯುರಿಟೀಸ್ ಮಾರುಕಟ್ಟೆ, ವಿಮಾ ಉದ್ಯಮ, ಬ್ಯಾಂಕಿಂಗ್ ಉದ್ಯಮ, ಮಾಧ್ಯಮ ಮತ್ತು ಕಿರುಸಾಲ ಉದ್ಯಮ ಸೇರಿದಂತೆ ವ್ಯಾಪಕ ವಲಯಗಳಲ್ಲಿ ಒಳಗೊಂಡ ಹಲವಾರು SRO ಗಳನ್ನು ಸ್ಥಾಪಿಸಲಾಗಿದೆ.

**ಕೆಲವು ಉದಾಹರಣೆಗಳು**

- ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟ
- ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (BCCI)
- ಕರ್ನಾಟಕ ಸ್ಟಾಕ್ ಎಕ್ಸ್ಚೇಂಜ್ (KSX)
- ಕರ್ನಾಟಕ ಕಿರು ಹಣಕಾಸು ನಿಯಂತ್ರಣ ಮಂಡಳಿ (KMRC)
- ಡಿಜಿಟಲ್ ಮೀಡಿಯಾ ಕಂಟೆಂಟ್ ರೆಗ್ಯುಲೇಟರಿ ಕೌನ್ಸಿಲ್ (DMCRC)
- ಕಾರ್ಯನಿರತ ಪತ್ರಕರ್ತರ ಮಾಧ್ಯಮ ಮಂಡಳಿ

**13. SRO ನ ಪ್ರಮುಖ ಪಾತ್ರಗಳು ಯಾವುವು**

ಪರಿಣಾಮಕಾರಿ ಸ್ವಯಂ-ನಿಯಂತ್ರಕ ಸಂಸ್ಥೆಯು ಅದರ ಭೌಗೋಳಿಕ ವ್ಯಾಪ್ತಿ ಅಥವಾ ಉದ್ಯಮ/ವಲಯವನ್ನು ಮೀರಿ ಈ ಕೆಳಗಿನ ಗುಣಲಕ್ಷಣಗಳನ್ನು ಹೊಂದಿರುತ್ತದೆ

- **ಅಧಿಕಾರ:** ಔಪಚಾರಿಕ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟರೂ, ತನ್ನದೇ ಆದ ನೀತಿಗಳು ಮತ್ತು ನಿಯಮಗಳನ್ನು ರಚಿಸಲು ಮತ್ತು ಜಾರಿಗೊಳಿಸಲು ನಿಯೋಜಿತ ನಿಯಂತ್ರಣ ಪ್ರಾಧಿಕಾರ ಮತ್ತು ವ್ಯವಸ್ಥೆಯನ್ನು ಹೊಂದಿರುತ್ತದೆ .
- **ಆಡಳಿತ:** ಬಲವಾದ ಆಡಳಿತ ಕಾರ್ಯ ವಿಧಾನಗಳು, ಪಾರದರ್ಶಕತೆ ಮತ್ತು ನಿಯಮ-ರಚನೆ ಮತ್ತು ಅದಕ್ಕಾಗಿ ಸಾರ್ವಜನಿಕರ / ಸದಸ್ಯರ ಅಭಿಪ್ರಾಯ ಪಡೆಯುವ ಗರಿಷ್ಠ ವ್ಯವಸ್ಥೆ
- **ವೈಯಕ್ತಿಕ ಆಸಕ್ತಿಗಳ ನಿರ್ವಹಣೆ:** ಆಡಳಿತದಲ್ಲಿರುವ ವ್ಯಕ್ತಿಗಳ ಅಂತರ್ಗತ ಆಸಕ್ತಿಯ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಸಂಘರ್ಷ ತಡೆಯಲು ಮತ್ತು ಸ್ಥಿರ ನಿರ್ವಹಣೆಗಾಗಿ ಪಾರದರ್ಶಕ ಕಾರ್ಯ ವಿಧಾನಗಳನ್ನು ಹೊಂದಿರಬೇಕು ಮತ್ತು ಅದು ಸದಸ್ಯರಿಗೆ ಮುಕ್ತವಾಗಿ ಲಭ್ಯವಿರಬೇಕು
- **ಮೇಲ್ವಿಚಾರಣೆ:** ಸದಸ್ಯರ ಹಾಗೂ ಮಂಡಳಿ ನಿರ್ದೇಶಕರ ನಡವಳಿಕೆಗಳ ಸ್ಪಷ್ಟ ಮಾನದಂಡಗಳ ರಚನೆ ಮತ್ತು ಸ್ಥಾಪನೆ ಹಾಗೂ ಉಲ್ಲಂಘನೆಗಳ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಪರಸ್ಪರ ಸಂಬಂಧ ಮತ್ತು ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಮತ್ತು ನಿಯಂತ್ರಿಸಲು ಪಾರದರ್ಶಕ ಪ್ರಕ್ರಿಯೆಗಳು ಮತ್ತು ಕಾರ್ಯ ವಿಧಾನಗಳು ಇರಬೇಕು
- **ಕಣ್ಗಾವಲು:** ಸೂಕ್ತವಾಗಿ ಸಂಪನ್ಮೂಲ ಹೊಂದಿರುವ, ತಾಂತ್ರಿಕವಾಗಿ ಸುಧಾರಿತ ಕಣ್ಗಾವಲು ವ್ಯವಸ್ಥೆ ಇರಬೇಕು. ಕಾರ್ಯ ವಿಧಾನಗಳು ಮಾರುಕಟ್ಟೆಯ ಬೆಳವಣಿಗೆಗಳೊಂದಿಗೆ ಮುಂಚೂಣಿಯ ನಿಯಂತ್ರಕರಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿರಬೇಕಾಗುತ್ತದೆ
- **ಉತ್ತಮ ಡೇಟಾಬೇಸ್:** ಸದಸ್ಯರು. ನಿಯಂತ್ರಕರು, ಅಧ್ಯಯನಕಾರರಿಗೆ ಲಭ್ಯವಾಗುವಂತೆ ಸಂಪೂರ್ಣ ಮಾಹಿತಿಯ ಮತ್ತು ಕಾಲಕಾಲಕ್ಕೆ ಉನ್ನತೀಕರಿಸಿದ ಡೇಟಾಬೇಸ್ ಹೊಂದಿರಬೇಕು . ನಿರ್ವಹಣೆ ಸಂಬಂಧಿತ. ಗ್ರಾಹಕ ದೂರುಗಳು, ಶಿಸ್ತಿನ ಇತಿಹಾಸ ಮತ್ತು ಅಂತಹ ವ್ಯಕ್ತಿಗಳು/ಸಂಸ್ಥೆಗಳ ವಿರುದ್ಧತೆಗೆದುಕೊಂಡ ಕಾನೂನು ಮತ್ತು ನಿಯಂತ್ರಕ ಕ್ರಮಗಳ ವಿವರಗಳನ್ನು ಒಳಗೊಂಡಿರಬೇಕು

• **ಮಾರುಕಟ್ಟೆ ಸಂಚಲನೆಯ ಪ್ರಕ್ರಿಯೆಗಳು:** ವಿಪತ್ತು ಚೇತರಿಕೆ ಮತ್ತು ಸಾಮರ್ಥ್ಯ, ವ್ಯಾಪಾರದ ನಿರಂತರತೆ, ಮತ್ತು ನ್ಯಾಯೋಚಿತ ಕ್ರಮವನ್ನು ಉತ್ತೇಜಿಸಲು ಹಾಗೂ ಕಾರ್ಯಾ ಚರಣೆಗಳನ್ನು ನಿರ್ವ ಹಿಸುವ ಸಾಮರ್ಥ್ಯ ದ ಗುರಿಯೊಂದಿಗೆ ಮಾರುಕಟ್ಟೆಯಲ್ಲಿ ಹಸ್ತಕ್ಷೇಪ / ಸಂಚಲನನೆಗಳನ್ನು ಪತ್ತೆಹಚ್ಚಲು ಮತ್ತು ಸರಿಪಡಿಸುವ ಅಥವಾ ಉತ್ತೇಜಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಕಾರ್ಯ ವಿಧಾನಗಳು ಮತ್ತು ವ್ಯವಸ್ಥೆಗಳನ್ನು ಹೊ ಂದಿರಬೇಕು

• **ಆವಿಷ್ಕಾರದಲ್ಲಿ:** ಸ್ವಯಂ-ನಿಯಂತ್ರಕ ಸಂಸ್ಥೆಯೊಳಗೆ ಇರುವವರ ವಿಶೇಷ ಪರಿಣತಿಯನ್ನು ಗುರುತಿಸಿ ಬೆಳೆಸುವ ಮತ್ತು ನೀತಿ ಮತ್ತು ನಿಯಮಾವಳಿಗಳ ಅಭಿವೃದ್ಧಿ ಹಾಗೂ ನ್ಯಾಯೋಚಿತವಾದ, ಸಮರ್ಥ ವಾದ ಹೊಸ ಉತ್ಪನ್ನ ಅಥವಾ ಹೊಸ ಅಭ್ಯಾಸಗಳನ್ನು ಪ್ರೋತ್ಸಾ ಹಿಸುವ ಮತ್ತು ಬೆಂಬಲಿಸುವ ಸಂದರ್ಭದಲ್ಲಿ ಮುಂದೆ ನಿಂತು ನಿಯಂತ್ರಿಸುವ ಸಾಮರ್ಥ್ಯ ಹೊಂದಿರಬೇ ಕು (Leasd from the front)

• **ವಿವಾದ ಪರಿಹಾರ:** ಸದಸ್ಯರ ವಿವಾದ ಪರಿಹಾರ ಪ್ರಕ್ರಿಯೆ, ನ್ಯಾಯಯುತ ಮತ್ತು ಪಾರದರ್ಶಕವಾಗೀರ್‍ಬೇಕು . ದಕ್ಷತೆಯನ್ನು ಸಮತೋಲನಗೊಳಿಸುವುದರ ಜೊತೆಗೆ ಆರೋಪಿಯ ನಾಗರಿಕ ಹಕ್ಕುಗಳನ್ನು ರಕ್ಷಿಸಬೇಕು .

### ಭಾರತದಲ್ಲಿ SRO ಗಳು ಎದುರಿಸುತ್ತಿರುವ ಸವಾಲುಗಳು

• ಸಂಪನ್ಮೂಲಗಳ ಕೊರತೆ. ಮತ್ತು ಸರ್ಕಾರಿ ಸಂಸ್ಥೆಗಳಿಂದ ಸಹಕಾರದ ಕೊರತೆ.

• ಭಾಗವಹಿಸುವವರು /ಸದಸ್ಯರಲ್ಲಿ ಅರಿವಿನ ಕೊರತೆ

• SRO ದ ಪ್ರಮುಖ ವ್ಯಕ್ತಿಗಳಲ್ಲಿ ಇಚ್ಛಾ ಶಕ್ತಿಯ ಕೊರತೆ, ಅದರ ಉದ್ದೇಶಗಳು ಮತ್ತು ಕಾರ್ಯ ನೀತಿಗಳನ್ನು ಜಾರಿಗೆ ತರುವಲ್ಲಿ ವಿಫಲತೆಗೆ ಕಾರಣವಾಗುತ್ತಿದೆ

• ರಾಜಕೀಯ ಸೇರಿದಂತೆ ಬಾಹ್ಯ ಶಕ್ತಿಗಳ ಹಸ್ತಕ್ಷೇಪ ಮತ್ತು ಸದಸ್ಯರ ಭಾಗವಹಿಸುವ ಕೊರತೆ

### ನೀತಿಗಳು ಮತ್ತು ಚೌಕಟ್ಟುಗಳು

ನೀತಿಗಳು (policies) ಮತ್ತು ಚೌಕಟ್ಟುಗಳು (fremwork) ಸಂಸ್ಥೆಗಳಿಗೆ ಎರಡೂ ಪ್ರಮುಖ ಸಾಧನಗಳಾಗಿವೆ, ಆದರೆ ಅವು ವಿಭಿನ್ನ ಉದ್ದೇಶಗಳನ್ನು ಪೂರೈಸುತ್ತವೆ.

### ನೀತಿ (policies)

ನೀತಿಗಳು ಸಂಸ್ಥೆಯ ಘೋಷಿತ ಹೇಳಿಕೆಗಳಾಗಿವೆ , ಅದು SRO ದ ಆಲೋಚನೆ ಮತ್ತು ಶಕ್ತಿಯನ್ನು ನಿರ್ದಿಷ್ಟ ದಿಕ್ಕಿನಲ್ಲಿ ನಿರ್ದೇಶಿಸುತ್ತದೆ. ನೀತಿಗಳು ಸಾಮಾನ್ಯವಾಗಿ ಉನ್ನತ ಮಟ್ಟದ್ದಾಗಿದ್ದು ಸಂಸ್ಥೆಯು ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದರ ಕುರಿತು ವಿಶಾಲವಾದ ದೃಷ್ಟಿಕೋನವನ್ನು ಒದಗಿಸುತ್ತದೆ. ಉದಾಹರಣೆಗೆ, ಸಂಸ್ಥೆಯ "ಗೌಪ್ಯತೆ ನೀತಿ: ಇದು ಬಳಕೆದಾರರ/ ಸಂಭಂದಿತ ಸದಸ್ಯರ ಒಪ್ಪಿ ಗೆಯಿಲ್ಲದೆ ಸಂಸ್ಥೆಯು ಮೂರನೇ ವ್ಯಕ್ತಿಗಳೊಂದಿಗೆ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವುದಿಲ್ಲ ಎಂದು ಹೇಳಬಹುದು. ಸಂಸ್ಥೆಯ ಕಾರ್ಯಾಚರಣೆಯಲ್ಲಿನ ಅಪಾಯಗಳು ಯಾವವು ಮತ್ತು ಅಂತಹ ಸಂದರ್ಭದಲ್ಲಿ ಅವುಗಳನ್ನು ಹೇಗೆ ನಿರ್ವ ಹಿಸಬೇಕು ಎನ್ನವುದನ್ನು ಒಳಗೊಂಡಿರಬೇ ಕು

### ಚೌಕಟ್ಟು( Fremwork)

ಚೌಕಟ್ಟುಗಳು ನೀತಿಗಳಿಗಿಂತ ಹೆಚ್ಚು ನಿರ್ದಿಷ್ಟವಾಗಿರುತ್ತವೆ ಮತ್ತು ಸಂಸ್ಥೆಯು ತನ್ನ ಗುರಿಗಳನ್ನು ಹೇಗೆ ಸಾಧಿಸಬೇಕು ಎಂಬುದಕ್ಕೆ ವಿವರವಾದ ಬ್ಲೂಪ್ರಿಂಟ್ ಹಾಗೂ ಮಾರ್ಗಸೂಚಿಯನ್ನು ಒದಗಿಸುತ್ತದೆ. ಅವು ಸಾಮಾನ್ಯವಾಗಿ ಹಂತ-ಹಂತದ ಸೂಚನೆಗಳು, ಉದಾಹರಣೆಗೆ, ಪ್ರಾಜೆಕ್ಟ್ ಮ್ಯಾನೇಜ್‍ಮೆಂಟ್ ಫ್ರೇಮ್ ವರ್ಕ್ ಪೂರ್ಣಗೊಳಿಸ ಬೇಕಾದ ಕಾರ್ಯಗಳ ಪಟ್ಟಿಯನ್ನು ಒಳಗೊಂಡಿರುತ್ತದೆ, ಹಾಗೆಯೇ ಆ ಕಾರ್ಯಗಳ ನಡುವಿನ ಅವಲಂಬನೆಗಳನ್ನು ಒಳಗೊ ಂಡಿರುತ್ತದೆ.

ಸಾಮಾನ್ಯವಾಗಿ, ನೀತಿಗಳು ಚೌಕಟ್ಟುಗಳಿಗಿಂತ ಹೆಚ್ಚು ವಾಸ್ತವತೆಗೆ ಹೊಂದಿಕೊಳ್ಳುತ್ತವೆ ಮತ್ತು ಬದಲಾವಣೆಗಳಿಗೆ ಕಾಲಕಾಲಕ್ಕೆ ಒಳಪಡುತ್ತವೆ. ಚೌಕಟ್ಟುಗಳು ಹೆಚ್ಚು ಕಠಿಣವಾಗಿರುವಾಗ ಅವುಗಳನ್ನು ಬದಲಾಗುತ್ತಿರುವ ಸಂದರ್ಭ ಗಳಿಗೆ ಅಳವಡಿಸಿಕೊಳ್ಳಬೇ ಕಾದರೆ, ನೀತಿಗಳನ್ನು ಮಾರ್ಗ ದರ್ಶನ ಮಾಡಲು ಹೆಚ್ಚು ಸೂಕ್ತವಾಗಿರ ಬೇಕಾಗುತ್ತದೆ , ಆದರೆ ನಿರ್ದಿಷ್ಟ ಯೋಜನೆಗಳನ್ನು ಮತ್ತು ನೀತಿಗಳನ್ನು ಕಾರ್ಯಗತ ಗೊಳಿಸಲು ಚೌಕಟ್ಟುಗಳು ಹೆಚ್ಚು ಸೂಕ್ತವಾಗಿವೆ.

**ನೀತಿಗಳು ಮತ್ತು ಚೌಕಟ್ಟುಗಳ ನಡುವಿನ ಪ್ರಮುಖ ವ್ಯತ್ಯಾ ಸಗಳನ್ನು ಸಾರಾಂಶ ಮಾಡುವ ಟೇ ಬಲ್ ಇಲ್ಲಿದೆ:**

| ವೈಶಿಷ್ಟ್ಯ | ನೀತಿ | ಚೌಕಟ್ಟು |
|---|---|---|
| ಉದ್ದೇಶ (Purpose) | ಚಿಂತನೆ ಮತ್ತು ಸಂಸ್ಥೆಯ ಶಕ್ತಿಯನ್ನು ಮಾರ್ಗ ದರ್ಶನ ಮಾಡಲು | ವಿವರವಾದ ನೀಲನಕ್ಷೆ ಯನ್ನು ಒದಗಿಸಲು |
| ವಿವರವಾದ ನೀ ಲನಕ್ಷೆ ಯನ್ನು ಒದಗಿಸಲು ವಿವರಗಳ ಮಟ್ಟ (Level of de-tails) | ಉನ್ನತ ಮಟ್ಟದ್ದಾಗಿರುತ್ತದೆ | ಕಾರ್ಯನಿರ್ವ ಹಣೆಗೆ ಅಗತ್ಯವಾದ ಮಟ್ಟವನ್ನು ಹೊ ಂದಿರುತ್ತದೆ |
| ಹೊ ಂದಿಕೊ ಳ್ಳುವಿಕೆ ಅಥವಾ ಬದಲಾವಣೆ (Flexibility) | ಬದಲಾವಣೆಗಳಿಗೆ ಹೊಂದಿಕೊಳ್ಳುತ್ತದೆ | ಬದಲಾವಣೆಗಳಿಗೆ ತಕ್ಷಣ ಹೊಂದಿಕೊ ಳ್ಳುವುದಿಲ್ಲ |
| ಸೂಕ್ತತೆ (Sutab-ality) | ನಿರ್ಧಾರ ತೆಗೆದುಕೊಳ್ಳುವ ಮಾರ್ಗ ದರ್ಶನ | ಯೋಜನೆಗಳ ಯೋಜನೆ ಮತ್ತು ಅನುಷ್ಠಾನ |

**ಸ್ವಯಂ-ನಿಯಂತ್ರಕ ಸಂಸ್ಥೆಗೆ (SRO) ಕನಿಷ್ಠಕೆಳಗಿನ ನೀತಿಗಳ ಅಗತ್ಯವಿದೆ**

1. ವಿಸಿಲ್ ಬ್ಲವರ್ ನೀತಿ
2. ವ್ಯಾಪಾರ ನೀತಿ
3. ನೇಮಕಾತಿ ನೀತಿ

4. ಅಪಾಯ ನಿರ್ವಹಣೆ ನೀತಿ
5. ಮಾನವ ಸಂಪನ್ಮೂಲ ನೀತಿ
6. ದೂರು ಮತ್ತು ಕುಂದು ಕೊರತೆಗಳ ನೀತಿ
7. ನಾವೀನ್ಯತೆ ನೀತಿ
8. ಸ್ವಹಿತಾಸಕ್ತಿ ನಿರ್ವಹಣೆಯ ನೀತಿ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಒಂದು ಸ್ವಯಂ ನಿಯಂತ್ರಣ ಸಂಸ್ಥೆಯೇ ?**

ಇದು ಹೌದು ಮತ್ತು ಇಲ್ಲಎನ್ನುವ ಎರಡೂ ಉತ್ತರಗಳನ್ನು ಹೊಂದಿದೆ. ಸದಸ್ಯರಿಂದ ರಚನೆಯಾಗಿದೆ ಮತ್ತು ಸದಸ್ಯರಿಗಾಗಿ ನಿಯಂರೂಪಿಸುವ ಮತ್ತು ಅವುಗಳನ್ನು ಜಾರಿಕೆ ತರುವ ಅಧಿಕಾರ ಹೊಂದಿದೆ. ಆದ್ದರಿಂದ ಹೌದು ಸೌಹಾರ್ದ ಸಂಯುಕ್ತ ಸಹಕಾರಿ ತನ್ನ ಸಂಪನ್ಮೂಲಗಳನ್ನು ಸಂಗ್ರಹಿಸಲು ಕಾನೂನಿನ ಮೊರೆ ಹೋಗಿದೆ. ಆದ್ದರಿಂದ ಅಲ್ಲ ಎನ್ನಬಹುದು

ಈ ಕಳಗೆ ಹೌದು ಅಲ್ಲ ಎನ್ನಲು ಕೆಲವು ಕಾರಣಗಳನ್ನು ಪಟ್ಟಿ ಮಾಡಿದ್ದೇನೆ

| ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಒಂದು ಸ್ವಯಂ ನಿಯಂತ್ರಣ ಸಂಸ್ಥೆಯೇ? | | |
|---|---|---|
| ವಿಷಯ | ಹೌದು | ಅಲ್ಲ/ ಆಗಿಲ್ಲ |
| ಸ್ವಯಂ ಪ್ರೇರಿತ ಸದಸ್ಯತ್ವ | | ಕಾನೂನಿನ ಮೂಲಕ ಕಡ್ಡಾಯ ಗೊಳಿಸಲಾಗಿದೆ |
| ವಿಷಯ | ಹೌದು | ಅಲ್ಲ/ ಆಗಿಲ್ಲ |
| ಆರ್ಥಿಕ ಸಂಪನ್ಮೂಲ | ಶುಲ್ಕ ನೀಡುವುದು ಕಾನೂನಿನ ಮೂಲಕ ಕಡ್ಡಾಯವಾದರೂ, ಶುಲ್ಕದ ಪ್ರಮಾಣ ಸರ್ವ ಸದಸ್ಯರ ಸಭೆಯಲ್ಲಿ ನಿರ್ಣ ಯವಾಗುವುದರಿಂದ ಹೌದು . ಆದರೆ ತಪ್ಪಿದಲ್ಲಿ ಕ್ರಿಮಿನಲ್ಲಶಿಕ್ಷೆ ಗೆ ಅವಕಾಶ ಇರುವುದು ಅಪಾಯಕಾರಿ. ಇದೀ ಗ ಕಾಮನಿ ಕಾಯಿದೆಯಲ್ಲೂ ಕ್ರಿಮಿನಲ್ ಪ್ರಕರಣಗಳ ಅವಕಾಸಗಳನ್ನು ತೆಗೆದು ಹಾಕಿದ್ದನ್ನು ಇಲ್ಲಿ ಗಮನಿಸಬೇಕು | ಶಿಕ್ಷಣ ಶುಲ್ಕ ನೀಡುವುದು ಮತ್ತು ಅದರ ಪ್ರಮಾಣ ಕಾನೂನಿನಲ್ಲಿ ನಿಗದಿ ಪಡಿಸಿರುವುದರಿಂದ ಎಲ್ಲ |
| ನಿಯಮ ರಚನೆ | ಸಂಯುಕ್ತ ಸಹಕಾರಿಗೆ ನಿಯಮ ರಚಿಸುವ ಅವಕಾಶವಿದೆ ಆದ್ದರಿಂದ ಹೌದು | |
| ನಿಯಂತ್ರಣ | ಮೊದಲ ಹಂತದ ನಿಯಂತ್ರಣಕ್ಕೆ ಅವಕಾಶವಿದೆ ಆದ್ದರಿಂದ ಹೌದು | |
| ವಿವಾದಗಳ ಪರಿಹಾರ | | ಇದನ್ನು ಕಾನೂನಿನ ಮೂಲಕ ನೀ ಡಲಾಗಿದೆ ಆದ್ದರಿಂದ ಅಲ್ಲ |

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತಸಹಕಾರಿಯ ಬಲಗಳು (strngth)**

- ಒಂದು ದೊಡ್ಡ ಸಂಖ್ಯೆಯ ಸದಸ್ಯರನ್ನು ಹೊಂದಿದೆ
- ರಾಜ್ಯದ ಎಲ್ಲಾ ಭಾಗಗಳಲ್ಲೂ ಸದಸ್ಯರನ್ನು ಹೊಂದಿದೆ
- ಬಹು ಪಾಲು ಸದಸ್ಯರ ಸಹಕಾರಿಗಳು ಲಾಭದಲ್ಲಿ ಇದ್ದಾರೆ
- ಒಂದು ಕಾರ್ಯ ಸಾಧುವಾದ ಆಡಳಿತಾತ್ಮಕ ವ್ಯವಸ್ಥೆ ಅಸ್ತಿತ್ವದಲ್ಲಿದೆ

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅವಕಾಶಗಳು (Oprtunities)**

- ವಿಸ್ತರಣೆಗೆ ಅವಕಾಶಗಳಿವೆ. ವಿಸ್ತರಣೆ ಸಂಖ್ಯೆ ಮತ್ತು ಗುಣಮಟ್ಟ ಎರಡರಲ್ಲೂ
- ಹೊಸ ಕ್ಷೇತ್ರಗಳಲ್ಲಿ ಸೌಹಾರ್ದ ವಿಸ್ತರಿಸುವ ಅವಕಾಶಗಳಿವೆ
- ಪೂರಕ ಆದರೆ ಸ್ವತಂತ್ರ ಸಂಸ್ಥೆಗಳನ್ನು ಹುಟ್ಟು ಹಾಕಿ ಸದಸ್ಯರಿಗೆ ಹೆಚ್ಚಿನ ಸೇವೆ ನೀಡುವ ಮತ್ತು ಅದೇ ಸಮಯದಲ್ಲಿ ಮೇಲ್ವಿಚಾರಣೆಗೆ ಹೆಚ್ಚಿನ ಒತ್ತು (Focus) ನೀಡಲು ಸಾಧ್ಯವಾಗಿಸುವುದು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸವಾಲುಗಳು (Chalenges/Thret )**

- ಸರಕಾರದ ಮಟ್ಟದಲ್ಲಿ ಬ್ರಾಂಡ್ ಇಮೇಜ್ ರೂಪಿಸುವುದು
- ಸದಸ್ಯ ಸಹಕಾರಿಗಳಲ್ಲಿ ವೃತ್ತಿಪರತೆ ತರುವುದು
- ತರಬೇತಿ ಮತ್ತು ಶಿಕ್ಷಣವನ್ನು ವನ್ನು ಕಾಲದ ಅಗತ್ಯಗಳಿಗೆ ತಕ್ಕಂತೆ ಬದಲಾಯಿಸುವುದು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ದೌರ್ಬಲ್ಯಗಳು (weekness)**

- ದೈನಂದಿನ ಆಡಳಿತದಲ್ಲಿ ಮಂಡಳಿಯ ಹೆಚ್ಚಿನ ಪಾಲ್ಗೊಳ್ಳುವಿಕೆ
- ಮಂಡಳಿಯ ಮೇಲೆ ಹೊರಗಿನ ವ್ಯವಸ್ಥೆ / ಶಕ್ತಿಯ ಪರಿಣಾಮಗಳು
- ಅಗತ್ಯವಿರುವಲ್ಲಿ ನಿಯಂತ್ರಕನ ಕಾರ್ಯ ನಿರ್ವಹಿಸುವಲ್ಲಿ, ಆಂತರಿಕ ಕಾರಣಗಳಿಂದ ವಿಫಲವಾಗುತ್ತಿರುವುದು
- ದೂರಗಾಮಿ ದೃಷ್ಟಿ ಮತ್ತು ನೀತಿ ಇಲ್ಲದಿರುವುದು

# "ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧ ಹಾಗೂ ಅಪಾಯಗಳನ್ನು ತಗ್ಗಿಸುವ ಮತ್ತು ತಡೆಗಟ್ಟುವ ಕ್ರಮಗಳು

– ಶ್ರೀ ವಿಕ್ರಾಂತ ಪಾಟೀಲ, ಸಿವಿಲ್ ಇಂಜಿನಿಯರ್, ಕ,ರಾ,ಸೌ,ಸಂ,ಸ,ನಿ., ಬೆಂಗಳೂರು

**ಪರಿಚಯ:**

ತಂತ್ರಜ್ಞಾನದ ತ್ವರಿತ ಪ್ರಗತಿಯು ಬ್ಯಾಂಕಿಂಗ್ ಉದ್ಯಮವನ್ನು ಕ್ರಾಂತಿಗೊಳಿಸಿದೆ, ಪ್ರಪಂಚದಾದ್ಯಂತದ ಗ್ರಾಹಕರಿಗೆ ಅನುಕೂಲತೆ ಮತ್ತು ದಕ್ಷತೆಯನ್ನು ಒದಗಿಸುತ್ತದೆ. ಆದಾಗ್ಯೂ, ಈ ವಿಕಸನವು ಮಹತ್ವದ ಸವಾಲನ್ನು ಸಹ ಹುಟ್ಟುಹಾಕಿದೆ – ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧ. ಹಣಕಾಸು ಸಂಸ್ಥೆಗಳು ವಹಿವಾಟು ನಡೆಸಲು ಮತ್ತು ಸೂಕ್ಷ್ಮ ಗ್ರಾಹಕರ ಮಾಹಿತಿ(ಡೇಟಾವನ್ನು) ಸಂಗ್ರಹಿಸಲು ಡಿಜಿಟಲ್ ಮೂಲಸೌಕರ್ಯವನ್ನು ಹೆಚ್ಚು ಅವಲಂಬಿಸಿವೆ, ಇವು ಸೈಬರ್ ಅಪರಾಧಿಗಳಿಗೆ ಆಹಾರ ವಾಗುತ್ತಿವೆ. ನಾನು ಈ ಲೇಖನದಲ್ಲಿ ಬ್ಯಾಂಕ್‌ಗಳನ್ನು ಗುರಿಯಾಗಿಸುವ ವಿವಿಧ ರೀತಿಯ ಸೈಬರ್ ಅಪರಾಧಗಳು, ಅವುಗಳ ಪ್ರಭಾವ ಮತ್ತು ಅವುಗಳ ಪರಿಣಾಮಗಳ ಬಗ್ಗೆ ವಿವರವಾದ ವಿಷಯವನ್ನು ಒದಗಿಸುವ ಗುರಿಯನ್ನು ಹೊಂದಿ ಬರೆದಿರುವೆ. ಇಲ್ಲಿ ಸೈಬರ್ ಅಪರಾಧ ತಡೆಗಟ್ಟುವ ಕ್ರಮಗಳ ಕುರಿತು ಹಲವು ಮಾಹಿತಿ ಮತ್ತು ಬೆಳೆಯುತ್ತಿರುವ ಸೈಬರ್ ಬೆದರಿಕೆಯನ್ನು ಎದುರಿಸುವಲ್ಲಿ ನಾವು ಹೇಗೆ ಬಲಗೊಲ್ಲಬೇಕು ಎಂಬುವದರಕುರಿತು ಮಾಹಿತಿಯಿದೆ.

**ಸೈಬರ್ ಅಪರಾಧದ ವಿಧಗಳು:**

ಫಿಶಿಂಗ್ ದಾಳಿಗಳು: ಬ್ಯಾಂಕುಗಳು ಎದುರಿಸುತ್ತಿರುವ ಸಾಮಾನ್ಯ ಸೈಬರ್ ಅಪರಾಧಗಳಲ್ಲಿ ಒಂದು ಫಿಶಿಂಗ್ ಆಗಿದೆ. ಈ ಅತ್ಯಾಧುನಿಕ ತಂತ್ರದಲ್ಲಿ, ಸೈಬರ್ ಅಪರಾಧಿಗಳು ತಮ್ಮ ಲಾಗಿನ್ ರುಜುವಾತುಗಳನ್ನು ಅಥವಾ ವೈಯಕ್ತಿಕ ಮಾಹಿತಿಯನ್ನು ಮನವೊಲಿಸಿಪಡೆಯುತ್ತಾರೆ, ಇದು ಮೋಸದ ಇಮೇಲ್‌ಗಳು, ಸಂದೇಶಗಳು ಅಥವಾ ವೆಬ್‌ಸೈಟ್‌ಗಳ ಮೂಲಕ ಪಾಸ್‌ವರ್ಡ್‌ಗಳು, ಕ್ರೆಡಿಟ್ ಕಾರ್ಡ್ ವಿವರಗಳು ಅಥವಾ ಸಾಮಾಜಿಕ ಭದ್ರತೆ ಸಂಖ್ಯೆಗಳಂತಹ ಸೂಕ್ಷ್ಮ ಮಾಹಿತಿಯನ್ನು ಪಡೆಯುವ ಮೂಲಕ ಬ್ಯಾಂಕ್ ಗ್ರಾಹಕರನ್ನು ಮೋಸಗೊಳಿಸಲು ಪ್ರಯತ್ನಿಸುತ್ತಾರೆ. ಬ್ಯಾಂಕ್‌ಗಳ ಮೇಲೆ ಫಿಶಿಂಗ್ ದಾಳಿಯ ಪರಿಣಾಮವು ಹಣಕಾಸಿನ ನಷ್ಟಗಳು, ಮಾಹಿತಿ ಶೇರ್ ಮಾಡಿಕೊಂಡ ಗ್ರಾಹಕರ ಖಾತೆಗಳು ಮತ್ತು ಹಣಕಾಸಿನ ಹಾನಿಯನ್ನು ಒಳಗೊಂಡಿರುತ್ತದೆ.

**ಮಾಲ್‌ವೇರ್ ದಾಳಿಗಳು:** ಟ್ರೋಜನ್ ಹಾರ್ಸ್‌ಗಳು ಮತ್ತು ರಾನ್ಸಮ್‌ವೇರ್‌ನಂತಹ ಮಾಲ್‌ವೇರ್ ದಾಳಿಗಳು ಬ್ಯಾಂಕಿಂಗ್ ವಲಯಕ್ಕೆ ಗಮನಾರ್ಹ ಅಪಾಯವನ್ನುಂಟುಮಾಡುತ್ತವೆ. ಈ ದುರುದ್ದೇಶಪೂರಿತ ಸಾಫ್ಟ್‌ವೇರ್ ಪ್ರೋಗ್ರಾಂಗಳು ಸಿಸ್ಟಂಗಳಲ್ಲಿ ನುಸುಳಬಹುದು, ಸೂಕ್ಷ್ಮ ಡೇಟಾವನ್ನು ಕದಿಯಬಹುದು ಅಥವಾ ಸುಲಿಗೆ ಪಾವತಿಸುವವರೆಗೆ ನಿರ್ಣಾಯಕ ಮಾಹಿತಿಯನ್ನು ಎನ್‌ಕ್ರಿಪ್ಟ್ ಮಾಡಬಹುದು. ಈ ದಾಳಿಗಳು ಹಣಕಾಸಿನ ನಷ್ಟ, ಬ್ಯಾಂಕಿಂಗ್ ಕಾರ್ಯಾಚರಣೆಗಳ ಅಡ್ಡಿ ಮತ್ತು ಗ್ರಾಹಕರ ನಂಬಿಕೆಯ ಸವೆತಕ್ಕೆ ಕಾರಣವಾಗಬಹುದು.

**ಗುರುತಿನ ಮಾಹಿತಿ ಕಳ್ಳತನ:** ಸೈಬರ್ ಅಪರಾಧಿಗಳು ಸಾಮಾಜಿಕ ಭದ್ರತೆ ಸಂಖ್ಯೆಗಳು ಮತ್ತು ಬ್ಯಾಂಕ್ ಖಾತೆ ವಿವರಗಳಂತಹ ವೈಯಕ್ತಿಕ ಮಾಹಿತಿಯನ್ನು ಕದಿಯುವ ಮೂಲಕ ಗುರುತಿನ ಕಳ್ಳತನದಲ್ಲಿ ತೊಡಗುತ್ತಾರೆ, ಮೋಸದ ಚಟುವಟಿಕೆಗಳನ್ನು ಮಾಡುತ್ತಾರೆ. ಇದು ಬ್ಯಾಂಕ್‌ಗಳು ಮತ್ತು ಗ್ರಾಹಕರಿಬ್ಬರಿಗೂ ತೀವ್ರ ಆರ್ಥಿಕ ನಷ್ಟವನ್ನು ಉಂಟುಮಾಡಬಹುದು ಮತ್ತು ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸದಿದ್ದರೆ ಬ್ಯಾಂಕಿನ ಪ್ರತಿಷ್ಠೆಯನ್ನು ಹಾನಿಗೊಳಿಸಬಹುದು.

**ಪರಿಣಾಮಗಳು:**

ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧಗಳ ಪರಿಣಾಮಗಳು ಕೇವಲ ಹಣಕಾಸಿನ ನಷ್ಟವಲ್ಲ ಅದನ್ನು ಮೀರಿ ಸಮಸ್ಯಗಳನ್ನ ಎದುರಿಸಬೇಕಾಗುತ್ತದೆ. ಗ್ರಾಹಕರ ನಂಬಿಕೆಯನ್ನು ಕಳೆದುಕೊಳ್ಳಬಹುದು, ಇದು ವ್ಯಾಪಾರದ ನಷ್ಟ ಮತ್ತು ಕಳಂಕಿತ ಖ್ಯಾತಿಗೆ ಕಾರಣವಾಗುತ್ತದೆ. ಹೆಚ್ಚುವರಿಯಾಗಿ, ಸೈಬರ್ ದಾಳಿಯಿಂದ ಉಂಟಾದ ಹಾನಿಯನ್ನು ತನಿಖೆ ಮಾಡುವ ಮತ್ತು ಸರಿಪಡಿಸುವ ವೆಚ್ಚವು ಗಣನೀಯವಾಗಿರುತ್ತದೆ.

**ಕಾನೂನು ಮತ್ತು ನಿಯಂತ್ರಕ ಪರಿಣಾಮಗಳು:** ಗ್ರಾಹಕರ ಡೇಟಾವನ್ನು ಸಮರ್ಪಕವಾಗಿ ರಕ್ಷಿಸಲು ವಿಫಲವಾದ ಅಥವಾ ಉದ್ಯಮದ ಮಾನದಂಡಗಳು ಮತ್ತು ನಿಬಂಧನೆಗಳ ಅನುಸರಣೆಗಾಗಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಕಾನೂನು ಮತ್ತು ನಿಯಂತ್ರಕ ದಂಡವನ್ನು ಎದುರಿಸಬಹುದು.

**ಕಾರ್ಯಾಚರಣೆಯ ಅಡಚಣೆ :** ಸೈಬರ್ ದಾಳಿಗಳು ಬ್ಯಾಂಕಿಂಗ್ ಕಾರ್ಯಾಚರಣೆಗಳನ್ನು ಅಡ್ಡಿಪಡಿಸಬಹುದು, ಸಿಸ್ಟಮ್ ಡೌನ್‌ಟೈಮ್, ವಹಿವಾಟು ವೈಫಲ್ಯಗಳು ಮತ್ತು ಗ್ರಾಹಕರಿಗೆ ಅಗತ್ಯ ಸೇವೆಗಳನ್ನು ಒದಗಿಸುವಲ್ಲಿ ವಿಳಂಬವನ್ನು ಉಂಟುಮಾಡಬಹುದು.

**ಸೈಬರ್ ಅಪರಾಧಗಳನ್ನು ತಡೆಗಟ್ಟುವ ಕ್ರಮಗಳು:**

ಸೈಬರ್ ಅಪರಾಧಕ್ಕೆ ಸಂಬಂಧಿಸಿದ ಅಪಾಯಗಳನ್ನು ತಗ್ಗಿಸಲು, ಹಣಕಾಸು ಸಂಸ್ಥೆಗಳು ದೃಢವಾದ ತಡೆಗಟ್ಟುವ ಕ್ರಮಗಳಲ್ಲಿ ಹೂಡಿಕೆ ಮಾಡಬೇಕು. ಅವುಗಳೆಂದರೆ:

1. ಬಲವಾದ ದೃಢೀಕರಣ ವಿಧಾನಗಳು: ಬಹು-ಅಂಶದ ದೃಢೀಕರಣ ವ್ಯವಸ್ಥೆಗಳನ್ನು ಅಳವಡಿಸುವುದರಿಂದ ಗ್ರಾಹಕರ ಖಾತೆಗಳಿಗೆ ಅನಧಿಕೃತ ಪ್ರವೇಶದ ಅಪಾಯವನ್ನು ಗಣನೀಯವಾಗಿ ಕಡಿಮೆ ಮಾಡಬಹುದು.

2. ಉದ್ಯೋಗಿಗಳ ತರಬೇತಿ: ಸೈಬರ್ ಸುರಕ್ಷತೆಯ ಉತ್ತಮ ಅಭ್ಯಾಸಗಳು, ಫಿಶಿಂಗ್‌ಗೆ ಸಂಬಂಧಿಸಿದ ಅಪಾಯಗಳು, ಸಾಮಾಜಿಕ ಎಂಜಿನಿಯರಿಂಗ್ ಮತ್ತು ಬಲವಾದ ಪಾಸ್‌ವರ್ಡ್ ನಿರ್ವಹಣೆಯ ಪ್ರಾಮುಖ್ಯತೆಯ ಕುರಿತು ಉದ್ಯೋಗಿಗಳಿಗೆ ಶಿಕ್ಷಣ ನೀಡಿ..

3. **ದೃಢವಾದ ಸೈಬರ್ ಸೆಕ್ಯುರಿಟಿ ಸಿಸ್ಟಮ್ಸ್:** ಸೈಬರ್ ದಾಳಿಗಳನ್ನು ಪತ್ತೆಹಚ್ಚಲು ಮತ್ತು ತಡೆಯಲು ಬ್ಯಾಂಕುಗಳು ಸುಧಾರಿತ ಸೈಬರ್ ಭದ್ರತಾ ವ್ಯವಸ್ಥೆಗಳನ್ನು ನಿಯೋಜಿಸಬೇಕು. ಇದು ಅಪಾಯದ ಪತ್ತೆ ಮತ್ತು ತಡೆಗಟ್ಟುವ ವ್ಯವಸ್ಥೆಗಳು ಮತ್ತು ಎನ್‌ಕ್ರಿಪ್ಶನ್ ಪ್ರೋಟೋಕಾಲ್‌ಗಳನ್ನು ಒಳಗೊಂಡಿರುತ್ತದೆ.

4. **ಸಾಫ್ಟ್‌ವೇರ್ ನವೀಕರಣಗಳು:** ದೋಷಗಳನ್ನು ಪರಿಹರಿಸಲು ಮತ್ತು ತಿಳಿದಿರುವ ಬೆದರಿಕೆಗಳಿಂದ ರಕ್ಷಿಸಲು ಆಪರೇಟಿಂಗ್ ಸಿಸ್ಟಮ್‌ಗಳ, ಅಪ್ಲಿಕೇಶನ್‌ಗಳು ಮತ್ತು ಸಾಫ್ಟ್‌ವೇರ್‌ಗಳಿಗೆ ಸಮಯೋಚಿತ ಭದ್ರತಾ ಪ್ಯಾಚ್‌ಗಳು ಮತ್ತು ನವೀಕರಣಗಳನ್ನು ಆಯಾಕಾಲಕ್ಕೆನವೀಕರಣಮಾಡಬೇಕು.

5. **ಡೇಟಾ ಎನ್‌ಕ್ರಿಪ್ಶನ್ ಮತ್ತು ಸುರಕ್ಷಿತ ಸಂಗ್ರಹಣೆ:** ಗ್ರಾಹಕ ಡೇಟಾವನ್ನು ಎನ್‌ಕ್ರಿಪ್ಟ್ ಮಾಡಿ ಮತ್ತು ಅನಧಿಕೃತ ಜಾಲತಾಣಗಳನ್ನು ತಡೆಯಲು ಮತ್ತು ಸುರಕ್ಷಿತ ಸಂಗ್ರಹಣೆ ಹಾಗೂ ಬ್ಯಾಕಪ್ ಅಭ್ಯಾಸಗಳ

ಬಗ್ಗೆ ಪ್ರತಿ ದಿನ ಖಚಿತಪಡಿಸಿಕೊಳ್ಳಿ.

**ಸಹಯೋಗ ಪ್ರಯತ್ನಗಳು:**

ಸೈಬರ್ ಅಪರಾಧವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಬ್ಯಾಂಕುಗಳು, ಕಾನೂನು ಜಾರಿ ಸಂಸ್ಥೆಗಳ ನಡುವಿನ ಸಹಯೋಗವು ನಿರ್ಣಾಯಕವಾಗಿದೆ. ಬ್ಯಾಂಕ್‌ಗಳ ನಡುವಿನ ಮಾಹಿತಿ ಹಂಚಿಕೆಯು ಸೈಬರ್ ದಾಳಿಯ ಮಾದರಿಗಳು ಮತ್ತು ಪ್ರವೃತ್ತಿಗಳನ್ನು ಗುರುತಿಸಲು ಅನುವು ಮಾಡಿಕೊಡುತ್ತವೆ, ಪೂರ್ವಭಾವಿ ಕ್ರಮಗಳನ್ನು ಸಕ್ರಿಯಗೊಳಿಸುತ್ತದೆ. ಸೈಬರ್ ಅಪರಾಧಿಗಳನ್ನು ಸಮರ್ಥವಾಗಿ ತನಿಖೆ ಮಾಡಲು ಮತ್ತು ಬಂಧಿಸಲು ಕಾನೂನು ಜಾರಿ ಸಂಸ್ಥೆಗಳು ಬ್ಯಾಂಕ್‌ಗಳೊಂದಿಗೆ ನಿಕಟವಾಗಿ ಕೆಲಸ ಮಾಡಬೇಕು. ಭದ್ರತಾ ಮಾನದಂಡಗಳನ್ನು ಹೊಂದಿಸುವಲ್ಲಿ ಮತ್ತು ಅನುಸರಣೆಯನ್ನು ಖಾತ್ರಿಪಡಿಸುವಲ್ಲಿ ನಿಯಂತ್ರಕ ಸಂಸ್ಥೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ.

**ಹಣಕಾಸು ಮತ್ತು ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧದ ಬಗ್ಗೆ ಭಾರತೀಯ ಕಾನೂನು ಮತ್ತು ಕ್ರಮಗಳು:**

ಹಣಕಾಸು ಮತ್ತು ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧವನ್ನು ಪರಿಹರಿಸಲು ಭಾರತ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಭಾರತದಲ್ಲಿ ಸೈಬರ್ ಅಪರಾಧವನ್ನು ನಿಯಂತ್ರಿಸುವ ಪ್ರಾಥಮಿಕ ಶಾಸನವು ಮಾಹಿತಿ ತಂತ್ರಜ್ಞಾನ ಕಾಯಿದೆ-2000 (ಐಟಿ ಕಾಯಿದೆ) ಆಗಿದೆ, ಇದನ್ನು ಸೈಬರ್ ಭದ್ರತೆ ಮತ್ತು ಡೇಟಾ ರಕ್ಷಣೆಗೆ ಸಂಬಂಧಿಸಿದ ನಿಬಂಧನೆಗಳನ್ನು ಬಲಪಡಿಸಲು 2008 ರಲ್ಲಿ ತಿದ್ದುಪಡಿ ಮಾಡಲಾಗಿದೆ. ಭಾರತೀಯ ಕಾನೂನು ಮತ್ತು ಕ್ರಮದ ಕೆಲವು ಪ್ರಮುಖ ಅಂಶಗಳು ಕೆಳಗಿನಂತೆ ಇದೆ:

**1. ಕಾನೂನು ಚೌಕಟ್ಟು:** ಐಟಿ ಕಾಯಿದೆಯು ಎಲೆಕ್ಟ್ರಾನಿಕ್ ವಹಿವಾಟುಗಳಿಗೆ ಕಾನೂನು ಮಾನ್ಯತೆ ನೀಡುತ್ತದೆ, ವಿವಿಧ ಸೈಬರ್ ಅಪರಾಧಗಳನ್ನು ವ್ಯಾಖ್ಯಾನಿಸುತ್ತದೆ ಮತ್ತು ಅನಧಿಕೃತ ಪ್ರವೇಶ, ಡೇಟಾ ಕಳ್ಳತನ, ಹ್ಯಾಕಿಂಗ್, ಗುರುತಿನ ಕಳ್ಳತನ, ಫಿಶಿಂಗ್ ಮತ್ತು ಇತರ ಸೈಬರ್ ಅಪರಾಧಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ದಂಡವನ್ನು ಸೂಚಿಸುತ್ತದೆ.

**2. ಸೈಬರ್ ಸೆಲ್‌ಗಳು ಮತ್ತು ಏಜೆನ್ಸಿಗಳು:** ಸೈಬರ್ ಅಪರಾಧ ಪ್ರಕರಣಗಳನ್ನು ತನಿಖೆ ಮಾಡಲು ಮತ್ತು ನಿರ್ವಹಿಸಲು ಸೈಬರ್ ಕ್ರೈಮ್ ಇನ್ವೆಸ್ಟಿಗೇಷನ್ ಸೆಲ್ (ಅಅಖಅ), ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್ ಮತ್ತು ನ್ಯಾಷನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಂತಹ ವಿಶೇಷ ಸೈಬರ್ ಅಪರಾಧ ಕೋಶಗಳು ಮತ್ತು ಏಜೆನ್ಸಿಗಳನ್ನು ಭಾರತ ಸರ್ಕಾರ ಸ್ಥಾಪಿಸಿದೆ.

**3. ಸೈಬರ್ ಅಪರಾಧ ವರದಿ ಮತ್ತು ದೂರುಗಳು:** ವ್ಯಕ್ತಿಗಳು ಮತ್ತು ಸಂಸ್ಥೆಗಳು ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ (www.cybercrime.gov.in) ಮೂಲಕ ಸೈಬರ್ ಅಪರಾಧ ಘಟನೆಗಳನ್ನು ವರದಿ ಮಾಡಬಹುದು ಅಥವಾ ಸ್ಥಳೀಯ ಪೊಲೀಸ್ ಠಾಣೆಗಳಿಗೆ ದೂರು ಸಲ್ಲಿಸಬಹುದು. ಸೈಬರ್ ಅಪರಾಧದ ಸಂತ್ರಸ್ತರಿಗೆ ಸಹಾಯ ಮಾಡಲು ಸರ್ಕಾರವು ಮೀಸಲಾದ ಸಹಾಯವಾಣಿ ಸಂಖ್ಯೆಗಳನ್ನು ಸ್ಥಾಪಿಸಿದೆ.

**4. ಸೈಬರ್ ಮೇಲ್ಮನವಿ ನ್ಯಾಯಮಂಡಳಿ:** ಐಟಿ ಕಾಯಿದೆಯು ಸೈಬರ್ ಮೇಲ್ಮನವಿ ನ್ಯಾಯಮಂಡಳಿ ಸ್ಥಾಪನೆಗೆ ಒದಗಿಸುತ್ತದೆ, ಇದು ತೀರ್ಪು ನೀಡುವ ಅಧಿಕಾರಿಗಳ ನಿರ್ಧಾರಗಳ ವಿರುದ್ಧ ಮೇಲ್ಮನವಿಗಳನ್ನು ನಿರ್ವಹಿಸುತ್ತದೆ ಮತ್ತು ಸಂತ್ರಸ್ತರಿಗೆ ಪರಿಹಾರ ಸೇರಿದಂತೆ ಸೈಬರ್ ಅಪರಾಧಕ್ಕೆ ಸಂಬಂಧಿಸಿದ ವಿಷಯಗಳೊಂದಿಗೆ ವ್ಯವಹರಿಸುತ್ತದೆ.

**5. ಡೇಟಾ ರಕ್ಷಣೆ:** IT ಕಾಯಿದೆಯು ಡೇಟಾ ರಕ್ಷಣೆ ಮತ್ತು ಗೌಪ್ಯತೆಗೆ ಸಂಬಂಧಿಸಿದ ನಿಬಂಧನೆಗಳನ್ನು ಒಳಗೊಂಡಿದೆ. ವೈಯಕ್ತಿಕ ಡೇಟಾ ಸಂರಕ್ಷಣಾ ಮಸೂದೆ, 2019 ಪ್ರಸ್ತುತ ಪರಿಗಣನೆಯಲ್ಲಿದೆ, ಇದು ವೈಯಕ್ತಿಕ ಡೇಟಾದ ರಕ್ಷಣೆಗಾಗಿ ಸಮಗ್ರ ಚೌಕಟ್ಟನ್ನು ಒದಗಿಸುವ ಮತ್ತು ಅದರ ಸಂಸ್ಕರಣೆಯನ್ನು ನಿಯಂತ್ರಿಸುವ ಗುರಿಯನ್ನು ಹೊಂದಿದೆ.

**6. ತಡೆಗಟ್ಟುವಿಕೆ ಮತ್ತು ಜಾಗೃತಿ ಕಾರ್ಯಕ್ರಮಗಳು:** ಭಾರತೀಯ ಸರ್ಕಾರವು ಉದ್ಯಮ ಸಂಸ್ಥೆಗಳು ಮತ್ತು ಕಾನೂನು ಜಾರಿ ಏಜೆನ್ಸಿಗಳ ಸಹಯೋಗದೊಂದಿಗೆ ಸೈಬರ್ ಭದ್ರತೆಯ ಉತ್ತಮ ಅಭ್ಯಾಸಗಳು ಮತ್ತು ಸೈಬರ್‌ಗೆ ಸಂಬಂಧಿಸಿದ ಅಪಾಯಗಳ ಬಗ್ಗೆ ವ್ಯಕ್ತಿಗಳು, ವ್ಯವಹಾರಗಳು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಶಿಕ್ಷಣ ನೀಡಲು ಜಾಗೃತಿ ಅಭಿಯಾನಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ. ಅಪರಾಧ.

**7. ಅಂತರಾಷ್ಟ್ರೀಯ ಸಹಕಾರ:** ಭಾರತವು ಸೈಬರ್ ಅಪರಾಧವನ್ನು ಎದುರಿಸಲು ಅಂತರರಾಷ್ಟ್ರೀಯ ಪ್ರಯತ್ನಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ ಮತ್ತು ಗಡಿಯಾಚೆಗಿನ ಸೈಬರ್ ಅಪರಾಧಗಳನ್ನು ತನಿಖೆ ಮಾಡಲು ಮತ್ತು ಗುಪ್ತಚರ ಮತ್ತು ಪರಿಣತಿಯನ್ನು ಹಂಚಿಕೊಳ್ಳಲು ವಿದೇಶಿ ಏಜೆನ್ಸಿಗಳು ಮತ್ತು ಸಂಸ್ಥೆಗಳೊಂದಿಗೆ ಸಹಕರಿಸುತ್ತದೆ.

**8. ಕರ್ನಾಟಕ ರಾಜ್ಯ ಸೈಬರ್ ಅಪರಾಧ ವರದಿ ಪೋರ್ಟಲ್:** ಕರ್ನಾಟಕ ಸರ್ಕಾರವು ಹಣಕಾಸು ಮತ್ತು ಬ್ಯಾಂಕಿಂಗ್ ವಲಯದಲ್ಲಿ ಸಂಭವಿಸುವ ಸೈಬರ್ ಅಪರಾಧಗಳನ್ನು ವರದಿ ಮಾಡಲು ಮೀಸಲಾದ ಆನ್‌ಲೈನ್ ಪೋರ್ಟಲ್ ಅನ್ನು ಸ್ಥಾಪಿಸಿದೆ. ಪೋರ್ಟಲ್ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಸೈಬರ್ ಕ್ರೈಮ್ ಘಟನೆಗಳನ್ನು ವರದಿ ಮಾಡಲು ಮತ್ತು ಕಾನೂನು ಜಾರಿ ಸಂಸ್ಥೆಗಳಿಂದ ಸಹಾಯ ಪಡೆಯಲು ಶಕ್ತಗೊಳಿಸುತ್ತದೆ.

ಸೈಬರ್ ಅಪರಾಧವು ವೇಗವಾಗಿ ವಿಕಸನಗೊಳ್ಳುತ್ತಿರುವ ಕ್ಷೇತ್ರವಾಗಿದೆ ಮತ್ತು ಸೈಬರ್ ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಭಾರತ ಸರ್ಕಾರವು ತನ್ನ ಕಾನೂನು ಚೌಕಟ್ಟು ಮತ್ತು ಜಾರಿ ಕಾರ್ಯವಿಧಾನಗಳನ್ನು ಬಲಪಡಿಸುವ ಕೆಲಸವನ್ನು ಮುಂದುವರೆಸಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ.

**ಉಪಸಂಹಾರ:**

ಕೊನೆಯಲ್ಲಿ, ಇಂದಿನ ಡಿಜಿಟಲ್ ಯುಗದಲ್ಲಿ, ವಿಶೇಷವಾಗಿ ಹಣಕಾಸು ಮತ್ತು ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಭದ್ರತೆಯ ಅರಿವು ಅತ್ಯಂತ ಮಹತ್ವದ್ದಾಗಿದೆ. ಸೈಬರ್ ಅಪರಾಧದ ಹೆಚ್ಚುತ್ತಿರುವ ಪ್ರಭುತ್ವ ಮತ್ತು ವ್ಯಕ್ತಿಗಳ ವ್ಯವಹಾರಗಳು ಮತ್ತು ಆರ್ಥಿಕತೆಗೆ ಒಡ್ಡುವ ಸಂಭಾವ್ಯ ಅಪಾಯಗಳೊಂದಿಗೆ ಸೈಬರ್ ಭದ್ರತೆಯ ಜಾಗೃತಿಯನ್ನು ಹೆಚ್ಚಿಸಲು ಪೂರ್ವಭಾವಿ ಕ್ರಮಗಳಿಗೆ ಆದ್ಯತೆ ನೀಡುವುದು ಬಹಳ ಮುಖ್ಯವಾಗಿದೆ.

ಹಣಕಾಸು ಸಂಸ್ಥೆಗಳು ಡಿಜಿಟಲ್ ಮೂಲಸೌಕರ್ಯವನ್ನು ಹೆಚ್ಚು ಅವಲಂಬಿಸಿರುವುದರಿಂದ ಬ್ಯಾಂಕಿಂಗ್ ವಲಯದಲ್ಲಿ ಸೈಬರ್ ಅಪರಾಧವು ಬೆಳೆಯುತ್ತಿರುವ ಕಳವಳವನ್ನು ಮುಂದುವರೆಸಿದೆ. ಈ ಮೇಲಿನ ವಿಷಯ ಬ್ಯಾಂಕ್‌ಗಳು ಎದುರಿಸುವ ಸಾಮಾನ್ಯ ಸೈಬರ್ ಬೆದರಿಕೆಗಳು, ಅವುಗಳ ಪರಿಣಾಮಗಳು ಹಾಗೂ ಅಪಾಯಗಳನ್ನು ತಗ್ಗಿಸಲು ತಡೆಗಟ್ಟುವ ಕ್ರಮಗಳನ್ನು ಎತ್ತಿ ತೋರಿಸುತ್ತದೆ. ಈ ಬೆದರಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಬ್ಯಾಂಕುಗಳು, ಕಾನೂನು ಜಾರಿ ಸಂಸ್ಥೆಗಳು ಮತ್ತು ನಿಯಂತ್ರಕ ಸಂಸ್ಥೆಗಳ ನಡುವಿನ ಸಹಯೋಗ ಅತ್ಯಗತ್ಯ. ದೃಢವಾದ ಭದ್ರತಾ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ಮತ್ತು ಜಾಗರೂಕರಾಗಿರುವುದರ ಮೂಲಕ ಬ್ಯಾಂಕುಗಳು ತಮ್ಮನ್ನು ಮತ್ತು ತಮ್ಮ ಗ್ರಾಹಕರನ್ನು ಸೈಬರ್ ದಾಳಿಯಿಂದ ರಕ್ಷಿಸಿಕೊಳ್ಳಬಹುದು ಮತ್ತು ಜಾಗತಿಕ ಬ್ಯಾಂಕಿಂಗ್ ವ್ಯವಸ್ಥೆಯ ಸಮಗ್ರತೆಯನ್ನು ಭದ್ರಪಡಿಸಿಕೊಳ್ಳಬಹುದು.

# ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ ಅನ್ವಯ ಸದಸ್ಯ ಸಹಕಾರಿಗಳ ನಿರ್ದೇಶಕರ ಅನರ್ಹತೆ ಹಾಗೂ ಸದಸ್ಯ ಸಹಕಾರಿಗಳ ಮಂಡಳಿಯನ್ನು ರದ್ದುಪಡಿಸುವುದು ಹಾಗೂ ವಿಶೇಷ ಅಧಿಕಾರಿಯನ್ನ ನೇಮಕ ಮಾಡುವುದು.



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**25. ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ**

(1) ಒಬ್ಬ ವ್ಯಕ್ತಿಯ, –

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಇತರ ಯಾವುದೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

[(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃ ಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ]

[(ಇ) ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದಲ್ಲಿ ತಾನು ತೆಗೆದುಕೊಂಡಿರುವ ಸಾಲದ ಯಾವುದೇ ಬಾಕಿಗಳನ್ನು ಸಂದಾಯ ಮಾಡಲು ತಪ್ಪಿದ್ದರೆ ಅಥವಾ ಸಾಲದ ನಿರಂತರ ಮೂರುಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

[(ಎಫ್) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಲಾದಂತೆ ಯಾವುದೇ ಅನರ್ಹತೆಗಳಿಗೆ ಗುರಿಯಾಗಿದ್ದರೆ,

– ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು. [ಹಾಗೂ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರತಕ್ಕದ್ದು.]

(2) ಈ ಕೆಳಗಿನವುಗಳಿಗೆ ಜವಾಬ್ದಾರಿಯಾಗುವ ಯಾರೇ ಅಂಥ ನಿರ್ದೇಶಕರು ಸಹಕಾರಿಯ ಅಥವಾ ಸಹಕಾರ

ಸಂಘದ ಪದಾವಧಿಯಲ್ಲಿರುವಾಗ,–

(ಎ) ಯಾವುದೇ ಸಮಯದಲ್ಲಿ ಆತನು ಸದಸ್ಯನಾಗಿ ಮತನೀಡುವ ಅಥವಾ ಸದಸ್ಯನಾಗಿ ಮುಂದುವರೆಯುವ ಹಕ್ಕನ್ನು ಕಳೆದುಕೊಂಡಿದ್ದರೆ; ಅಥವಾ

(ಎ–1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಲೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿರ್ಟನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ–2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುದೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಸಿ) ಗೈರುಹಾಜರಿ ಬಗ್ಗೆ ಅನುಮತಿಯನ್ನು ಪಡೆದುಕೊಳ್ಳದೆ ಆತನು ಮಂಡಳಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ತತ್ಕಾಲದ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿಯ ಅಪರಾಧಕ್ಕಾಗಿ ನಿರ್ಣಿತ ಅಪರಾಧಿಯಾಗಿದ್ದರೆ; ಅಥವಾ

(ಇ) ತಾನು ತೆಗೆದುಕೊಂಡಿದ್ದ ಸಾಲದ ಯಾವುದೇ ಕಂತನ್ನು ಮರು ಸಂದಾಯ ಮಾಡಲು ತಪ್ಪಿದರೆ ಅಥವಾ ಸಾಲದ ನಿರಂತರ ಮೂರು ಕಂತುಗಳನ್ನು ಮರು ಸಂದಾಯ ಮಾಡಲು ತಪ್ಪಿರುವಂಥ ಸಾಲಗಾರನೊಬ್ಬನಿಗೆ ಜಾಮೀನುದಾರನಾಗಿದ್ದರೆ;

–ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಚುನಾಯಿತರಾಗಲು ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ಅಥವಾ ಯಾವುದೇ ಇತರ ಸಹಕಾರಿಯ ಅಥವಾ ಸಹಕಾರ ಸಂಘದ ನಿರ್ದೇಶಕರಾಗಿ ಮುಂದುವರಿಯಲು ಸಹ ಅನರ್ಹರಾಗಿರತಕ್ಕದ್ದು.

(3) ಒಬ್ಬ ನಿರ್ದೇಶಕ ಅಥವಾ ನೌಕರನು ದುರುಪಯೋಗ, ವಿಶ್ವಾಸ ದ್ರೋಹ ಅಥವಾ ಸಹಕಾರಿಗೆ ನಷ್ಟವನ್ನುಂಟು ಮಾಡುವಂಥ ಇತರ ಯಾವುದೇ ಕರ್ತವ್ಯ ಲೋಪ ಅಥವಾ ಕೃತ್ಯವನ್ನು ಮಾಡಿದ್ದು, ಹಾಗೆ ತಪ್ಪಿತಸ್ಥನಾಗಿರುವಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಡಿಯಲ್ಲಿ ಯಾವ ಕ್ರಿಮಿನಲ್ ಕ್ರಮಕ್ಕೆ ಆತನು ಗುರಿಯಾಗುವನೋ ಅಂಥ ಕ್ರಿಮಿನಲ್ ಕ್ರಮಕ್ಕೆ ಬಾಧಕವಾಗದಂತೆ ಆ ನಷ್ಟವನ್ನು ಭರ್ತಿ ಮಾಡುವುದಕ್ಕೆ ವೈಯಕ್ತಿವಾಗಿ ಜವಾಬ್ದಾರನಾಗತಕ್ಕದ್ದು.

(4) ಮಂಡಳಿಯ ಸದಸ್ಯನು, ಈ ಪ್ರಕರಣದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದನೇ ಅಥವಾ

ಒಳಪಟ್ಟಿರುವನೇ ಎಂಬ ಪ್ರಶ್ನೆಯನ್ನು ಸಂಯುಕ್ತ ಸಹಕಾರಿಯು, ಸಂಬಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ತೀರ್ಮಾನಿಸತಕ್ಕದ್ದು.

(5) (4)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾವೊಬ್ಬ ಸದಸ್ಯನು ಅಂಥ ಆದೇಶದ ವಿರುದ್ಧ ಆ ಆದೇಶವನ್ನು ಹೊರಡಿಸಿದ ಮೂವತ್ತು ದಿನಗಳೊಳಗಾಗಿ ರಿಜಿಸ್ಟ್ರಾರ್‌ನಲ್ಲಿ ಅಪೀಲು ಮಾಡಿಕೊಳ್ಳಬಹುದು.

**38. ರದ್ದಿಯಾತಿ –**

(1) ಒಂದು ಸಹಕಾರಿಯ ಮಂಡಳಿಯು, –

(i) ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಅಡಿಯಲ್ಲಿ ವಿಧಿಸಲಾಗಿರುವ ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರವಾಗಿ ತಪ್ಪು ಮಾಡುತ್ತಿದೆ ಅಥವಾ ನಿರ್ಲಕ್ಷ್ಯ ತೋರುತ್ತಿದೆ; ಅಥವಾ

(ii) ಸಹಕಾರಿಯ ಅಥವಾ ಅದರ ಸದಸ್ಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾದ ಯಾವುದೇ ಕಾರ್ಯವನ್ನು ಮಾಡಿದೆ; ಅಥವಾ

(iii) ನಿರ್ದೇಶಕರ ಅನರ್ಹತೆ, ರಾಜೀನಾಮೆ, ಮರಣ ಅಥವಾ ಅವರನ್ನು ತೆಗೆದುಹಾಕಿರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆ ಕೋರಂ ಆಗಲು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆಯಿದೆಯೆಂಬ ಕಾರಣದಿಂದ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

(iv) ಈ ಅಧಿನಿಯಮದ ಉಪಬಂಧಗಳು ಅಥವಾ ನಿಯಮಗಳು ಅಥವಾ [ಉಪವಿಧಿಗಳಿಗೆ] ಅನುಸಾರವಾಗಿ ಕಾರ್ಯನಿರ್ವಹಿಸುತ್ತಿಲ್ಲ; ಅಥವಾ

(v) ಸಹಕಾರ ವರ್ಷವು ಮುಕ್ತಾಯವಾದ ಆರು ತಿಂಗಳೊಳಗೆ ಆದರೆ ಪ್ರತಿ ವರ್ಷ ಸೆಪ್ಟಂಬರ್ ಇಪ್ಪತ್ತೈದ ರೊಳಗಾಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ತಪ್ಪಿದೆ ಅಥವಾ

[(v–ಎ) ಅದು ಗುರುತರವಾದ ಆರ್ಥಿಕ ಅವ್ಯವಹಾರಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದಿದೆ; ಅಥವಾ

(v–ಬಿ) ಅದರ ರಚನೆ ಅಥವಾ ಕೆಲಸ ಕಾರ್ಯಗಳಿಗೆ ಇಕ್ಕಟ್ಟಿನ ಸ್ಥಿತಿ ಉಂಟಾಗಿದೆ; ಅಥವಾ

(v–ಸಿ) ಅದು ಚುನಾವಣೆಯನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯವಾದ ನೆರವನ್ನು ನೀಡಲು ವಿಫಲವಾಗಿದೆ ಮತ್ತು ಯಾವುದೇ ಕಾರಣದಿಂದ ಚುನಾವಣಾ ಆಯೋಗವು ನಿರ್ಗಮಿಸುತ್ತಿರುವ ಮಂಡಳಿಯ ಪದಾವಧಿಯ ಮುಕ್ತಾಯದ ನಿಕಟಪೂರ್ವದಲ್ಲಿ ಚುನಾವಣೆಯನ್ನು ನಡೆಸಿರುವುದಿಲ್ಲ; ಅಥವಾ

(v-ಡಿ) ಅದು ಪ್ರತಿ ವರ್ಷ ಸೆಪ್ಟಂಬರ್ ತಿಂಗಳ ಒಂದರೊಳಗಾಗಿ ಲೆಕ್ಕಪತ್ರಗಳ ಪರಿಶೋಧನೆಯನ್ನು ಪೂರ್ಣ ಮಾಡಿಸಿ ಲೆಕ್ಕಪರಿಶೋಧನಾ ವರದಿಯನ್ನು ಸಾಮಾನ್ಯ ಸಭೆಯ ಮುಂದೆ ಮಂಡಿಸಲು ವಿಫಲವಾಗಿದೆ; ಅಥವಾ]

(vi) ಅನ್ಯಥಾ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ;

– ಎಂದು ಸಂಯುಕ್ತ ಸಹಕಾರಿಯು ಅಭಿಪ್ರಾಯಪಟ್ಟಲ್ಲಿ, ಅದು (ಮಂಡಳಿಯನ್ನು ರದ್ದುಗೊಳಿಸಬಹುದು ಅಥವಾ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಗೆ ಅಹಕಾರಿಯ ವ್ಯವಹಾರಗಳನ್ನು ನಿರ್ವಹಿಸಲು ಆಡಳಿತಗಾರರನ್ನು ನೇಮಕ ಮಾಡಬಹುದು:

ಪರಂತು, ಅಹವಾಲು ಹೇಳಿಕೊಳ್ಳಲು ಮಂಡಲಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಸಂಯುಕ್ತ ಸಹಕಾರಿಯು ಅಂಥ ಮಂಡಲಿಯನ್ನು (ರದ್ದುಗೊಳೊಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿಡತಕ್ಕದ್ದಲ್ಲ.)

(ಮತ್ತು ಪರಂತು ಸರ್ಕಾರದ ಷೇರು ಅಥವಾ ಸಾಲ ಅಥವಾ ಧನಸಹಾಯ ಅಥವಾ ಗ್ಯಾರಂಟಿ ಇಲ್ಲದ ಯಾವುದೇ ಸಹಕಾರಿಯ ಆಡಳಿತ ಮಂಡಲಿಯನ್ನು ರದ್ದುಪಡಿಸತಕ್ಕದ್ದಲ್ಲ ಅಥವಾ ಅಮಾನತ್ತಿನಲ್ಲಿ ಇಡತಕ್ಕದ್ದಲ್ಲ. ಮತ್ತೂ ಪರಂತು ಬ್ಯಾಂಕಿಂಗ್ ವ್ಯವಹಾರವನ್ನು ನಿರ್ವಹಿಸುವ ಒಂದು ಸಹಕಾರಿಗೆ 1949ರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮದ ಉಪಬಂಧಗಳೂ ಸಹ ಅನ್ವಯವಾಗತಕ್ಕದ್ದು ಮತ್ತು ಈ ಖಂಡವು 'ಆರು ತಿಂಗಳು' ಎಂಬ ಪದಗಳಿಗೆ ಬದಲಾಗಿ 'ಒಂದು ವರ್ಷ' ಎಂಬ ಪದಗಳು ಪ್ರತಿಯೋಜಿಸಲ್ಪಟ್ಟಂತೆ ಅನ್ವಯವಾಗತಕ್ಕದ್ದು.)

(2)(1) ನೇ ಉಪ–ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ನಂತರ,–

(ಎ) ಮಂಡಲಿಯ ನಿರ್ದೇಶಕರು ತಮ್ಮ ಹುದ್ದೆಯನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು:

ಮತ್ತು

ಬಿ)ಆಡಳಿತಗಾರನು ಸಹಕಾರಿಯ ವ್ಯವಹಾರಗಳ ಪ್ರಭಾರವನ್ನು ವಹಿಸಿಕೊಂಡಿದ್ದಾನೆಂದು ಭಾವಿಸತಕ್ಕದ್ದು.

(3) ಆಡಳಿತಗಾರನು, ಸಂಯುಕ್ತ ಸಹಕಾರಿಯ ನಿಯಂತ್ರಣಕ್ಕೊಳಪಟ್ಟು ಸಹಕಾರಿಯ ಮಂಡಲಿಯ

ಅಥವಾ ಯಾವೂಬ್ಬ ಪದಾಧಿಕಾರಿಯ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು

ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಉಪವಿಧಿಗಳ

ಅಡಿಯಲ್ಲಿ ಸಹಕಾರಿಯ ಹಿತಾಸಕ್ತಿಯನ್ನು ಅಗತ್ಯವಾಗಬಹುದಾದ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(4) ಸಂಯುಕ್ತ ಸಹಕಾರಿಯು,(1)ನೇ ಉಪ–ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳುವ ಮೊದಲು ಸಹಕಾರಿಯು ಯಾವ ಹಣಕಾಸು ನೆರವು ನೀಡುವ ಏಜೆನ್ಸಿಗೆ ಋಣಿಯಾಗಿರುವುದೋ ಆ ಏಜೆನ್ಸಿಯೊಂದಿಗೆ ಸಮಾಲೋಚಿಸತಕ್ಕದ್ದು. ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ,(ಅದು ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್ ನೊಂದಿಗೆ) ಸಹ ಸಮಾಲೋಚಿಸತಕ್ಕದ್ದು.

(5) ಆಡಳಿತಗಾರನು, ತನ್ನ ಪದಾವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಸಹಕಾರಿಗೆ ಅದರ ಉಪವಿಧಿಗಳಿಗನುಸಾರವಾಗಿ ಹೊಸ

ಮಂಡಲಿಯನ್ನು ರಚಿಸಲು ವ್ಯವಸ್ಥೆ ಮಾಡತಕ್ಕದ್ದು.

(6) ಈ ಅಧಿನಿಯಮದಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ಏನೇ ಇದ್ದರೂ, ಒಂದು ಸಹಕಾರಿ ಬ್ಯಾಂಕಿನ ಸಂಬಂಧದಲ್ಲಿ, ಸಾರ್ವಜನಿಕ ಹಿತಾಸಕ್ತಿಗಾಗಿ ಅಥವಾ ಸಹಕಾರಿ ಬ್ಯಾಂಕಿನ ವ್ಯವಹಾರಗಳನ್ನು ಠೇವಣಿದಾರರ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ನಡೆಸುತ್ತಿರುವುದನ್ನು ತಡೆಯುವುದಕ್ಕಾಗಿ ಅಥವಾ ಸಹಕಾರಿ ಬ್ಯಾಂಕಿನ ಸರಿಯಾದ ನಿರ್ವಹಣೆಗಾಗಿ(ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್), ಆ ಸಹಕಾರಿ ಬ್ಯಾಂಕಿನ ಮಂಡಲಿಯನ್ನು ರದ್ದುಗೊಳಿಸಬೇಕೆಂದು ಬರಹದಲ್ಲಿ ಅಗತ್ಯಪಡಿಸಿದರೆ, ಸಂಯುಕಗತ ಸಹಕಾರಿಯು ಲಿಖಿತ ಆದೇಶದ ಮೂಲಕ ಹಾಗೆ ಮಾಡತಕ್ಕದ್ದು ಮತ್ತು (ರಿಜರ್ವ್ ಬ್ಯಾಂಕ್ ಅಥವಾ ರಾಷ್ಟ್ರೀಯ ಬ್ಯಾಂಕ್), ಸಹಮತಿಯೊಂದಿಗೆ, ಸಂಯುಕ್ತ ಸಹಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸಹಕಾರಿ ಬ್ಯಾಂಕಿನ ವ್ಯವಹಾರಗಳ ನಿರ್ವಹಣೆಗಾಗಿ ಒಬ್ಬ ಆಡಳಿತಗಾರನನ್ನು ನೇಮಕ ಮಾಡತಕ್ಕದ್ದು.

(7) ಆಡಳಿತಗಾರನಿಗೆ ಕೊಡಬಹುದಾದ ಸಂಭಾವನೆಯನ್ನು ಸಂಯುಕ್ತ ಸಹಕಾರಿಯು ನಿರ್ಧರಿಸತಕ್ಕದ್ದು. ಅಂಥ ಸಂಭಾವನೆಯ ಮೊತ್ತವನ್ನು ಮತ್ತು ಆಡಳಿತಗಾರನು ಸಹಕಾರಿಯ ವ್ಯವಸ್ಥಾಪನೆಯಲ್ಲಿ ಮಾಡಿದ ಖರ್ಚುಗಳನ್ನು ಸಹಕಾರಿಯ ನಿಧಿಗಳಿಂದ ಪಾವತಿಸತಕ್ಕದ್ದು. ಸಹಕಾರಿಯ ಆಡಳಿತಗಾರನಾಗಿ ನೇಮಕವಾದ ಅಧಿಕಾರಿ ಅಥವಾ ನೌಕರನಿಗೆ ಅನ್ವಯವಾಗುವ ಸೇವಾ ನಿಯಮಗಳು, ಆತನು ಸಹಕಾರಿಯ ಆಡಳಿತಗಾರನಾಗಿ ಸೇವೆ ಸಲ್ಲಿಸುವಾಗಲೂ ಅನ್ವಯವಾಗತಕ್ಕದ್ದು.)

(38ಎ ವಿಶೇಷಾಧಿಕಾರಿ ನೇಮಕ:- (1) ನಿರ್ದೇಶಕರ ಅನರ್ಹತೆ ರಾಜೀನಾಮೆ ಅಥವಾ ಮರಣ ಅಥವಾ ಅವರನ್ನು ತೆಗೆದುಹಾಕುರುವುದರಿಂದ ಮಂಡಳಿಯ ಸದಸ್ಯರ ಸಂಖ್ಯೆಯು ಅಗತ್ಯವಿರುವ ಕೋರಂ ಸಂಖ್ಯೆಗಿಂತ ಕಡಿಮೆ ಇದೆ ಎಂಬ ಕಾರಣದಿಂದ ಸಹಕಾರಿಯ ಚಟುವಟಿಕೆಗಳು ಈ ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳಿಗೆ ಅನುಸಾರವಾಗಿ ನಡೆಸಲಾಗದಿದ್ದಲ್ಲಿ ಅಥವಾ 25ನೇ ಪ್ರಕರಣದ (2) ನೇ ಉಪಪ್ರಕರಣದಲ್ಲಿಯ ಯಾವುದೇ ಅನರ್ಹತೆ ಉಂಟಾದಲ್ಲಿ ಅಥವಾ ಎಲ್ಲಾ ನಿರ್ದೇಶಕರು ರಾಜೀನಾಮೆ ಕೊಟ್ಟಲ್ಲಿ (ಅಥವಾ ಮಂಡಳಿಯ ಪದಾವಧಿ ಮುಕ್ತಾಯವಾಗಿದ್ದು, ನೂತನ ಮಂಡಳಿಯ ರಚನೆಯಾಗಿಲ್ಲದಿದ್ದಲ್ಲಿ) ಅಂಥ ಸಹಕಾರಿಗೆ ಸಂಯುಕ್ತ ಸಹಕಾರಿಯು ಆರು ತಿಂಗಳಿಗೆ ಮೀರದ ಅವಧಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಬಹುದು,

2) (1) ನೇ ಉಪಪ್ರಕರಣದ ಅಡಿಯಲ್ಲಿ ಅದೇಶವನ್ನು ಮಾಡುವುದಕ್ಕೆ ಮೊದಲು ಆದೇಶದ ಮೂಲಕ ಬಾಧಿತವಾಗುವ ಸಹಕಾರಿಗೆ ಅಥವಾ ವ್ಯಕ್ತಿಗೆ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಅದನ್ನು ತಿಳಿಸುವ ಅವಕಾಶವನ್ನು ನೀಡುವ ಅವಶ್ಯಕತೆ ಇರುವುದಿಲ್ಲ.

3) ಮಂಡಳಿಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಕುರಿತು (ಸಹಕಾರಿ ಚುನಾವಣಾ ಪ್ರಾಧಿಕಾರ)ಕ್ಕೆ ವಿಶೇಷಾಧಿಕಾರಿಯು ಮಾಹಿತಿ ಒದಗಿಸತಕ್ಕದ್ದು. ಮತ್ತು (ಸಹಕಾರಿ ಚುನಾವಣಾ ಪ್ರಾಧಿಕಾರ)ವು ಖಾಲಿ ಇರುವ ಸ್ಥಾನಗಳ ಉಳಿದ ಅವಧಿಗೆ ಚುನಾವಣೆಯನ್ನು ನಡೆಸತಕ್ಕದ್ದು.

4) ಚುನಾವಣೆ ನಡೆದು ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆ ಆದ ಕೂಡಲೇ ವಿಶೇಷಾಧಿಕಾರಿಯು ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸತಕ್ಕದ್ದು ಮತ್ತು ವಿಶೇಷಾಧಿಕಾರಿಯು ಸ್ಥಾನ ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು.)

**1)ಸ್ವಾಭಾವಿಕ ನ್ಯಾಯ/ನೀತಿ:-**

ಶಾಸನತ್ಮಕ ಅಧಿಕಾರ ಚಲಾಯಿಸುವಾಗ ಪ್ರತಿಯೊಂದು ಪ್ರಾಧಿಕಾರವೂ, ಕ್ರಮ ಜರೂಗಿಸಲು ಪ್ರಾರಂಭಿಕ ಕ್ರಮವಾಗಿ, ತನಗೆ ಲಭ್ಯವಾದ ಮಾಹಿತಿ ಸಿಕ್ಕಿದ ಮೇಲೆ, ಸದಸ್ಯ ಸಹಕಾರಿಯ ಮಂಡಳಿ ಸದಸ್ಯರ ಮೇಲೆ ಕ್ರಮ ಜರೂಗಿಸಬೇಕಾದರೆ ಅವರಿಗೆ ತಿಳಿಯುವ ಭಾಷೆಯಲ್ಲಿ/ಪದಗಳಲ್ಲಿ (ಆರೋಪಗಳನ್ನು ದೃಢೀಕರಿಸಿಕೊಂಡ ನಂತರ) ಕಾರಣ ಕೇಳುವ ನೋಟೀಸ್ ಹೊರಡಿಸಬೇಕು.ಈ ನೋಟೀಸ್‌ನಲ್ಲಿ ಸಂಬಂಧಪಟ್ಟ ಸದಸ್ಯ ಸಹಕಾರಿಯಲ್ಲಿ ನಡೆದಿರುವ ಅವ್ಯವಹಾರದ ವಿವರವನ್ನು ಒಳಗೊಂಡಿರಬೇಕು ಮತ್ತು ಸಹಕಾರಿಯ ಸಂಬಂಧಪಟ್ಟವರ ವಿವರಣೆ ಕೇಳಬೇಕು. ನೋಟೀಸ್ ನೀಡಿದ ನಂತರ ಅವರಿಗೆ ಉತ್ತರಿಸಲು ಕನಿಷ್ಠ 15ರಿಂದ 30ದಿವಸಗಳ ಅವಧಿ ನಿಗದಿಪಡಿಸಬೇಕು. ನೋಟೀಸ್ ನೀಡಿದ ವ್ಯಕ್ತಿಗಳು ಹೆಚ್ಚುವರಿ ದಾಖಲೆ ಕೇಳಿದರೆ, ಅದನ್ನು ನೀಡುವ ವ್ಯವಸ್ಥೆ ಮಾಡಬೇಕು. (ವಿಷಯಕ್ಕೆ ಸಂಬಂಧಪಟ್ಟಿದರೆ ಮಾತ್ರ) ನೋಟೀಸ್ ನೀಡಿದ ಅವಧಿ ವಿಸ್ತರಿಸಲು ಅರ್ಜಿ ಸಲ್ಲಿಸಿದರೆ, ಅವಧಿಯನ್ನು ವಿಸ್ತರಿಸಲು ಅವಕಾಶ ನೀಡಬೇಕು ಎಂದು ಮಾನಗಂಡರೆ ಅವಧಿಯನ್ನು ವಿಸ್ತರಿಸಬಹುದು. ಈಗಾಗಲೇ ನೀಡಿದ ದಾಖಲೆಗಳು ಸಮರ್ಪಕವೆಂದು, ಸಂಯುಕ್ತ ಸಹಕಾರಿ ಮಂಡಳಿಗೆ ಮನದಟ್ಟಾದರೆ, ಅವಧಿ ವಿಸ್ತರಿಸುವ ಅವಶ್ಯಕತೆ ಇಲ್ಲ ಹಾಗೂ ಹೆಚ್ಚುವರಿ ದಾಖಲೆಗಳನ್ನು ಕೊಡುವಂತೆ ಮಾಡುವ ಅವಶ್ಯಕತೆ ಇಲ್ಲ. ಯಾವುದೇ ಕಾರಣಕ್ಕೂ ಸಂಬಂಧಪಟ್ಟ ವ್ಯಕ್ತಿಗೆ ಕಾರಣ ಕೇಳುವ ನೋಟೀಸ್ ಮುಟ್ಟಿಸದೆ ತೀರ್ಮಾನ ತೆಗೆದುಕೊಳ್ಳತಕ್ಕದ್ದಲ್ಲ. ನೋಟೀಸ್ ಮುಟ್ಟಿಸಿದ ಬಗ್ಗೆ ಸಂಯುಕ್ತ ಸಹಕಾರಿ ಮಂಡಳಿ ದೃಢೀಕರಿಸಿಕೊಳ್ಳಬೇಕು. ನೋಟೀಸ್ ನೀಡುವ ವಿಧಿ ವಿಧಾನಗಳನ್ನು ಉಪ ವಿಧಿಗಳಲ್ಲಿ ನಿಗದಿ ಪಡಿಸಿದಂತೆ ನೋಟೀಸ್ ಜಾರಿ ಮಾಡತಕ್ಕದ್ದು.

**2) ವಿಚಾರಣೆ ಸಮಯದಲ್ಲಿ ಮಂಡಳಿ ಸದಸ್ಯರ ಹಾಜರಾತಿ:-**

ಕಲಂ 25ರಡಿ ನೋಟೀಸ್ ನೀಡುವಾಗ, ಆ ಸದಸ್ಯ ಸಹಕಾರಿಯ ನಿರ್ದೇಶಕನೇ ಸಂಯುಕ್ತ ಸಹಕಾರಿ ಮಂಡಳಿಯ ಸದಸ್ಯನಾಗಿದ್ದರೆ, ಅಂತಹ ನಿರ್ದೇಶಕ, ಸಂಯುಕ್ತ ಸಹಕಾರಿ, ಆ ಸಹಕಾರಿಯ ವಿಷಯ ಚರ್ಚೆ ಮಾಡುವಾಗ ಸಭೆಯಲ್ಲಿ ಹಾಜರಿರತಕ್ಕದ್ದಲ್ಲ ಅಥವಾ ಆ ಸದಸ್ಯ ಸಹಕಾರಿ ಪ್ರತಿನಿಧಿಸುವ ಸಹಕಾರಿ ಬಗ್ಗೆ ಕ್ರಮ ಜರೂಗಿಸುವಾಗಲೂ ಇದೆ ನೀತಿ ಅನ್ವಯಿಸತಕ್ಕದ್ದು. ಈ ನೀತಿ ಕಲಂ 25,38 ಹಾಗೂ 38 ಎ ಅಡಿ ಕ್ರಮ ಜಾರೂಗಿಸಬೇಕಾದಲ್ಲಿಯೂ ಅನುಸರಿಸಬೇಕಾದ ನೀತಿ.

ಸಂಯುಕ್ತ ಸಹಕಾರಿ ಮಂಡಳಿಯಲ್ಲಿ ವಿಷಯ ಚರ್ಚೆಗೆ ಬಂದಾಗ ಆರೋಪಿತ ವ್ಯಕ್ತಿ, ಅಂತಹ ಪ್ರತಿನಿಧಿ ಹಾಜರಿರತಕ್ಕದ್ದಲ್ಲ. ಏಕೆಂದರೆ, ಅವರೇ ಆರೋಪಿಗಳಾಗಿರುತ್ತಾರೆ. ಇದನ್ನು ಸ್ವಯಂ ಸಂಬಂಧಪಟ್ಟ ಪ್ರತಿನಿಧಿಯೇ, ತನ್ನ ಬಗ್ಗೆ ತೀರ್ಮಾನಿಸಬೇಕು ಹಾಗೆ ಮಾಡದಿದ್ದರೆ, ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸಭೆಯಲ್ಲಿ ಹಾಜರಾಗತಕ್ಕದಲ್ಲವೆಂದು ನಿರ್ಬಂಧಿಸತಕ್ಕದ್ದು.

**3) ಆರೋಪಗಳ ರುಜುವಾತು:–**

ಸಂಯುಕ್ತ ಸಹಕಾರಿ ಮಂಡಳಿ ಸದಸ್ಯ ಸಹಕಕಾರಿಗಳ ಮೇಲೆ ಕಲಂ 25,38 ಮತ್ತ38ಎ ಅಡಿ ಕ್ರಮ ಜರೂಗಿಸಲು ಪ್ರಾರಂಭಕ್ಕೆ ಪೂರ್ವದಲ್ಲಿ ಈ ಕೇಲಕಂಡ ಮೂಲಗಳಿಂದ ವರದಿ ಸ್ವೀಕರಿಸಿರಬೇಕು.

ಎ) ಕ್ಷೇತ್ರ ಸಿಬ್ಬಂದಿ, ಸಹಕಾರಿ ತಪಾಸಣೆ, ವಿಚಾರಣೆ ಅಥವಾ ಬೇಟಿ ಕೊಟ್ಟಾಗ ನೀಡಿದ ವರದಿ

ಬಿ) ಕಲಂ53(7)ರಡಿ ಸಂಯುಕ್ತ ಸಹಕಾರಿ ಶಾಸನಾತ್ಮಕ ಪರಿವೀಕ್ಷಣೆಗೆ ಆದೇಶಿಸಿ ಪಡೆದ ವರದಿ

ಸಿ) ಕಲಂ 35ರಡಿ ಪಡೆದ ವಿಚಾರಣಾ ವರದಿ(ಈ ಅಧಿಕಾರವು ನಿಬಂಧಕರ ವ್ಯಾಪ್ತಿಗೆ ಬರುತ್ತಿದ್ದರೂ, ಆ ವರದಿಯಲ್ಲಿ ಕಾಣಿಸಿದ ಅವ್ಯವಹಾರಗಳ ಬಗ್ಗೆ ಇರುವ ವರದಿಯನ್ನು ಆಧರಿಸಿ ಕ್ರಮ ಜರೂಗಿಸಬಹುದು)

ಡಿ) ಕಲಂ 33ರಡಿ ಪಡೆದ ಲೆಕ್ಕ ತಪಾಸಣಾ ವರದಿ

ಈ ಮೇಲ್ಕಂಡ ವರದಿಗಳ ಆಧಾರದ ಮೇಲೆ ಕ್ರಮ ಜರೂಗಿಸುವಂತೆ ಸೂಚಿಸಿದ್ದರೆ, ಸಂಯುಕ್ತ ಸಹಕಾರಿ ತನ್ನ ಸಭೆಯಲ್ಲಿ ಚರ್ಚಿಸಿ ಕ್ರಮ ಜರುಗಿಸಲು ತೀರ್ಮಾನಿಸಬೇಕು. ಸಂಯುಕ್ತ ಸಹಕಾರಿಯ ಮುಖ್ಯ ಕಾರ್ಯನಿರ್ವಹಕ ಮೇಲ್ಕಂಡ ವರದಿಗಳನ್ನು ಪಡೆದಾಗ, ಮಂಡಳಿಗೆ ವಿಷಯ ಮಂಡಿಸಿ, ಏನು ಕ್ರಮ ಜರೂಗಿಸಬಹುದು ಎಂಬುದರ ವಿವರಣೆ ಜೊತೆ ಟಿಪ್ಪಣಿ ನೀಡಿದಾಗ ಮಾತ್ರ ಸಂಯುಕ್ತ ಸಹಕಾರಿ ಮಂಡಳಿ ಸಭೆಯಲ್ಲ ಕ್ರಮ ಜರೂಗಿಸತಕ್ಕದ್ದು. ಮುಖ್ಯಕಾರ್ಯನಿರ್ವಾಹಕನ ಗಮನಕ್ಕೆ ಬಂದ ವರದಿಗಳ ಮೇಲೆ ಸಂಯುಕ್ತ ಸಹಕಾರಿ ಗಮನಕ್ಕೆ ತರುವುದು ಅವನ ಜವಾಬ್ದಾರಿ ಮತ್ತಿ ಕರ್ತವ್ಯ. ವರದಿಗಳ ಬಂದ ನಂತರವೂ ಮುಖ್ಯ ಕಾರ್ಯ ನಿರ್ವಹಕನು ಸಂಯುಕ್ತ ಸಹಕಾರಿ ಮಂಡಳಿಯ ಗಮನಕ್ಕೆ ತರದಿದ್ದರೆ ಅದ ಕರ್ತವ್ಯ ಚ್ಯುತಿ ಅಗುತ್ತದೆ.

**4) ಮಂಡಳಿಯ ಸದಸ್ಯರೆ ವಿಷಯಗಳನ್ನು ಪ್ರಸ್ತಾಪಿಸಬಹುದೆ:–**

ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರ ಗಮನಕ್ಕೆ ವಿಷಯ ಮಂಡನೆಯಾದಾಗ ಮಾತ್ರ ಹಾಗೂ ಮಂಡಳಿಯ ಸಭೆಯಲ್ಲಿ ವಿಮರ್ಷಿಸಿ ತೀರ್ಮಾನತೆಗೆದುಕೊಳ್ಳಬಹುದು. ವ್ಯಯಕ್ತಿಕ ಹಿತಾಸಕ್ತಿಯಿಂದ ಮಂಡಳಿ ಸಭೆಯಲ್ಲಿ ಇಂತಹ ವಿಷಯಗಳನ್ನು ಪ್ರಸ್ತಾಪಿಸತಕ್ಕದ್ದಲ್ಲ. ಏಕೆಂದರೆ ಸಂಯುಕ್ತ ಸಹಕಾರಿ ಒಂದು ಶಾಸನತ್ಮಕ ಸಂಸ್ಥೆ, ವ್ಯಯಕ್ತಿಕ ಹಿತಾಸಕ್ತಿಗೆ ಅವಕಾಶ ಇರುವುದಿಲ್ಲ. ಆದರೆ ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿ ಸಲ್ಲಿಕೆಯಾದ ಬಗ್ಗೆ ಸಂಯುಕ್ತ ಸಹಕಾರಿ ಮಂಡಳಿ ಆ ವರದಿ ಆದಾರದ ಮೇಲೆ ಅನುಪಾಲನಾ ವರದಿಯ ಬಗ್ಗೆ ಚರ್ಚಿಸಬಹುದು ಮತ್ತು ವಿವರಗಳನ್ನು ಪಡೆಯಬಹುದು.

**5) ಸಂಯುಕ್ತ ಸಹಕಾರಿ ಪರಿಶೀಲಿಸಬೇಕಾದ ಅಂಶಗಳೇನು?**

ಸಂಯುಕ್ತ ಸಹಕಾರಿ ಮಂಡಳಿಗೆ ವಿಷಯ ಮಂಡನೆ ಮಾಡಿದಾಗ ಪ್ರತಿಯೊಂದು ಆರೋಪದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಧೃಡಿಕರಿಸಿಕೊಳ್ಳತಕ್ಕದ್ದು ಆರೋಪ ಸಾಬೀತಾದ ಬಗ್ಗೆ ವಿಚಾರಣೆ, ತಪಾಸಣೆ, ಪರಿವಿಕ್ಷಣೆ ಮತ್ತು ಲೆಕ್ಕ ಪರಿಶೋದನೆ ಸಮಯದಲ್ಲಿ ಸಂಬಂಧಪಟ್ಟ ವ್ಯಕ್ತಿಗಳಿಗೆ ನೋಟೀಸ್ ನೀಡಿದ ನಂತರ ವರದಿಯಲ್ಲಿ ತಪ್ಪಿತಸ್ತನೆಂದು ನಮೂದಾದ ಬಗ್ಗೆ ವಿಮರ್ಶಿಸಿ ಸಮರ್ಪಕವೆಂದ ನಂತರವೇ ತೀರ್ಮಾನ ತೆಗೆದುಕೊಳ್ಳಬೇಕು.

ಉದಾಹರಣೆಗೆ ಸದಸ್ಯ ಸಹಕಾರಿ ನಿರ್ದೇಶಕರು, ಸತತವಾಗಿ ಮೂರು ಆಡಳಿತ ಮಂಡಳಿಯ ಸಭೆಗಳಿಗೆ ಗೈರುಹಾಜರಾದಾಗ ಅಂತಹ ವ್ಯಕ್ತಿಗಳನ್ನ ಅನರ್ಹತೆಗೊಳಿಸಲು ಪರಿಶೀಲಿಸಬೇಕಾದ ಅಂಶಗಳು ಈ ಕೆಳಕಂಡಂತೆ ಇರತಕ್ಕದ್ದು.

ಆಡಳಿತ ಮಂಡಳಿ ಸಭೆಗಳನ್ನು ಕರೆಯಲು ಸಂಬಂದಪಟ್ಟ ಸಹಕಾರಿಯ ಉಪ ವಿಧಿಗಳಲ್ಲಿ ನೋಟೀಸ್ ಜಾರಿ ಮಾಡುವ ವಿಧಾನವನ್ನು ನಿಗದಿಪಡಿಸಿರುತ್ತದೆ. ಅದೇರೀತಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರಲ್ಲಿಯೂ ವಿಧಾನಗಳನ್ನು ನಿಗಧಿಪಡಿಸಿದೆ. ಈ ಉಪವಿಧಿಗಳನ್ವಯ ನೀಟೀಸ್ ನೀಡಲಾಗಿದೆಯೇ ಎಂಬುದನ್ನ ಪ್ರಾರಂಭಿಕವಾಗಿ ಪರಿಶೀಲಿಸಬೇಕು. ಎರಡನೆಯದಾಗಿ ಆ ಸಭಾ ನೋಟೀಸನ್ನು ನಿರ್ದೇಶಕರಿಗೆ ಮುಟ್ಟಿಸಿದ ಬಗ್ಗೆ ಧೃಡೀಕರಿಸಿಕೊಳ್ಳತಕ್ಕದ್ದು. ಸಭೆ ಪ್ರಾರಂಭವಾಗುವ ಸಮಯದಲ್ಲಿ ಹಾಜರಿದ್ದ ನಿರ್ದೇಶಕರ ಸಹಿ ಪಡೆಯುವ ಪುಸ್ತಕವನ್ನು ಪರಿಶೀಲಿಸಬೇಕು. ಸಹಿ ಮಾಡಿದ ಸದಸ್ಯರ ಮತ್ತು ಗೈರುಹಾಜರಾದ ಸದಸ್ಯರ ಹೆಸರುಗಳಲ್ಲಿ ಸಂಬಂದಪಟ್ಟ ವ್ಯಕ್ತಿಯ ಸಹಿ ಇಲ್ಲದ ಬಗ್ಗೆ ದೃಡೀಕರಿಸಿಕೊಳ್ಳತಕ್ಕದ್ದು. ಸಂಬಂದಪಟ್ಟ ಸದಸ್ಯರು ಹಾಜರಾತಿಗೆ ವಿನಾಯತಿ ಕೇಳಿ ಅರ್ಜಿಸಲ್ಲಿಸಿದ್ದರೆ ಅದನ್ನು ಒಪ್ಪಲಾಗಿದಿಯೇ ಅಥವಾ ತಿರಸ್ಕರಿಸಲಾಗಿದೆಯೇ ಎಂಬುದನ್ನು ದೃಡೀಕರಿಸಿಕೊಳ್ಳತಕ್ಕದ್ದು. ಗೈರುಹಾಜರಾತಿಗೆ ವಿನಾಯತಿ ಪಡೆದರೆ ಅದನ್ನು ಗೈರುಹಾಜರು ಎಂದು ಪರಿಗಣಿಸತಕ್ಕದ್ದಲ್ಲ. ಸಭಾ ನಡವಳಿಕೆಗಳ ನಂತರ ಸಹಿಮಾಡುವ ವ್ಯವಸ್ಥೆ ಇದ್ದರೆ ಅದರಲ್ಲಿ ಸಹಿ ಇದ್ದ ಬಗ್ಗೆ ಅಥವಾ ಇಲ್ಲದ ಬಗ್ಗೆ ದೃಡೀಕರಿಸಿಕೊಳ್ಳತಕ್ಕದ್ದು. ಸಭ ನಡವಳಿಕೆಗಳನ್ನು ಏಳು ದಿವಸದೊಳಗಾಗಿ ಅಂತಿಮಗೊಳಿಸಿ ಪ್ರತಿ ಸದಸ್ಯನಿಗೂ ಮುಟ್ಟಿಸಿದ ಬಗ್ಗೆ ಹಾಗೂ ಆ ಮುಟ್ಟಿಸಿದ ನಂತರದ ಮೂರು ದಿವಸದಒಳಗಾಗಿ ಸದಸ್ಯರು ಆಕ್ಷೇಪಗಳನ್ನು ಲಿಖಿತವಾಗಿ ದಾಖಲಿಸಿದ್ದರ ಬಗ್ಗೆ ದೃಡೀಕರಿಸಿಕೊಳ್ಳತಕ್ಕದ್ದು. ಸಂಯುಕ್ತ ಸಹಕಾರಿ ಮಂಡಳಿ ಈ ಮೇಲ್ಕಂಡ ಅಂಶಗಳನ್ನು ದೃಡೀಕರಿಸಿದ ನಂತರ ಸಂಬಂದಪಟ್ಟ ಸದಸ್ಯಸಹಕಾರಿಯ ನಿರ್ದೇಶಕನಿಗೆ ನೋಟೀಸ್ ನೀಡುವಾಗ ಮೇಲ್ಕಂಡ ಅಂಶಗಳ ಆಧಾರದಮೇಲೆ ವಿಚಾರಣೆಗೆ ದಿನಾಂಕವನ್ನು ನಿಗದಿಪಡಿಸತಕ್ಕದ್ದು. ಸಂಬಂದಪಟ್ಟ ಸದಸ್ಯ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಗೆ ಮೇಲ್ಕಂಡ ಎಲ್ಲಾ ದಾಖಲೆಗಳಸಮೇತ ವಿಚಾರಣಾ ಸಮಯದಲ್ಲಿ ಹಾಜರಿರುವಂತೆ ನಿರ್ದೇಶಿಸತಕ್ಕದ್ದು. ಈ ದಾಖಲೆಗಳನ್ನು ಮೂಲ ದಾಖಲೆಗಳ ಜೊತೆ ಮರು ಪರಿಶೀಲಿಸಿ ಅನರ್ಹತೆಗೊಳಪಡಿಸುವುದರ ಬಗ್ಗೆ ಸಂಯುಕ್ತ ಸಹಕಾರಿ ಮಂಡಳಿ ತೀರ್ಮಾನಿಸತಕ್ಕದ್ದು.

6) ಸದಸ್ಯ ಸಹಕಾರಿಗಳ ನಿರ್ದೇಶಕರನ್ನ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಅನರ್ಹತೆಗೊಳಪಡುವ ಬಗ್ಗೆ ಭಾರತದ ಸಂವಿದಾನದ, 97ನೇ ಸಂವಿದಾನ ತಿದ್ದುಪಡಿ 2011ರ ನಂತರ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಗೆ ತಿದ್ದುಪಡಿಮಾಡಿ, ಅದರಲ್ಲಿ ಯಾವುದೇ ಸಹಕಾರಿಯ ಮಂಡಳಿ ಈ ಕೆಳಕಂಡ 4 ವಿಷಯಗಳ ಬಗ್ಗೆ ನಿಗದಿಪಡಿಸಿದ ಅವಧಿಯೊಳಗೆ ಸೂಕ್ತಕ್ರಮ ಕೈಗೊಳ್ಳದಿದ್ದರೆ ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ

ಪ್ರತಿಯೊಬ್ಬ ನಿರ್ದೇಶಕನನ್ನು ಜವಾಬ್ದಾರನನ್ನಾಗಿಸಲು ಅವಕಾಶ ಕಲ್ಪಿಸಿದೆ. ಅದರಂತೆ

1. ಲೆಕ್ಕ ತಪಾಸಣಾ ವರದಿಯನ್ನು ಸೆಪ್ಟೆಂಬರ್ 1ರೊಳಗಾಗಿ ಪಡೆಯದಿದ್ದರೆ.

2. ವಾರ್ಷಿಕ ಸಾಮಾನ್ಯ ಸಭೆಯನ್ನ ಸೆಪ್ಟೆಂಬರ್ 25ರೊಳಗಾಗಿ ನಡೆಸದಿದ್ದರೆ.

3. ಆಡಳಿತ ಮಂಡಳಿಯ ಅವಧಿ ಮುಕ್ತಾಯವಾಗುವ ಪೂರ್ವದಲ್ಲಿ ಹೊಸ ಮಂಡಳಿ ರಚನೆಗೆ ಚುನಾವಣಾ ಪ್ರಾಧಿಕಾರಕ್ಕೆ ಸಹಕಾರ ನೀಡದಿದ್ದರೆ

4. ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗಳಿಗೆ ನಿಗದಿಪಡಿಸಿದ ತಃಖ್ತೆಗಳನ್ನ ಸಲ್ಲಿಸದಿದ್ದರೆ ಅಂತಹ ಸದಸ್ಯ ಸಹಕಾರಿಯ ಮಂಡಳಿಯ ನಿರ್ದೇಶಕರು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಅನರ್ಹತೆಗೊಳಗಾಗುತ್ತಾರೆಂದು ನಿಗದಿಪಡಿಸಿದೆ. ಈ ಮೇಲ್ಕಂಡ ಅನರ್ಹತೆಗೊಳಪಟ್ಟ ವ್ಯಕ್ತಿಗಳನ್ನು ಅನರ್ಹತೆಗೊಳಿಸುವಾಗ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದ ವ್ಯಕ್ತಿಗಳ ಮೇಲೆ ಅನುಸರಿಸುವ ನೀತಿಯನ್ನೇ ಇಂತಹ ಪ್ರಕರಣಗಳನ್ನು ನಿರ್ಧರಿಸಲು ತೀರ್ಮಾನಿಸತಕ್ಕದ್ದು.

**7) ಶಿಸ್ತು ಪ್ರಕ್ರಿಯೆ ಪ್ರಾರಂಭವಾಗುವುದು ಯಾವಾಗ?**

ಪಾವುದೇ ಸದಸ್ಯ ಸಹಕಾರಿಯಲ್ಲಿ ನಡೆದ ಅವ್ಯವಹಾರದಲ್ಲಿ ಕ್ರಮ ಪ್ರಾರಂಭಿಸುವಾಗ ಸಂಯುಕ್ತ ಸಹಕಾರಿ ಮಂಡಳಿ ತನ್ನ ಸಭೆಯಲ್ಲಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ಸ್ಪಷ್ಟ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ಸ್ಪಷ್ಟೀಕರಣಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ತೀರ್ಮಾನಿಸಬೇಕು ಮತ್ತು ಉತ್ತರ ನೀಡುವ ಅವಧಿ ಮತ್ತು ಅವಧಿ ವಿಸ್ತರಿಸುವ ಅಧಿಕಾರವನ್ನು ನೀಡಬೇಕು. ವ್ಯವಸ್ಥಾಪಕ ನಿರ್ದೇಶಕರು ಯಾವ ದಾಖಲೆಗಳನ್ನು ಪಡೆಯಬೇಕೆಂದು ಸಂಯುಕ್ತ ಸಹಕಾರಿ ತೀರ್ಮಾನಿಸಬೇಕು. ಸಂಬಂಧಪಟ್ಟ ಸದಸ್ಯ ಸಹಕಾರಿಯ ಮಂಡಳಿಯ ಸದಸ್ಯರಿಂದ ಅಥವಾ ನಿರ್ದೇಶಕರಿಂದ ಉತ್ತರ ಪಡೆದು ಸಂಯುಕ್ತ ಸಹಕಾರಿ ದಾಖಲೆಗಳ ಆಧಾರದಮೇಲೆ, ಸಂಬಂದಪಟ್ಟ ವ್ಯಕ್ತಿಗಳು ನೀಡಿದ ಸಮಜಾಯಿಸಿ ಬಗ್ಗೆ ಟಿಪ್ಪಣಿ ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಅಭಿಪ್ರಾಯಮಂಡಿಸಿದಾಗ ಕ್ರಮಜರುಗಿಸಿದರೆ ಏನಾಗುತ್ತದೆ ಅಥವಾ ಕ್ರಮ ಜರುಗಿಸದಿದ್ದರೆ ಏನಾಗುತ್ತದೆ ಎಂಬುದನ್ನು ಲಿಖಿತವಾಗಿ ದಾಖಲಿಸಿ ಟಿಪ್ಪಣಿನೀಡಬೇಕು.

ಸಂಯುಕ್ತ ಸಹಕಾರಿ ಈಗಾಗಲೇ ತೆಗೆದುಕೊಂಡ ಕೆಲವು ಪ್ರಕರಣಗಳು

1. ಶಿವಯೋಗಿ ಅಕ್ಕಮಹದೇವಿ ಸೌಹಾರ್ದಸಹಕಾರಿ ಬೀದರ್.
2. ಶ್ರೀ ಧನಲಕ್ಷ್ಮಿ ಸೌಹಾರ್ದ ಸಹಕಾರಿ ಕಲ್ಬುರ್ಗಿ.
3. ವಿಶ್ವಕರ್ಮ ಸೌಹಾರ್ದ ಸಹಕಾರಿ ತೀರ್ಥಹಳ್ಳಿ.
4. ಶೃತಿ ಸೌಹಾರ್ದ ಸಹಕಾರಿ ಬೆಂಗಳೂರು.
5. ವಸಿಷ್ಠ ಸೌಹಾರ್ದ ಸಹಕಾರಿ ಬೆಂಗಳೂರು.
6. ಶ್ರೀ ಪದ್ಮಶ್ರೀ ಸೌಹಾರ್ದ ಸಹಕಾರಿ ಭಟ್ಕಳ.

ಈ ಪ್ರಕರಣಗಳಲ್ಲಿ ವರದಿ ಬಂದಕೂಡಲೇ ಸಂಯುಕ್ತ ಸಹಕಾರಿ ಕಛೇರಿ ಕಾರಣ ಕೇಳುವ ನೋಟೀಸ್ ಹೊರಡಿಸಿರುತ್ತದೆ ಮತ್ತು ಉತ್ತರ ಪಡೆದ ನಂತರ ಶಾಸನಾತ್ಮಕ ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ಮಂಡಳಿಗೆ ಮಂಡಿಸಲಾಗಿದೆ. ಇದು ಸರಿಯಾದ ಕ್ರಮವಲ್ಲ. ಪ್ರಾರಂಭಿಕ ಹಂತದಲ್ಲಿ ಸಂಯುಕ ್ತಸಹಕಾರಿ ಮಂಡಳಿಯ ಗಮನಕ್ಕೆ ಬಂದಿರವುದರ ಬಗ್ಗೆ ಉಲ್ಲೇಖವಿಲ್ಲ. ಸಂಯುಕ್ತ ಸಹಕಾರಿ ಈ ಹಿಂದೆ ಒಂದು ಸಾಮಾನ್ಯ ಠರಾವಿನ ಮೂಲಕ ವರದಿಗಳು ಬಂದ ನಂತರ ವ್ಯವಸ್ಥಾಪಕ ನಿರ್ದೇಶಕರೇ ನೋಟೀಸ್ ನೀಡಿ ಲಿಖಿತ ವಿವರಣೆ ಪಡೆಯಲು ಅಧಿಕಾರ ನೀಡಿದ್ದರೇ, ಅದು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧ.ಏಕೆಂದರೆ ಪ್ರತಿಯೊಂದು ಪ್ರಕರಣಕ್ಕೂ ಕಾನೂನಿನಲ್ಲಿ ನಿಗದಿಪಡಿಸಿದ ಪ್ರಾಧಿಕಾರವೇ ಶಾಸನಾತ್ಮಕ ಅಧಿಕಾರ ಚಲಾಯಿಸುವ ಶಕ್ತಿಹೊಂದಿದೆ. ಈ ಅಧಿಕಾರವನ್ನ ಮರುಹಂಚಿಕೆ ಮಾಡುವ ಅಧಿಕಾರ ಕಾನೂನಿನಲ್ಲಿಯೇ ನೀಡಬೇಕೇ ಹೊರತು ಒಂದು ಆಡಳಿತಾತ್ಮಕ ಅಥವಾ ಠರಾವಿನ ಮೂಲಕ ತೀರ್ಮಾನಿಸತಕ್ಕದ್ದಲ್ಲ.

**ಸಂಯುಕ್ತ ಸಹಕಾರಿ ನಿರ್ದೇಶಕರು ಇಂತಹ ಪ್ರಕರಣಗಳಲ್ಲಿ ಗುಪ್ತತೆ ಕಾಪಾಡುವುದು ಅವಶ್ಯಕ:–**

ಸಂಯುಕ್ತ ಸಹಕಾರಿ ಮಂಡಳಿ ಸದಸ್ಯ ಸಹಕಾರಿಗಳಿಂದ ಆಯ್ಕೆಯಾದ ನಿರ್ದೇಶಕರು. ಇಂತಹ ನಿರ್ದೇಶಕರು ಸಂಯುಕ್ತ ಸಹಕಾರಿ ಮಂಡಳಿಯ ಸದಸ್ಯರಾದಾಗ, ಅಂತಹ ನಿರ್ದೇಶಕರು ಸಂಯುಕ್ತ ಸಹಕಾರಿ ಒಂದು ಶಾಸನಾತ್ಮಕ ಸಂಸ್ಥೆ ಹಾಗೂ ಈ ಸಂಸ್ಥೆಯು ಶಾಸನಾತ್ಮಕ ಅಧಿಕಾರ ಚಲಾಯಿಸುವಾಗ ಪ್ರತಿ ಸಂಯುಕ್ತ ಸಹಕಾರಿ ನಿರ್ದೇಶಕನೂ ಗುಪ್ತತೆಯನ್ನ ಕಾಪಾಡುವುದು ಅತೀ ಅವಶ್ಯಕ. ಈ ನೀತಿ ಸ್ವಾಭಾವಿಕ ನೀತಿ ಅನ್ವಯ ಪ್ರತಿ ಸಂಯುಕ್ತ ಸಹಕಾರಿ ಮಂಡಳಿ ಸದಸ್ಯನು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳಿಗೂ ನಿರ್ದೇಶಕರನ್ನು ಹೊರತುಪಡಿಸಿ ಮತ್ತಾರಿಗೂ ಇಂತಹ ವಿಷಯ ತಿಳಿಸತಕ್ಕದ್ದಲ್ಲ. ಕೆಲವು ಸಂದರ್ಭಗಳಲ್ಲಿ ಸಂಯುಕ್ತ ಸಹಕಾರಿಯ ಮಂಡಳಿಯ ಸದಸ್ಯರು ಪ್ರತಿನಿಧಿಸುವ ಸದಸ್ಯ ಸಹಕಾರಿಯ ಮೇಲೆ ಕಲಂ.25, 38 ಅಥವಾ 38ಎ ಅಡಿ ಕ್ರಮ ಜರುಗಿಸುವಾಗ ಇಂತಹ ಮಾಹಿತಿಯನ್ನು ಸಂಬಂದಪಟ್ಟ ವ್ಯಕ್ತಿಗಳು ಸದಸ್ಯ ಸಹಕಾರಿಗಾಗಲಿ ಅಥವಾ ಮತ್ತಾವುದೇ ವ್ಯಕ್ತಿಗಾಗಲಿ ತಿಳಿಸತಕ್ಕದ್ದಲ್ಲ. ಅಂತಹ ಸಂದರ್ಭಗಳಲ್ಲಿ ಸಂಯುಕ್ತ ಸಹಕಾರಿಯು ಅಂತಹ ನಿರ್ದೇಶಕ ಗುಪ್ತತೆಯನ್ನು ಕಾಪಾಡಿಕೊಂಡಿಲ್ಲವೆಂದು, ಅಂತಹ ವ್ಯಕ್ತಿಗಳ ಮೇಲೆ ಪರಿಶೀಲಿಸುವ ಅಧಿಕಾರ ಸಂಯುಕ್ತ ಸಹಕಾರಿ ಮಂಡಳಿಗೆ ಇದೆ. ಸಂಯುಕ್ತ ಸಹಕಾರಿ ನಿರ್ದೇಶಕರ ಮಂಡಳಿಯು ಪ್ರತಿನಿಧಿಸುವ ಸದಸ್ಯ ಸಹಕಾರಿಯ ಮೇಲೆ ಕ್ರಮ ಜರುಗಿಸುವಾಗ ಆ ಸಹಕಾರಿಯನ್ನು ಪ್ರತಿನಿಧಿಸುವ ಸಹಕಾರಿಯ ಮಂಡಳಿ ನಿರ್ದೇಕನು ಗೈರುಹಾಜರಾಗತಕ್ಕದ್ದು. ಅಥವಾ ಸಂಯುಕ್ತ ಸಗಹಕಾರಿ ಅಧ್ಯಕ್ಷರು ಸಭಾಧ್ಯಕ್ಷರಾಗಿ ಅಂತಹ ಮಂಡಳಿ ಸದಸ್ಯರನ್ನು ಸಭೆಯಿಂದ ನಿರ್ಗಮಿಸಬೇಕೆಂದು ಸೂಚಿಸತಕ್ಕದ್ದು. ಇಂತಹ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಸಂಯುಕ್ತ ಸಹಕಾರಿ ಮಂಡಳಿಯ ಸದಸ್ಯ ಮತ್ತೊಬ್ಬ ಸದಸ್ಯನಿಗೆ ಅಥವಾ ಅಧ್ಯಕ್ಷನಿಗೆ ಅಥವಾ ವ್ಯವಸ್ಥಾಪಕ ನಿರ್ದೇಶಕರಿಗೆ ಒತ್ತಡಮಾಡತಕ್ಕದ್ದಲ್ಲ. ಆ ರೀತಿ ಒತ್ತಡ ತಂದದ್ದನ್ನು ಸಂಬಂದಪಟ್ಟ ವ್ಯಕ್ತಿಗಳು ಸಂಯುಕ್ತ ಸಹಕಾರಿ ಮಂಡಳಿ ಗಮನಕ್ಕೆ ತಂದರೆ, ಆ ಬಗ್ಗೆ ಸಂಕ್ಷಿಪ್ತ ವಿಚಾರಣೆ ನಡೆಸಿ ಒತ್ತಡ ತಂದ ನಿರ್ದೇಶಕರ ಬಗ್ಗೆ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ ಸಂಯುಕ್ತ ಸಹಕಾರಿ ಮಂಡಳಿ ನಿರ್ಧರಿಸತಕ್ಕದ್ದು.

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 33
Licensed to post without Prepayment License No. PMG BG/WPP-384/2023-2025.



### ಆಡಳಿತ ಮಂಡಳಿ ರದ್ದತಿ ಮತ್ತು ವಿಶೇಷಾಧಿಕಾರಿಗಳ ನೇಮಕ:–

ಪ್ರಾರಂಭದಲ್ಲಿ ನೀಡಿರುವ ಕಲಂ. 38ರ ಉಪಕಲಂ.1ರಲ್ಲಿ 8 ಕಾರಣಗಳ ಆಧಾರದ ಮೇಲೆ ಸದಸ್ಯ ಸಹಕಾರಿಗಳ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿ ನೇಮಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡದೆ.

97ನೇ ಸಂವಿಧಾನ ತಿದ್ದುಪಡಿ ನಂತರ ಈ ಕಲಂಗೆ ಮಾರ್ಪಾಡುಮಾಡಿ ಯಾವುದೇ ಸದಸ್ಯ ಸಹಕಾರಿಯ ಮಂಡಳಿಯನ್ನು ರದ್ದುಪಡಿಸಿದ ನಂತರ ಆಡಳಿತಾಧಿಕಾರಿ ಅವಧಿಯನ್ನು 6 ತಿಂಗಳಿಗೆ ಸೀಮಿತಗೊಳಿಸಿದೆ. ಈ 6 ತಿಂಗಳ ಅವಧಿಯಲ್ಲಿ ಆಡಳಿತ ಮಂಡಳಿ ನಿರ್ವಹಿಸುತ್ತಿದ್ದ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಅಧಿಕಾರವನ್ನು ಆಡಳಿತ ಅಧಿಕಾರಿ ನಿರ್ವಹಿಸತಕ್ಕದ್ದು(ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂದಪಟ್ಟಂತೆ ಅವಧಿಯನ್ನು 1 ವರ್ಷದ ಅವಧಿಗೆ ಅಡಳಿತಾಧಿಕಾರಿ ನೇಮಿಸಲು ಅಧಿಕಾರ ನೀಡಿದೆ ಹಾಗೂ ರಿಜರ್ವ್‌ಬ್ಯಾಂಕಿನ ಸೂಚನೆಯಂತೆ ನಿಯಂತ್ರಿಸುತ್ತದೆ). 97ನೇ ಸಂವಿಧಾನ ತಿದ್ದುಪಡಿಯಲ್ಲಿ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಾಧಿಕಾರಿನ್ನು ನೇಮಿಸುವುದರ ಬಗ್ಗೆ ಅವಕಾಶ ಕಲ್ಪಿಸಿದ್ದರೂ, ಈ ಬಗ್ಗೆ ಅಡಳಿತ ಮಂಡಳಿಯನ್ನು ರದ್ದುಪಡಿಸುವುದರ ಜೊತೆಗೆ ಅಮಾನತ್ತಿನಲ್ಲಿಡಲೂ ಸಹ ಅವಕಾಶ ಕಲ್ಪಿಸಿದೆ. ಅಮಾನತ್ತಿನಲ್ಲಿಟ್ಟ ಆಡಳಿತ ಮಂಡಳಿ 6 ತಿಂಗಳ ಅವಧಿಗೆ ಕಾರ್ಯ ನಿರ್ವಹಿಸದೇ ಇದ್ದರೂ ಅವರ ನಿರ್ದೇಶಕತನ ಅಮಾನತ್ತಿನಲ್ಲಿಡಲಾಗಿದ್ದು, ಆ ಅವಧಿಯ ನಂತರ ಅದೇ ಆಡಳಿತ ಮಂಡಳಿ ಪುನಃ ಅಧಿಕಾರ ವಹಿಸಿಕೊಳ್ಳುವ ಅವಕಾಶ ಕ್ಲಪಿಸಿದೆ. ಈ ಬಗ್ಗೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯ ಯಾವುದೇ ತೀರ್ಮಾನ ನೀಡಿಲ್ಲ ಅಂದರೆ ಕಾಯಿದೆ ಕಲಂ.38 ಉಪಕಲಂ.1ರ ಅನ್ವಯ ಜವಾಬ್ದಾರಿ ನಿರ್ವಹಿಸದೇ ಇದ್ದರೆ ಮಂಡಳಿಯನ್ನು ರದ್ದುಪಡಿಸಿ ಹೊಸ ಮಂಡಳಿ ರಚಿಸತಕ್ಕದ್ದೆಂದು ಕಲ್ಪಿಸಿದ ಅವಕಾಶಕ್ಕೆ ಮಾರ್ಪಾಡುಮಾಡಿ ಅಮಾನತ್ತಿನಲ್ಲಿಡತಕ್ಕದ್ದೆಂದು ಅವಕಾಶ ಕಲ್ಪಿಸಿದೆ. ಅಂದರೆ ಕಲಂ.38(1)ರಲ್ಲಿ ಆಡಳಿತ ಮಂಡಳಿ ತಪ್ಪುಮಾಡಿದಾಗ ತಪ್ಪನ್ನು ಸರಿಪಡಿಸಲು ಕ್ರಮ ಜರುಗಿಸದಿದ್ದ ಮಂಡಳಿಯನ್ನು ಮತ್ತೆ ಮರುಸ್ಥಾಪಿಸಿದರೆ, ಅದೇ ಅವ್ಯವಹಾರದ ಮೇಲೆ ಅದೇ ಆಡಳಿತ ಮಂಡಳಿ ಕ್ರಮ ಜರುಗಿಸದಿದ್ದರೆ ಮತ್ತೊಮ್ಮೆ ಕ್ರಮ ಜರುಗಿಸಬಹುದೇ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. 6 ತಿಂಗಳ ಅವಧಿಗೆ ನೇಮಕವಾದ ಆಡಳಿತಾಧಿಕಾರಿ ಹೊಸ ಮಂಡಳಿ ರಚಿಸುವುದರ ಜೊತೆಗೆ, ಆಡಳಿತ ಮಂಡಳಿ ನಿರ್ವಹಿಸುತ್ತಿದ್ದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾನೆ. ಅದೇ ಅವಧಿಯಲ್ಲಿ ಅಮಾನತ್ತಿನಲ್ಲಿಟ್ಟ ಆಡಳಿತ ಮಂಡಳಿ ಮತ್ತೇ ಆಡಳಿತ ವಹಿಸಿಕೊಂಡಾಗ ಅವ್ಯವಹಾರಗಳು ಮುಂದುವರಿಯಲು ಅವಕಾಶ ನೀಡಿದಂತಾಗುವುದಿಲ್ಲವೇ? ಈ ಬಗ್ಗೆ ಉಚ್ಚ ಅಥವಾ ಶ್ರೇಷ್ಠ ನ್ಯಾಯಾಲಯ ಮಧ್ಯ ಪ್ರವೇಶಮಾಡುವುದು ಅವಶ್ಯಕ. ಈ ಅಮಾನತ್ತು ಎಂಬ ಪದವನ್ನು ಸಂವಿದಾನದಲ್ಲಿ ರಚನೆಯಾದ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಅನ್ವಯಿಸುತ್ತಿರುವ ನೀತಿಯನ್ನೇ ಅಳವಡಿಸಿಕೊಳ್ಳಲಾಗಿದೆ. ಆದರೆ ಸಹಕಾರಿ ಸಂಸ್ಥೆಗಳು ಆರ್ಥಿಕ ಸಂಸ್ಥೆಗಳು ಹಾಗೂ ಲಾಭನಷ್ಟ ಆಧಾರದ ಮೇಲೆ ನಿರ್ವಹಿಸಬೇಕಾದ ಜವಾಬ್ದಾರಿಗಳನ್ನ ಸಹಕಾರಿ ಸಂಸ್ಥೆಗಳು ಅನುಸರಿಸಬೇಕು. ಲೋಕ ಸಭೆ ಅಥವಾ ವಿಧಾನಸಭೆ ಲಾಭ–ನಷ್ಟಗಳ ಆಧಾರದ ಮೇಲೆ ನಡೆಯುವುದಿಲ್ಲ ಮತ್ತು ವಯಕ್ತಿಕವಾಗಿ ಯಾವುದೇ ತೀರ್ಮಾನವನ್ನ ತೆಗೆದುಕೊಳ್ಳುವ ಅಧಿಕಾರ ಇರುವುದಿಲ್ಲ. ಆದ್ದರಿಂದ ಅಂತಹ ಲೋಕಸಭೆ ಮತ್ತು ವಿಧಾನಸಭೆ ಸದಸ್ಯರಿಗೆ ರಾಜ್ಯದ ಆರ್ಥಿಕ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇರುವುದಿಲ್ಲ.

ಕಲಂ. 38ಎ ಅನ್ವಯ ಅನರ್ಹತೆ, ರಾಜಿನಾಮೆ, ಮರಣ, ಅಥವಾ ತೆಗೆದುಹಾಕಿದ ಮಂಡಳಿ ಸದಸ್ಯರ ಅಗತ್ಯವಿರುವ ಕೋರಂ ಆಗದಿದ್ದಾಗ ವಿಷೇಶಾಧಿಕಾರಿಯನ್ನು ನೇಮಿಸಲು ಮತ್ತು 6 ತಿಂಗಳು ಮೀರದಂತೆ ವಿಷೇಶಾಧಿಕಾರಿ ನೇಮಿಸಲು ಅವಕಾಶ ಕಲ್ಪಿಸಿದೆ. ಈ ವಿಷೇಶಾಧಿಕಾರಿಗೆ ಹೊಸದಾಗಿ ಚುನಾವಣೆ ಮಾಡುವ ಜವಬ್ದಾರಿ ನಿಗಧಿಪಡಿಸಿದ್ದರೂ ಆ ಮಂಡಳಿ ರಚನೆಯಾಗುವ ತನಕ ದಿನನಿತ್ಯದ ವ್ಯವಹಾರ ನೋಡಿಕೊಳ್ಳಲು ಕಾನೂನಿನಲ್ಲಿ ಸ್ಪಷ್ಠ ಅವಕಾಶ ಇಲ್ಲದೇ ಇದ್ದರೂ ಆಢಳಿತಾತ್ಮಕವಾಗಿ ವಿಷೇಶ ಅಧಿಕಾರಿ ದಿನನಿತ್ಯದ ವ್ಯವಹಾರಗಳನ್ನ ನೋಡಿಕೊಳ್ಳುವ ಅವಕಾಶವನ್ನು ಹೊಂದಿದ್ದಾನೆ. ಆದರೆ ಹೊಸ ಯೋಜನೆಗಳು ಅಥವಾ ತಾತ್ವಿಕ ತೀರ್ಮಾನಗಳನ್ನು ತೆಗೆದುಕೊಳ್ಳುವ ಅವಕಾಶ ಇರುವುದಿಲ್ಲ. ಆದರೆ ರದ್ದುಪಡಿಸಿದ ಮಂಡಳಿ ಮೇಲ್ವಿಚಾರಣೆಮಾಡುತ್ತಿದ್ದ ಜವಾಬ್ದಾರಿಯನ್ನು ವಿಷೇಶಅಧಿಕಾರಿ ನಿರ್ವಹಿಸಬೇಕು.

ಕಲಂ.38 ಮತ್ತು 38ಎ ಅನ್ವಯ ಕ್ರಮಜರುಗಿಸುವಾಗ ಸಂಯುಕ್ತ ಸಹಕಾರಿ ಮಂಡಳಿ ಸ್ವಾಭಾವಿಕನ್ಯಾಯದನ್ವಯ ಸಂಬಂಧ ಪಟ್ಟ ಸದಸ್ಯ ಸಹಕಾರಿಗೆ ನೋಟೀಸ್ ಜಾರಿಮಾಡಿ, ವಿವರಣೆ ಪಡೆದ ನಂತರವೇ ಕ್ರಮಜರುಗಿಸತಕ್ಕದ್ದು. ಈ ಬಗ್ಗೆ ಕಲಂ.25ರಡಿ ಜರುಗಿಸುವ ವಿಧಿ ವಿಧಾನಗಳಲ್ಲಿಯೇ ಕ್ರಮಜರುಗಿಸತಕ್ಕದ್ದು.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003